ಆ) 2004-2005ನೇ ಸಾಲಿನ ಆಯವ್ಯದ ಮೇಲಿನ ಚರ್ಚೆಗೆ ಉತ್ತರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಹಾಗೂ ಅಬ್ಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ 40 ಸದಸ್ಯರು ಆ ಕಡೆಯಿಂದ ಹಾಗೂ ಈ ಕಡೆಯಿಂದ ಮಾತನಾಡಿದ್ದಾರೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮೂರ್‍ನಾಲ್ಕು ಸದಸ್ಯರನ್ನು ಬಿಟ್ಟರೆ ಈ ಕಡೆ ಎಲ್ಲಾ ಕೊಟ್ಟಿದ್ದೇನೆ. ಹೀಗಾದರೆ ಹೇಗೆ? ದಯಮಾಡಿ ಕುಳಿತುಕೊಳ್ಳಬೇಕು. ಏನಿದು? ಸಚಿವರು ಉತ್ತರ ಹೇಳಿ.

ಶ್ರೀ ಸಿದ್ಧರಾಮಯ್ಯ : ಕ್ಲಾರಿಫಿಕೇಷನ್ ಕೇಳಬಹುದು ಕುಳಿತುಕೊಳ್ಳಿ.

ಅಧ್ಯಕ್ಷರು : ನಿಮ್ಮಲ್ಲಿ 25 ರಿಂದ 30 ಜನರಿಗೆ ಅವಕಾಶ ಕೊಟ್ಟಿದ್ದೇನೆ. ಅವರೆಲ್ಲಾ ಮಾತನಾಡಿದ್ದಾರೆ. ಈ ತರಹ ಮಾಡಿದರೆ, ನಾನು ಬಹಳ ಕಟುವಾಗಿ ನಡೆದುಕೊಳ್ಳಬೇಕಾಗುತ್ತದೆ. ಏನಿದು ಹೊಸದಾಗಿ ಬಂದಿದ್ದೇವೆ ಎಂದರೆ ಅವರ ಕಾಲಮೇಲೆ ಹತ್ತಿಕೊಂಡು ಕುಣಿದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಬಹಳ ಅವಶ್ಯಕತೆ ಇದೆ.

ಅಧ್ಯಕ್ಷರು : ಉತ್ತರವನ್ನು ದಯಮಾಡಿ ಕೊಡಿ. ಇದು ಅತೀಯಾಯಿತು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರು ಹೇಳಿದ ಮೇಲೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಕಳಿಕಳಿಯಿಂದ ಮನವಿ ಏನೆಂದರೆ ಸದನದ ಅಭಿಪ್ರಾಯ ತಮಗೆ ಗೊತ್ತಿದೆ. ದಯಮಾಡಿ 50 ಲಕ್ಷ ರೂಪಾಯಿ ಶಾಸಕರ ನಿಧಿ ಬಗ್ಗೆ ಸರ್ಕಾರ ತೀರ್ಮಾನ ಮಾಡಬೇಕು. ಮತ್ತು ಮೈಸೂರು ಜಿಲ್ಲೆ ಚಾಮರಾಜನಗರದಲ್ಲಿ ಕಬ್ಬು ಬೆಳೆಗಾರರಿಗೆ 1200 ರಿಂದ 1250 ರೂ. ರವರೆಗೆ ಕೊಡಬೇಕು. ಮತ್ತು ಶಾಸಕರಿಗೆ ನಿಧಿ 50 ಲಕ್ಷ ರೂಪಾಯಿ ಕೊಡಬೇಕೆಂದು ಹೇಳುತ್ತಾ ನಾನು ಧರಣಿ ಮಾಡುತ್ತೇನೆ.

ಮಾನ್ಯ ಸದಸ್ಯರು : ನಾವು ಒಂದು ಕೋಟಿ ರೂಪಾಯಿ ಕೇಳಿದ್ದೇವೆ. ನೀವೇಕೆ 50 ಲಕ್ಷ ರೂಪಾಯಿ ಕೇಳುತ್ತೀರಿ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಆಸನವನ್ನು ಬಿಟ್ಟು ಧರಣಿ ಮಾಡಲು ಬಾವಿಯಲ್ಲಿ ಬಂದು ನಿಂತರು)

ಗೊಂದಲ

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್ ಅವರೇ, ಇಲ್ಲಿ ಬಂದು ಕುಳಿತುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ದಯಮಾಡಿ ತಾವು ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ : ನೀವು ಸೀನಿಯರ್ ಲೀಡರ್ ಇದ್ದೀರಿ, ಅವರ ಜೊತೆ ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ನಿಮ್ಮ ಅನಿಸಿಕೆಗಳನ್ನು ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ ಹಾಗೂ ಉತ್ತರ ಆರಂಭವಾಗುವುದಕ್ಕೆ ಮೊದಲೂ ಸಹ ಹೇಳಿದ್ದೀರಿ.

ಆದರೆ ಪ್ರತಿಯೊಂದು ವಿಚಾರಕ್ಕೂ ಕೂಡ ಈ ಬಾವಿಗೆ ಬರತಕ್ಕಂಥಾದ್ದು ಒಳ್ಳೆಯ ಸಂಪ್ರದಾಯವಲ್ಲ. ನೀವು ಹಿರಿಯ ಸದಸ್ಯರಿದ್ದೀರಿ. ದಯಮಾಡಿ ತಾವು ಹೋಗಿ ತಮ್ಮ ಆಸನದಲ್ಲಿ ಕುಳಿತುಕೊಳ್ಳಿ. ಅವರು ಉತ್ತರ ಕೊಡುತ್ತಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು : ತಾವು ದಯಮಾಡಿ ಆಸನದಲ್ಲಿ ಕುಳಿತುಕೊಳ್ಳಿ.

ಗೊಂದಲ

ಅಧ್ಯಕ್ಷರು : ನೀವು ಎದುರಿಗೆ ನಿಂತುಕೊಂಡರೆ ಅವರು ಉತ್ತರವನ್ನು ಸರಿಯಾಗಿ ಹೇಳದೆ ಹೋಗಿ ಬಿಟ್ಟರು ಅಂತ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನನ್ನನ್ನು ಕರೆದು ಬಿಟ್ಟಿದ್ದೀರಿ. ದಯಮಾಡಿ ಅವಕಾಶ ಕೊಟ್ಟರೆ, ಬಹಳ ಸಮಯವಾಗಿದೆ.

ಅಧ್ಯಕ್ಷರು : ಮಾತನಾಡಿ, ದೇವೆಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಗೊಂದಲ

12.40 ಪಿ ಎಂ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 2004–05ನೇ ಸಾಲಿಗೆ ನಾನು ಏನು ಆಯವ್ಯಯವನ್ನು ಮಂಡಿಸಿದ್ದೇನೆ, ಆ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಸುಮಾರು 40 ಜನ ಸದಸ್ಯರು ಭಾಗವಹಿಸಿ ಅನೇಕ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೆಯೇ ಕೆಲವು ಸದಸ್ಯರು ಟೀಕೆಗಳನ್ನೂ ಕೂಡ ಮಾಡಿದ್ದಾರೆ. ಆಯವ್ಯಯವನ್ನು ಎಲ್ಲರೂ ಕೂಡ ಸ್ವಾಗತ ಮಾಡಿ ಎಂದು ನಾನು ಬಯಸಿಲ್ಲ, ಮಾಡಬೇಕು ಎಂದೂ ಬಯಸಿಲ್ಲ. ಆದರೆ ಅವರ ಟೀಕೆಗಳು, ಸಲಹೆಗಳೆಲ್ಲವನ್ನೂ ಕೂಡ ನಾನು ಸ್ವಾಗತ ಮಾಡುತ್ತಿದ್ದೇನೆ.

(ವಾಟಾಳ್ ನಾಗರಾಜ್‌ರವರು ಸದಸ್ಯರು ಪೀಠದ ಮುಂದೆ ನಿಂತು ಧರಣಿ ಮಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರನ್ನು ವಾಪಸ್ಸು ಕಳುಹಿಸಿ. 50 ಲಕ್ಷ ರೂ. ಶಾಸಕರ ನಿಧಿಯನ್ನು ಕೊಡಿ ಎಂದು ಅವರಿಗೆ ಕನ್‌ವಿನ್ಸ್ ಮಾಡುವ ಶಕ್ತಿ ವಾಟಾಳರಿಗಿದೆ. ಅವರು ಅದನ್ನೂ ಮಾಡುವುದಿಲ್ಲ. ಈಗ ನಾವು ಇವರಿಗೆ ಏನು ಮಾಡಬೇಕು ಎನ್ನುವುದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅವರು ಇಲ್ಲಿಗೆ ಬಂದರೆ, ಅವರ ಶಕ್ತಿ ಹೆಚ್ಚಾಗುತ್ತದೆ ಎಂದು ಹಾಗೆ ಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : (ವಾಟಾಳ್ ನಾಗರಾಜ್‌ರವರನ್ನುದ್ದೇಶಿಸಿ) ನೀವು ಅವರಿಗೆ ಅಡ್ಡವಾಗಿ ನಿಂತುಕೊಳ್ಳಬೇಡಿ, ಸ್ವಲ್ಪ ಈ ಕಡೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಬೇಡಿಕೆ ಇಲ್ಲಿರುವ ಎಲ್ಲಾ 224 ಜನರ ಬೇಡಿಕೆಯಾಗಿದೆ, ಅದು 224 ಜನರಿಗೂ ಬೇಕಾಗಿದೆ, ಅವರು ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ನಾವು ಒಂದೇ ಜಿಲ್ಲೆಯವರಲ್ಲವೇ? ಅದಕ್ಕಾಗಿ ಹತ್ತಿರದಲ್ಲಿರೋಣ, ಎಂದು ಬಹಳ ಪ್ರೀತಿಯಿಂದ ಬಂದಿದ್ದಾರೆ ಇಲ್ಲಿಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು 50 ಲಕ್ಷ ರೂಪಾಯಿಗಳ ಶಾಸಕರ ನಿಧಿಯನ್ನು ಅನೌನ್ಸ್ ಮಾಡಿ.

ಶ್ರೀ ಸಿದ್ಧರಾಮಯ್ಯ : ನಾನು ವಾಟಾಳ್ ನಾಗರಾಜ್‌ರವರಿಗೆ ಮನವಿ ಮಾಡುತ್ತೇನೆ, ಅವರ ಬಹಳ ಹಿರಿಯ ಸದಸ್ಯರು, ಅವರು ದಯಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಆರ್. ಅಶೋಕ್ : ಅವರ ಬೇಡಿಕೆಯಿದೆಯಲ್ಲಾ, ಅದರ ಬಗ್ಗೆಯೂ ಹೇಳಿಬಿಡಿ. ಅವರ ಬೇಡಿಕೆಯ ಬಗ್ಗೆ ಹೇಳಿಬಿಟ್ಟರೆ ಅವರು ವಾಪಸ್ಸು ಬರುತ್ತಾರೆ.

ಶ್ರೀ ಸಿದ್ಧರಾಮಯ್ಯ : ನಾನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ, ನೀವು ಸುಮ್ಮನಿರಿ ಅಶೋಕ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಿಷಯದಲ್ಲಿ ಪ್ರತಿಪಕ್ಷದವರೆಲ್ಲಾ ಏನು ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ನಾವೆಲ್ಲಾ ಒಟ್ಟಾಗಿ ಸೇರಿ ತೆಗೆದುಕೊಳ್ಳೋಣ. ನೀವು ಈಗ ನಿಮ್ಮ ಸ್ಥಾನಕ್ಕೆ ಬನ್ನಿ. ನಂತರ ನಾವೆಲ್ಲರೂ ವೆಲ್‌ಗೆ ಬರುತ್ತೇವೆ. ಈಗ ನೀವು ಇಲ್ಲಿಗೆ ಬನ್ನಿ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಉಪನಾಯಕರು ಮಾತನಾಡುವಾಗ ಅವರಿಗೆ, (ವಾಟಾಳರಿಗೆ) ವಯಸ್ಸಾಗಿದೆ ಎಂದುಬಿಟ್ಟರು. ಆ ಕಾರಣದಿಂದ, ಇಲ್ಲ, ನನಗೆ ವಯಸ್ಸಾಗಿಲ್ಲ, ನಾನಿನ್ನೂ ಯುವಕ, ನಿಂತುಕೊಂಡು ತೋರಿಸುತ್ತೇನೆ ಎನ್ನುವುದೂ ಇರಬಹುದು, ಬಹುಶಃ ವಾಟಾಳ್ ನಾಗರಾಜ್‌ರವರು ಇಲ್ಲಿ ನಿಂತುಕೊಳ್ಳಲು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಉತ್ತರ ಕೊಟ್ಟಮೇಲೆ ಬೇಕಾದರೆ ನಾವೆಲ್ಲರೂ ಸೇರಿ ಧರಣಿ ಮಾಡೋಣ. ಈಗ ದಯವಿಟ್ಟು ಬನ್ನಿ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಸಿದ್ಧರಾಮಯ್ಯನವರು ನಿಮ್ಮನ್ನು ಕರೆಯಲಿಲ್ಲ, ನಾವು ಕರೆಯುತ್ತಿದ್ದೇವೆ, ಬಂದುಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉತ್ತರ ಕೊಡುವ ಮೊದಲು ಅದು ಸರಿಯಲ್ಲ. ದಯವಿಟ್ಟು ಬನ್ನಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರೆಡ್ಡಿಯವರೇ ಮತ್ತು ಮಾಧುಸ್ವಾಮಿಯವರೇ, ನೀವು ಅಲ್ಲೇ ಇದ್ದರೆ ಹೇಗೆ ಸರಿಹೋಗುತ್ತದೆ. ನೀವು ಇಲ್ಲಿ ಅವರ ಜೊತೆ ಸಹಕಾರ ಕೊಡಬೇಕು, ಇಲ್ಲದಿದ್ದರೆ ಅವರನ್ನೂ ಒಳಗೆ ಕರೆಯಬೇಕು.

ಶ್ರೀ ಜೆ.ಸಿ ಮಾಧುಸ್ವಾಮಿ : ಉತ್ತರ ಕೊಡುವ ಮೊದಲೇ ಇದೆಲ್ಲಾ ಅಲ್ಲ. ದಯಮಾಡಿ ಬನ್ನಿ ಎಂದೇ ನಾವು ಕೇಳುತ್ತಿದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಈ ಸದನದ ಅತ್ಯಂತ ಹಿರಿಯ ಸದಸ್ಯರು. ನಾವ್ಯಾರೂ ಅವರಿಗೆ ನಿಯಮಾವಳಿಗಳ ಬಗ್ಗೆ, ಕಲಾಪಗಳ ಬಗ್ಗೆ ಹೇಳಿಕೊಡಬೇಕಾದ ಅಗತ್ಯವಿಲ್ಲ. ಬಜೆಟ್ ಮೇಲೆ ಚರ್ಚೆ ಪೂರ್ಣವಾಗಿದೆ. ಅವರೆಲ್ಲಾ ಟೀಕೆಗಳಿಗೆ, ಪ್ರಶಂಸೆಗಳಿಗೆ, ಅವರು ಮಾಡಿರತಕ್ಕಂಥ ಪ್ರಪೋಸಲ್ಸ್‌ಗೆ ಉತ್ತರ ಕೊಡತಕ್ಕಂಥಾದ್ದು ಹಣಕಾಸು ಸಚಿವರ ಹಕ್ಕು. ಅವರ ಉತ್ತರ ಕೊಟ್ಟಾದ ಮೇಲೆ, ತಮ್ಮ ಡಿಮ್ಯಾಂಡ್ಸ್ ಏನಿದೆ, ಅದನ್ನು ಕೇಳುವುದು, ಪಡೆದುಕೊಳ್ಳುವುದು, ಅದನ್ನು ಅವರು ಒಪ್ಪಿಕೊಳ್ಳದಿದ್ದರೆ, ಪ್ರತಿಭಟನೆ ಮಾಡಬಹುದು. ಆದರೆ ಉತ್ತರ ಹೇಳುವುದಕ್ಕೆ ಮೊದಲೇ ಪ್ರತಿಭಟನೆ ಮಾಡುವುದು ಯಾವ ಧರ್ಮ? ಯಾವ ನ್ಯಾಯ? ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ,....

ಶ್ರೀ ಜೆ.ಸಿ. ಮಾಧುಸ್ವಾಮಿ : ಉತ್ತರ ಕೊಡುವವರೆಗೂ ಅವರು ಇಲ್ಲಿ ಬರಬೇಕು. ಆಮೇಲೆ ಮಾಡುವಿರಂತೆ ಬನ್ನಿ. ಈಗ ಬೇಡ. ದಯವಿಟ್ಟು ನೀವು ಇಲ್ಲಿ ಬರಬೇಕು. ಇದು ಸತ್‌ಸಂಪ್ರದಾಯವಲ್ಲ, ಅವರು ಉತ್ತರ ಕೊಡಲಿ, ನೀವು ದಯವಿಟ್ಟು ಬನ್ನಿ ಸಾರ್.

ಶ್ರೀ ಎಸ್. ರಾಜೇಂದ್ರನ್ : ಅವರು ಉತ್ತರ ಕೊಟ್ಟಮೇಲೆ ನಾವೆಲ್ಲರೂ ಧರಣಿ ಮಾಡೋಣ. ಈಗ ನೀವು ಬನ್ನಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉತ್ತರ ಕೊಡಲಿ ಇಲ್ಲಿ ಬನ್ನಿ ಸಾರ್. ಮಾನ್ಯ ರಮೇಶ್ ಕುಮಾರ್‌ರವರು, ನಾವು ಎಲ್ಲರೂ ಹೇಳುತ್ತಿದ್ದೇವೆ, ಬನ್ನಿ ಇಲ್ಲಿಗೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ವಾಟಾಳರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ನಿನ್ನೆ ಮೊನ್ನೆಯೆಲ್ಲಾ ಕುಳಿತು ಮಾತನಾಡಿದ್ದೇವೆ, ನಾವು ಗೆದ್ದು ಬಂದಹಾಗೆಲ್ಲಾ ಎರಡು ಜವಾಬ್ದಾರಿ ನಮಗೆ ಇರುತ್ತದೆ, ನಮಗೇ ಗೊತ್ತಿಲ್ಲದಂತೆ ನಾವು ಕಿರಿಯರಿಗೆ ಮಾರ್ಗದರ್ಶಕರೂ ಆಗಬೇಕಾಗುತ್ತದೆ ಮತ್ತು ಈ ಸದನ ಸರಿಯಾದ ಹಾದಿಯಲ್ಲಿ ಹೋಗುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯೂ ನಮ್ಮದಾಗಿರುತ್ತದೆ. ತಮಗೆ ನಾನು ಏನೂ ಉಪದೇಶ ಮಾಡಲು ಬರುವುದಿಲ್ಲ. ಏಕೆಂದರೆ, ನಿಮ್ಮ ಹತ್ತಿರ ಅನೇಕ ವಿಚಾರಗಳಿಗೆ ನಾನು ಸಲಹೆ ಸೂಚನೆಗೆ ಬರುತ್ತೇನೆ. ಉತ್ತರ ಕೊಡುವುದು ಅವರ ಹಕ್ಕು. ಅವರು ಉತ್ತರ ಕೊಡಲಿ. ತಮ್ಮದೇನೆಲ್ಲಾ ಬೇಡಿಕೆಗಳಿವೆ, ಅದಕ್ಕೆ ನಾನೂ ತಮ್ಮೊಂದಿಗಿರುತ್ತೇನೆ, ಆಮೇಲೆ ನಾವು ಪ್ರತಿಭಟನೆ ಮಾಡೋಣ. ಉತ್ತರ ಹೇಳುವುದಕ್ಕೆ ಮೊದಲು ಇದು ಸರಿಯಲ್ಲ. ಅವರನ್ನು ಶರತ್ತುಗಳಿಗೆ ಒಳಪಡಿಸತಕ್ಕಂಥಾದ್ದು ಸಾಧುವಲ್ಲ, ಅದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಲಕ್ಷಣವಲ್ಲ. ನಿಮಗೆ ನಾನು ಹೇಳಿಕೊಡಬೇಕಾಗಿಲ್ಲ.

(ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಇಂಥವುಗಳನ್ನೆಲ್ಲಾ ನಡೆಯಲು ಬಿಟ್ಟಿಲ್ಲ. ಅಧ್ಯಕ್ಷರು ಒಳ್ಳೆಯವರು ಎಂದು ಹೇಳಿ ನೀವು ಈ ರೀತಿ ಮಾಡುವುದು ಸರಿಯಲ್ಲ.

(ಧರಣಿನಿರತ ವಾಟಾಳ್ ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಬಾವಿಯಲ್ಲಿ ನಿಂತು ಮಾತನಾಡುವುದು ತಪ್ಪು. ಸದನದ ನಿಯಮಾವಳಿ ಗೊತ್ತಿದ್ದೂ ಕೂಡ ಹಿರಿಯ ಸದಸ್ಯರು ತಪ್ಪು ಮಾಡುವುದು ಸರಿಯಲ್ಲ.

ಅಧ್ಯಕ್ಷರು : ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ ನೀವು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಬೇಡಿಕೆಗೆ ಅವರು ಒಪ್ಪುವುದಿಲ್ಲ ಎಂದು ನೀವು ಹೇಗೆ ಭಾವಿಸಿದಿರಿ? ಒಂದು ವೇಳೆ, ನೀವು ಕೇಳಿದ್ದಕ್ಕೆ ಅವರು ಒಪ್ಪಿಕೊಳ್ಳಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಸಭಾಧ್ಯಕ್ಷನಾಗಿದ್ದಾಗ, ಅವರಿಗೆ ದಿನಕ್ಕೊಂದು ಸಲ ಧರಣಿ ಮಾಡಲು ಅವಕಾಶ ಕೊಡುತ್ತಿದ್ದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಾಟಾಳರೇ, ನಾವೆಲ್ಲರೂ ಹೇಳುತ್ತಿದ್ದೇವೆ, ದಯವಿಟ್ಟು ಬನ್ನಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಫೈನ್ಯಾನ್ಸ್ ಮಿನಿಸ್ಟರ್‌ಗೆ ನೀವು ಅಡ್ಡಿ ಮಾಡಬಾರದು. ದಯವಿಟ್ಟು ಬನ್ನಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಬರದಿದ್ದರೆ, ನಾವು ಅಲ್ಲಿಗೆ ಬಂದು ಎಳೆದುಕೊಂಡು ಬರುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ನಾವು ಎಳೆದುಕೊಂಡು ಬರುತ್ತೇವಷ್ಟೇ. ಈಗ ಬನ್ನಿ ಸಾರ್, ಅವರು ಉತ್ತರ ಹೇಳಲಿ, ಆಮೇಲೆ ನೀವು ಧರಣಿ ಮಾಡುವಿರಂತೆ. ಅಕಸ್ಮಾತ್ ನಿಮ್ಮ ಬೇಡಿಕೆಗೆ ಅವರು 'ಹೂ' ಎಂದುಬಿಟ್ಟರೆ ಏನು ಮಾಡುತ್ತೀರಾ?

ಶ್ರೀ ಕೆ. ಶ್ರೀನಿವಾಸಗೌಡ : ಇಷ್ಟೆಲ್ಲಾ ಮೆಂಬರ್ಸ್ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರೆ. ತಾವು ಇದಕ್ಕೆ ಮರ್ಯಾದೆ ಕೊಟ್ಟು ದಯವಿಟ್ಟು ತಾವು ಅಲ್ಲಿಗೆ ಬನ್ನಿ. ನಿಮಗೆ ನಾವ್ಯಾರೂ ಕೂಡ ಉಪದೇಶ ಮಾಡುವಂಥ ಪರಿಸ್ಥಿತಿಯಲ್ಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಫೈನ್ಯಾನ್ಸ್ ಮಿನಿಸ್ಟರ್, ಸರ್ಕಾರ ನಡೆಸುವವರು, ದಯಮಾಡಿ ಇಲ್ಲಿ ಬನ್ನಿ, ಅವರು ಉತ್ತರ ಕೊಡಲಿ.

ಶ್ರೀ ಅರಗ ಜ್ಞಾನೇಂದ್ರ : ಸಿದ್ಧರಾಮಯ್ಯನವರು ಎಂದರೆ ಅದೇನು ಕಲ್ಲೇ? ಅವರಿಗೆ ಇಷ್ಟು ಜನ ಹೇಳಿದ್ದಾರೆ, ಅವರಿಗೆ ಆ ಭಾವನೆ ಇದೆ, ಅವರು ಅರ್ಥಮಾಡಿಕೊಳ್ಳುತ್ತಾರೆ, ಅವರು ಅದನ್ನು ಖಂಡಿತಾ ಹೇಳುತ್ತಾರೆ, ನೀವು ಬನ್ನಿ ಈಗ.

ಶ್ರೀ ನೆ.ಲ. ನರೇಂದ್ರಬಾಬು : ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಸಿದ್ಧರಾಮಯ್ಯ : ಪಾಯಿಂಟ್ ಆಫ್ ಆರ್ಡರ್ ಬೇಡಪ್ಪಾ, ನೀವು ಕೂರಿ. ಪಾಯಿಂಟೂ ಬೇಡ, ಆರ್ಡರ್ರೂ ಬೇಡ.

ಅಧ್ಯಕ್ಷರು : ಸಿದ್ಧರಾಮಯ್ಯನವರೇ, ನೀವು ಮುಂದುವರೆಸಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೊಬ್ಬರು ಆಯವ್ಯಯದ ಮೇಲೆ ಮಾತನಾಡಬೇಕೆಂದಿದ್ದರು. ನನ್ನ ಉತ್ತರ ಆದಮೇಲೆ, ದಯಮಾಡಿ ತಾವು ಏನಾದರೂ ಕೇಳುವುದಿದ್ದರೆ ಕ್ಲಾರಿಫಿಕೇಶನ್ ಮೂಲಕ ಕೇಳಬಹುದು, ನಾನು ತಮಗೆ ಉತ್ತರ ಕೊಡುತ್ತೇನೆ. ತಾವೇನು ಬೇಸರ ಮಾಡಿಕೊಳ್ಳಬೇಕಾದಂಥ ಅಗತ್ಯವಿಲ್ಲ, ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ವಿರೋಧಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರಿಂದ ಹಿಡಿದು, ಫ್ರಂಟ್‌ನಲ್ಲಿರತಕ್ಕಂಥ ಎಲ್ಲಾ ಫ್ಲೋರ್ ಲೀಡರ್‌ಗಳು, ಡೆಪ್ಯುಟಿ ಲೀಡರ್‌ಗಳು, ಆ ಕಡೆ ಇರತಕ್ಕಂಥ ಸದಸ್ಯರುಗಳು, ಈ ಕಡೆ ಇರತಕ್ಕಂಥ ಸದಸ್ಯರುಗಳು ಬಹಳ ಜನ ಮಾತನಾಡಿದ್ದಾರೆ. ಒಂದು ಸಂತೋಷವೆಂದರೆ, ಹೆಚ್ಚು ಜನ ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥಾದ್ದು. ನನಗಿರತಕ್ಕಂಥ ಜ್ಞಾಪಕಶಕ್ತಿಯ ಮೇಲೆ ಹೇಳುವುದಾದರೆ, ಬಜೆಟ್ ಮೇಲಿನ ಚರ್ಚೆಯಲ್ಲಿ ಇಷ್ಟೊಂದು ಜನ ಸದಸ್ಯರು ಅಂದರೆ 40 ಜನ ಭಾಗಿಯಾಗುತ್ತಿದ್ದುದು ಅಪರೂಪ. ಈ ಸಲ ಅಧ್ಯಕ್ಷರು ಬಹಳ ಧಾರಾಳವಾಗಿ ಹೊಸಬರಿಗೂ ಕೂಡ ಅವಕಾಶಗಳನ್ನು ಕೊಟ್ಟಿದ್ದಾರೆ. ಎಲ್ಲರಿಗೂ ಮಾತನಾಡಬೇಕು ಎನ್ನತಕ್ಕಂಥ ಆಸೆ ಇರುತ್ತದೆ. ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಬೇಕು ಎಂದು ಹೊಸ ಸದಸ್ಯರಾಗಿ ಬಂದಿರುವವರಿಗೆ ಉತ್ಸಾಹ ಇರುತ್ತದೆ. ಆದರೆ 224 ಸದಸ್ಯರಿಗೂ ಕೂಡ ಭಾಗವಹಿಸಲು ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ನಮಗಿರತಕ್ಕಂಥ ಇತಿಮಿತಿಗಳ ಕಾರಣದಿಂದ, ಎಲ್ಲರಿಗೂ ಪಾರ್ಟಿಸಿಪೇಟ್ ಮಾಡಬೇಕು ಎನ್ನುವ ಆಸೆ ಇದ್ದರೂ, ಎಲ್ಲರಿಗೂ ಅವಕಾಶ ಮಾಡಲು ಆಗುವುದಿಲ್ಲ. ಆದರೂ ಕೂಡ 40 ಜನ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಮಾತನಾಡಿದಂಥ ಅನೇಕ ಜನ

ಸದಸ್ಯರು ಈ ಮುಂಗಡ ಪತ್ರವನ್ನು ಹೆಚ್ಚು ಕಡಿಮೆ ಸ್ವಾಗತ ಮಾಡಿದ್ದಾರೆ. ಮತ್ತು ನನ್ನ ಬಗ್ಗೆ ಕೆಲವು ಒಳ್ಳೆಯ ಮಾತುಗಳನ್ನೂ ಕೂಡ ಆಡಿದ್ದಾರೆ. ವಿರೋಧಪಕ್ಷದಲ್ಲಿರತಕ್ಕಂಥ ಕೆಲವು ಮಾನ್ಯ ಸದಸ್ಯರುಗಳು ವಿರೋಧ ಮಾಡಿದ್ದಾರೆ, ಟೀಕೆಗಳನ್ನೂ ಮಾಡಿದ್ದಾರೆ. ಅವರು ಟೀಕೆ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಅದರ ಜೊತೆಗೇ, ಕೆಲವು ಬಹಳ ಉಪಯುಕ್ತವಾದ ಸಲಹೆಗಳನ್ನೂ ಕೂಡ ಕೊಟ್ಟಿದ್ದೀರಿ. ಅವುಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು, ಅವುಗಳನ್ನೆಲ್ಲಾ ಸರಿಪಡಿಸತಕ್ಕಂಥ ಪ್ರಯತ್ನವನ್ನು ಮಾಡೋಣ. ಭಾಗವಹಿಸಿದಂಥ ಎಲ್ಲಾ ಮಾನ್ಯ ಸದಸ್ಯರಿಗೆ ಮತ್ತು ಉಳಿದವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇನೆ. ಮತ್ತೆ ಮಾನ್ಯ ಯಡಿಯೂರಪ್ಪನವರು, ಶ್ರೀ ಅರಗ ಜ್ಞಾನೇಂದ್ರರವರು ವಿಶೇಷವಾಗಿ ಪತ್ರಿಕೆಗಳು ನಿಮಗೆ ಬಹಳ ಪ್ರಚಾರ ಕೊಟ್ಟುಬಿಟ್ಟಿದ್ದಾರೆ, ಅಗತ್ಯಕ್ಕಿಂತ ಹೆಚ್ಚಿನ ರೀತಿಯಲ್ಲಿ ಕೊಟ್ಟಿದ್ದಾರೆ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಬಹುಶಃ ಅವರು 4ನೇ ಆಧಾರಸ್ಥಂಭ ಎಂದು ನಾವೆಲ್ಲಾ ಒಪ್ಪಿಕೊಂಡುಬಿಟ್ಟಿದ್ದೇವೆ, ಅವರು ಸ್ವತಂತ್ರವಾಗಿ ಕೆಲಸ ಮಾಡುತ್ತಾರೆಂದೂ ಕೂಡ ನಾವು ಒಪ್ಪಿಕೊಂಡುಬಿಟ್ಟಿದ್ದೇವೆ, ಅವರು ಸ್ವತಂತ್ರವಾಗಿ ಅವರ ಅಭಿಪ್ರಾಯಗಳನ್ನು ಹೇಳಿದ್ದಾರೆ ಎನ್ನತಕ್ಕಂಥದ್ದು ಬಹುಶಃ ನಿಮಗೆ ಗೊತ್ತಿದೆ, ಆ ಭಾವನೆ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ, ಆದ್ದರಿಂದ ಅವರು ಅವರ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಿಮ್ಮ ದೃಷ್ಟಿಯಲ್ಲಿ ಅದು ಹೆಚ್ಚಾಯಿತೆಂದು ಕಾಣಿಸಿದರೆ ಅದಕ್ಕೆ ನಾನು ಜವಾಬ್ದಾರನಲ್ಲ, ನನ್ನ ದೃಷ್ಟಿಯಲ್ಲಿ ಅವರು ವಾಸ್ತವಿಕವಾದಂಥ ವಿಚಾರಗಳನ್ನು ಮತ್ತು ವಾಸ್ತವಿಕವಾದಂಥ ಅವರ ಅಭಿಪ್ರಾಯಗಳನ್ನು ಬರೆದಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ ಮತ್ತು ಎಲ್ಲರೂ ಕೂಡ ಹಾಗೆಯೇ ಭಾವಿಸಿ–ಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. (ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿಯಾಗಿ ಮೇಜು ಕುಟ್ಟುವುದಕ್ಕೆ ನೀವು ಹೇಳಿಲ್ಲ.

ಶ್ರೀ ಸಿದ್ಧರಾಮಯ್ಯ : ನಾವೇನೋ ಸರಿಯಾಗಿ ಮೇಜು ಬಡಿಯುವುದಕ್ಕೆ ಹೇಳಿಲ್ಲ. Atleast ನೀವಾದರೂ ಆ ಕಡೆಯವರಿಗೆ ಸರಿಯಾಗಿ ಬಡಿಯುವುದಕ್ಕೆ ಹೇಳಿ. ಈಗ Editorial ಕಾಲಂಗಳಲ್ಲಿ ಬರೆಯುವುದು ಅದು ಅವರ ಸ್ವತಂತ್ರ ಅಭಿಪ್ರಾಯ, ವರದಿ ಮಾಡುವವರು ಇಲ್ಲಿ ಏನೇನು ನಡೆಯುತ್ತದೆ ಎನ್ನತಕ್ಕಂಥದ್ದನ್ನು ಸ್ವತಂತ್ರವಾಗಿ ವರದಿ ಮಾಡುತ್ತಾರೆ. ಈ ಆಯವ್ಯಯ ಏನಿದೆ ಇದು 8 ತಿಂಗಳಿಗೆ ಮಂಡಿಸಿದಂಥ ಆಯವ್ಯಯವಾಗಿದೆ. ಇದು ಇಡೀ ಒಂದು ವರ್ಷಕ್ಕೆ ಇರತಕ್ಕಂಥ ಆಯವ್ಯಯವೇನೂ ಅಲ್ಲ. 8 ತಿಂಗಳಿಗೆ ಸಮ್ಮಿಶ್ರ ಸರ್ಕಾರದ ಚೊಚ್ಚಲು ಆಯವ್ಯಯ ಇದಾಗಿದೆ. ಈ ಆಯವ್ಯಯದ ಮೂಲಕ ಈ ಸಮ್ಮಿಶ್ರ ಸರ್ಕಾರದ ದೃಷ್ಟಿಕೋನ ಸರಿಯಾಗಿದೆ, ಮುಂದಾಲೋಚನೆ ಸರಿಯಾಗಿದೆ, ಈ ರಾಜ್ಯದ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಪ್ರಯತ್ನ ಈ ಸಮ್ಮಿಶ್ರ ಸರ್ಕಾರ ಮಾಡಿದೆ ಎನ್ನತಕ್ಕಂಥದ್ದನ್ನು ಅವರು ಹೇಳಿದ್ದಾರೆ. ರೈತರ ಪರವಾಗಿದೆ, ಬಡವರ ಪರವಾಗಿದೆ ಸಾಮಾನ್ಯ ಜನರ ಪರವಾಗಿದೆ ಎನ್ನತಕ್ಕಂಥ ಮಾತುಗಳನ್ನು ಏನು ಹೇಳಿದ್ದಾರೆ, ಅದರಲ್ಲಿ ಸತ್ಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ ಮತ್ತು ಇವತ್ತು ಕರ್ನಾಟಕದಲ್ಲಿ ಸಾಮಾನ್ಯ ಜನರು ಕೂಡ ಅದೇ ತರಹದ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದಾರೆ. ಹಾಗೆಂದು ಹೇಳಿದ ತಕ್ಷಣ ಪವಾಡ ಮಾಡಿಬಿಟ್ಟಿದ್ದೇವೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಬಹಳ ದೊಡ್ಡ ಆರ್ಥಿಕ ತಜ್ಞರೂ ಕೂಡ ಒಪ್ಪಿಕೊಂಡಿದ್ದರೆ. ಡಾ: ನಂಜುಂಡಪ್ಪ ಇರಬಹುದು, ಅಂಕಣಕಾರರುಗಳಾದ ಶ್ರೀ ಸುಬ್ಬರಾವ್

ಇರಬಹುದು, ಹೆಚ್.ಎಸ್.ಕೆ. ರವರು ಇರಬಹುದು. ಹೀಗೆ ಬೇರೆ ಬೇರೆ ಅಂಕಣಕಾರರು ಇರಬಹುದು, ಡಾ: ತಿಮ್ಮಯ್ಯನವರು ಇರಬಹುದು, ಅನಂತರ ಶ್ರೀ ಜೋಶಿಯವರು ಇರಬಹುದು, ಶ್ರೀ ಪಾಂಡೆಯವರು ಇರಬಹುದು, ಹೀಗೆ ಅನೇಕ ಜನರು ಸರಿಯಾದ ದಾರಿಯಲ್ಲಿ ಈ ಆಯವ್ಯಯದ ಮೂಲಕ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿರತಕ್ಕಂತ ಸಮ್ಮಿಶ್ರ ಸರ್ಕಾರ ಸರಿಯಾದ ಹೆಜ್ಜೆಯನ್ನು ಇಟ್ಟಿದೆ ಎಂದು ಹೇಳಿದ್ದಾರೆ. ಇದು ನನ್ನ ಅಭಿಪ್ರಾಯವಲ್ಲ. ಅವರೆಲ್ಲಾ ಹೇಳಿರತಕ್ಕಂಥ ಅಭಿಪ್ರಾಯವನ್ನು ನಾನು ಇಲ್ಲಿ ಪುನರುಚ್ಚಾರ ಮಾಡಿದ್ದೇನೆ ಅಷ್ಟೆ. ಅದನ್ನು ಅಷ್ಟಕ್ಕೇ ನಿಲ್ಲಿಸೋಣ. ಆದ್ದರಿಂದ ಅಭಿಪ್ರಾಯಗಳನ್ನು ವ್ಯಕ್ತಮಾಡಿರತಕ್ಕಂಥ ಎಲ್ಲಾ ಆರ್ಥಿಕ ತಜ್ಞರಿಗೆ, ಅಂಕಣಕಾರರಿಗೆ, ಮಾಧ್ಯಮದವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಈಗ ಬಹಳ ಮುಖ್ಯವಾಗಿ ಮಾನ್ಯ ಯಡಿಯೂರಪ್ಪನವರು ಮತ್ತು ಬಹಳಷ್ಟು ಬಿಜೆಪಿಯ ಎಲ್ಲರೂ ಕೂಡ ಮಾತನಾಡುತ್ತಾ-ಹಿಂದೆ ಎಲ್ಲಾ ಜನತಾದಳದವರು ಕಾಂಗ್ರೆಸ್ ಅನ್ನು ಬಹಳ ಟೀಕೆ ಮಾಡಿದ್ದಿರಿ, 'ಒಂದು ಅಪವಿತ್ರ ಮೈತ್ರಿ ಮಾಡಿಕೊಂಡುಬಿಟ್ಟಿದ್ದೀರಿ, ಇದೊಂದು ಅಪವಿತ್ರ ಮೈತ್ರಿ ನೀವು ಮತ್ತು ಕಾಂಗ್ರೆಸ್‌ನವರು ಸೇರಿ ಈ ಸಮ್ಮಿಶ್ರ ಸರ್ಕಾರ ಮಾಡಿದ್ದೀರಲ್ಲಾ' ಎಂದು ಅವರ ಮಾತಿನಲ್ಲಿ ಹೇಳಿದ್ದಾರೆ. ಇವತ್ತು ಇಡೀ ರಾಷ್ಟ್ರದಲ್ಲಿ ಸಮ್ಮಿಶ್ರ ಸರ್ಕಾರದ ಯುಗ ಪ್ರಾರಂಭವಾಗಿದೆ. ಕಳೆದ 10 ವರ್ಷದಿಂದ ಸಮ್ಮಿಶ್ರ ಸರ್ಕಾರದ ಯುಗ ಪ್ರಾರಂಭವಾಗಿದೆ. ಭಾರತೀಯ ಜನತಾಪಕ್ಷದ ಶ್ರೀಮಾನ್ ವಾಜಪೇಯಿ ನೇತೃತ್ವದಲ್ಲಿ ಎರಡು ಸಲ ಸರ್ಕಾರ ರಚನೆ ಮಾಡಿದ್ದರು, ಆಗ 23 ಪಕ್ಷಗಳು ಸೇರಿ ಮಾಡಿದ್ದರು, ಒಂದು ಕಾಲದಲ್ಲಿ ಇವರನ್ನು ಹಿಗ್ಗಾಮುಗ್ಗ ಬೈಯ್ದಿದ್ದವರೂ ಸಹ ಈ 23 ಪಕ್ಷಗಳಲ್ಲಿ ಸೇರಿಕೊಂಡಿದ್ದರು. ಅದಕ್ಕಾಗಿ ಅದನ್ನು ಪವಿತ್ರ ಎಂದು ಹೇಳಬೇಕೋ ಅಥವಾ ಅಪವಿತ್ರ ಎಂದು ಹೇಳಬೇಕೋ ನನಗಂತೂ ಗೊತ್ತಿಲ್ಲ. ಆದ್ದರಿಂದ ಇದು ಅಪವಿತ್ರ ಮೈತ್ರಿ ಎಂದು ವ್ಯಾಖ್ಯಾನ ಮಾಡುವುದರಲ್ಲಿ ಯಾವುದೇ ತಿರುಳು ಇಲ್ಲ. ರಾಷ್ಟ್ರದಲ್ಲಿ ಸಮ್ಮಿಶ್ರ ಸರ್ಕಾರ ಆಗಿದೆ, ಅನೇಕ ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರ ಬಂದಿದ್ದು ಇವತ್ತು ಅವು ಕೆಲಸ ಮಾಡುತ್ತಿವೆ. ಕೇರಳದಲ್ಲಿ ಇದೆ. ಪಶ್ಚಿಮ ಬಂಗಾಳದಲ್ಲಿ ಇದೆ, ಮಹಾರಾಷ್ಟ್ರದಲ್ಲಿದೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಇದೆ, ಒರಿಸ್ಸಾದಲ್ಲಿ ಇದೆ, ಆದರೆ ಕರ್ನಾಟಕಕ್ಕೆ ಮಾತ್ರ ಈ ಸಮ್ಮಿಶ್ರ ಸರ್ಕಾರ ಹೊಸದು. ಈ ಸಮ್ಮಿಶ್ರ ಸರ್ಕಾರದ ಪ್ರಯೋಗ ಕರ್ನಾಟಕದಲ್ಲಿ ಹೊಸದು. ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಆಗಿರುವುದೂ ಕೂಡ ಇದೇ ಮೊದಲನೇ ಬಾರಿಯಾಗಿದೆ. ಇದಕ್ಕೆ ನೀವು ನಾವು ಯಾರೂ ಕಾರಣರಲ್ಲ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಈ ರಾಜ್ಯದ ಜನತೆ ಯಾವುದೇ ಒಂದು ಪಕ್ಷದ ಪರವಾಗಿ ತೀರ್ಪು ಕೊಡಲಿಲ್ಲ. ನಿಮಗೂ ಕೊಡಲಿಲ್ಲ. ನಮಗೂ ಕೊಡಲಿಲ್ಲ. ಈಗ ನಮ್ಮ ಪಾರ್ಟನರ್ ಆಗಿರತಕ್ಕಂಥ ಕಾಂಗ್ರೆಸ್‌ನವರಿಗೂ ಕೂಡ ಕೊಡಲಿಲ್ಲ, ಹಾಗಾಗಿ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು. ಸಮ್ಮಿಶ್ರ ಸರ್ಕಾರ ರಚನೆ ಮಾಡುವುದಕ್ಕೆ ನಿಮಗೆ ಸಪೋರ್ಟ್ ಮಾಡುತ್ತೇವೆ ಎಂದು ಬಿ.ಜೆ.ಪಿ.ಯವರು ಕೂಡ ಹೇಳುತ್ತಿದ್ದರು! ಆದರೆ ನಾವು ನಿಮ್ಮ ಜೊತೆ ಬರುವ ಹಾಗಿಲ್ಲವೇ? ಅದೇ ನಮಗೆ ಇರುವ ತಾಪತ್ರಯ. ಅವರ ಜೊತೆ ಹೋಗುವ ಹಾಗಿಲ್ಲ. ಆವಾಗ ಇನ್ನೊಂದು ಜಾತ್ಯಾತೀತ ಪಕ್ಷದ ಜೊತೆ ನಾವು ಹೋಗಬೇಕಾಗುತ್ತದೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, 1983ರಲ್ಲಿ ನಮ್ಮ ಜೊತೆ ಇದ್ದರು. ಅದನ್ನು ಅವರು ಮರೆತುಬಿಟ್ಟಿದ್ದಾರೆ. ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ಬಿಜೆಪಿ ಬೆಂಬಲ ಕೊಟ್ಟಿದ್ದು 1983ರಲ್ಲಿ..

ಶ್ರೀ ಸಿದ್ಧರಾಮಯ್ಯ : ನಿಮ್ಮ ಜೊತೆ ನಾನು ಯಾವತ್ತೂ ಇಲ್ಲ. ನೀವು ಬೆಂಬಲ ಕೊಟ್ಟಿರಬಹುದು, ಆದರೆ ನಿಮ್ಮ ಜೊತೆ ನಾನು ರಾಜಕೀಯ ಪಾದಾರ್ಪಣೆ ಮಾಡುತ್ತೇವೆಂದು ಹೇಳಿದರೂ ಕೂಡ ನಿಮ್ಮ ಜೊತೆ ಇವತ್ತು ನಾನು ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಆವತ್ತು ನಮ್ಮ ಸಹಾಯದಿಂದ ನೀವು ಅಧಿಕಾರಕ್ಕೆ ಬಂದಿದ್ದಿರಿ.

ಶ್ರೀ ಆರ್. ಅಶೋಕ್ : ಈಗ ನೀವು ಕಾಂಗ್ರೆಸ್ ಜೊತೆಯಲ್ಲಿದ್ದೀರಲ್ಲಾ.

ಶ್ರೀ ಸಿದ್ಧರಾಮಯ್ಯ : ನಾನು ಕಾಂಗ್ರೆಸ್‌ಗೂ ಹೋಗುವುದಿಲ್ಲ. ನಿಮ್ಮ ಜೊತೆಗೂ ಬರುವುದಿಲ್ಲ. ನಾನು ಇಲ್ಲಿಯೇ ಇರುತ್ತೇನೆ. ನಾವು ರಾಜಕೀಯ ಪ್ರಾರಂಭ ಮಾಡಿದನಿಂದಲೂ ಕಾಂಗ್ರೆಸ್‌ಗೂ ವಿರುದ್ಧವಾಗಿದ್ದೇವೆ, ನಿಮಗೂ ವಿರುದ್ಧವಾಗಿದ್ದೇವೆ, ನಿಮಗಂತೂ ಬಹಳ ತೀವ್ರವಾಗಿ ವಿರುದ್ಧವಾಗಿದ್ದೇವೆ.

ಶ್ರೀ ಆರ್. ಅಶೋಕ್ : ಆದರೂ ನೀವು ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯರಿಗೆ ಓಟು ಮಾಡಿದ್ದೀರಿ.

ಅಧ್ಯಕ್ಷರು : ಮಧ್ಯೆ ಮಧ್ಯೆ ಏಕೆ ಮಾತನಾಡುತ್ತೀರಿ? ಅವರು ಮಾತನಾಡಿ ಮುಗಿಸಲಿ.

ಶ್ರೀ ಸಿದ್ಧರಾಮಯ್ಯ : ಸ್ವಲ್ಪ ಕುಳಿತುಕೊಳ್ಳಿ, ಆ ಮೇಲೆ ಮಾತನಾಡುವಿರಂತೆ, ನಿಮ್ಮ ಲೀಡರ್ ಮಾತನಾಡುವಾಗ ನಾವು ಒಂದು ಚಕಾರ ಶಬ್ಧ ಎತ್ತಿದ್ದೇವೆಯೇ? ಮಾತನಾಡಲೇ ಇಲ್ಲ, ಸುಮ್ಮನೆ ಕುಳಿತಿದ್ದೇನೆ. ಬೇರೆ ಬೇರೆಯವರೆಲ್ಲಾ ಮಧ್ಯೆ ಪ್ರವೇಶ ಮಾಡಿದರೂ ಕೂಡ ನಾನು ಎದ್ದು ಒಂದು ಮಾತೂ ಕೂಡ ಆಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬುದ್ಧಿವಂತರು ನೀವು. Finance Minister ಎದ್ದು ನಿಂತು ಮಾತನಾಡಿದರೆ ಅದು ಕಮಿಟ್‌ಮೆಂಟ್ ಆಗಿಬಿಡುತ್ತದೆ. ಮಾತನಾಡದೆ ಸುಮ್ಮನಿದ್ದರೆ ಯಾರಿಗೂ ಕಮಿಟ್‌ಮೆಂಟ್ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಹಾಗಲ್ಲ. ನಾನು ನಿಮ್ಮಷ್ಟು ಬುದ್ಧಿವಂತ ಅಲ್ಲ. ನಿಮ್ಮಷ್ಟು ಬುದ್ಧಿವಂತರಾಗಿದ್ದರೆ ನಾವು ಬೇರೆ ಬೇರೆಯವರ ತರಹ ಆಗುತ್ತಿದ್ದೆವು. ಆದ್ದರಿಂದ ನಾವು ಇನ್ನೊಂದು ಜಾತ್ಯಾತೀತ (secular party) ಅವರ ಜೊತೆ ಅನಿವಾರ್ಯವಾಗಿ ಸಮ್ಮಿಶ್ರ ಸರ್ಕಾರವನ್ನು ಈ ರಾಜ್ಯದಲ್ಲಿ ಮಾಡಿದ್ದೇವೆ. ನಾವು ಎರಡೂ ಪಕ್ಷಗಳು ಸೇರಿ ಕನಿಷ್ಟ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಜನತೆಗೆ ಚುನಾವಣೆಗಿಂತ ಮುಂಚಿತವಾಗಿ ನಮ್ಮ ಚುನಾವಣೆ ಪ್ರಣಾಳಿಕೆಗಳಲ್ಲಿ ನಾವು ಅನೇಕ ಭರವಸೆಗಳನ್ನು ಕೊಟ್ಟಿದ್ದೆವು, ಇವರ ಚುನಾವಣೆ ಪ್ರಣಾಳಿಕೆಯಲ್ಲಿ ಅನೇಕ ಭರವಸೆಗಳನ್ನು ಇವರು ಕೊಟ್ಟಿದ್ದಾರೆ, ಆದರೆ ಯಾವುದೇ ಸಮ್ಮಿಶ್ರ ಸರ್ಕಾರ ಆದಾಗ ಎರಡೂ ಪಕ್ಷಗಳು ಒಮ್ಮತಕ್ಕೆ ಬರತಕ್ಕಂಥ ಮತ್ತು ಜನರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಸರ್ವತೋಮುಖ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ನ್ಯಾಯ ಗಮನದಲ್ಲಿಟ್ಟುಕೊಂಡು ಇಬ್ಬರಿಗೂ ಸರ್ವಸಮ್ಮತವಾದಂಥ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ. ಈಗಾಗಲೇ ಅದನ್ನು ಜನತೆಯ ಮುಂದಿಟ್ಟಿದ್ದೇನೆ. ಮತ್ತೆ, ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಒಂದೇ ವರ್ಷಕ್ಕೆ ಸೀಮಿತವಾಗಿ ರೂಪಿತವಾದ ಕಾರ್ಯಕ್ರಮವಲ್ಲ. ಮತ್ತೆ, ನಮ್ಮ ಮ್ಯಾನಿಫೆಸ್ಟೋ ಕೂಡ ಒಂದೇ ವರ್ಷಕ್ಕೆ ಹೇಳಿದಂಥ ಭರವಸೆಗಳಲ್ಲ. 5 ವರ್ಷಗಳಲ್ಲಿ ಜನರು ನಮಗೆ ಆಶೀರ್ವಾದ ಮಾಡಿದರೆ, ನಾವು ಜನರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತೇವೆ, ಆಡಳಿತದಲ್ಲಿ ಏನು ಸುಧಾರಣೆ ತರುತ್ತೇವೆ

ಎನ್ನುವ ಮಾತುಗಳನ್ನು, ಭರವಸೆಗಳನ್ನು 5 ವರ್ಷಗಳಿಗೆ ಕೊಟ್ಟಿರುವುದು. ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮವೂ ಕೂಡ 5 ವರ್ಷಗಳಿಗೆ ಇರುವುದು. ಈ ವರ್ಷದ ಆಯವ್ಯಯದಲ್ಲಿ ಆದ್ಯತೆಯ ಮೇಲೆ ಕೆಲವು ಕಾರ್ಯಕ್ರಮಗಳನ್ನು ಕನಿಷ್ಟ ಕಾರ್ಯಕ್ರಮದಲ್ಲಿ ನಾವೇನು ಒಪ್ಪಿಕೊಂಡಿದ್ದೇವೆ, ಆ ಕಾರ್ಯಕ್ರಮಗಳು ಈ ಬಡ್ಜೆಟ್‌ನಲ್ಲಿ ಪ್ರತಿಬಿಂಬಿತವಾಗಿವೆ. ಇನ್ನು ನಾವು ಒಪ್ಪಿಕೊಂಡಿರುವ ಅನೇಕ ಕಾರ್ಯಕ್ರಮಗಳು ಮುಂದಿನ ವರ್ಷಗಳಲ್ಲಿ ಅವು ಕೂಡ ಜಾರಿಗೆ ಬರುತ್ತವೆ. ಹಣಕಾಸಿನ ಲಭ್ಯತೆ ನೋಡಿಕೊಂಡು, ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಂಡು, ರಾಜ್ಯದ ಜನತೆಗೆ ನಾವು ಏನು ಈಗ ಕನಿಷ್ಟ ಸಾಮಾನ್ಯ ಕಾರ್ಯಕ್ರಮದ ಮೂಲಕ ಜನರಿಗೆ ಈಗ ಎರಡೂ ಪಕ್ಷಗಳೂ ಜಂಟಿಯಾಗಿ ಏನು ವಚನ ಕೊಟ್ಟಿದ್ದೇವೆ, ಆ ವಚನವನ್ನು ಚಾಚೂ ತಪ್ಪದೆ, ಪ್ರಾಮಾಣಿಕವಾಗಿ ಜಾರಿಗೆ ಕೊಡುತ್ತೇವೆನ್ನುವ ಮಾತನ್ನು ಅತ್ಯಂತ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಭರವಸೆಗಳಿಗೂ ಅನುಷ್ಠಾನಕ್ಕೂ ಬಹಳ ಅಂತರ ಇಡಲಿಕ್ಕೆ ಬಿಡುವುದಿಲ್ಲ. ನಾವೇನು ಭರವಸೆಗಳನ್ನು ಕೊಟ್ಟಿದ್ದೇವೆ, ಅವು ಏನು ನೂರಕ್ಕೆ ನೂರು, ನೂರ ಹತ್ತು ಎಂದು ಹೇಳುವುದಿಲ್ಲ. ಬಹುತೇಕವಾಗಿ ಅನುಷ್ಠಾನ ಮತ್ತು ಭರವಸೆ, ಇವೆರಡರ ಮಧ್ಯೆ ಅಂತರವಿಲ್ಲದ ರೀತಿಯಲ್ಲಿ ವಾಸ್ತವಿಕ ನೆಲೆಗಟ್ಟಿನಲ್ಲಿ ನಿಂತು ಈ ಸರ್ಕಾರ ಕೆಲಸ ಮಾಡುತ್ತದೆನ್ನುವ ಭರವಸೆಯನ್ನು ಮಾನ್ಯ ಎಲ್ಲಾ ಸದಸ್ಯರಿಗೆ ನಾನು ಕೊಡಲಿಕ್ಕೆ ಬಯಸುತ್ತಿದ್ದೇನೆ. ಇದರಲ್ಲಿ ಹಿಂದೆ ಹೋಗುವ ಪ್ರಶ್ನೆ ಇಲ್ಲ. ನಾನು ಇದಕ್ಕಿಂತ ಹೆಚ್ಚು ರಾಜಕೀಯವಾಗಿ ಮಾತನಾಡಲು ಹೋಗುವುದಿಲ್ಲ. ಬಡ್ಜೆಟ್ ಮೇಲೆ ಅನೇಕ ವಿಚಾರಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೇರೆಯವರು ಏನು ಹೇಳಿದ್ದಾರೆಂದರೆ, ನಾನು ಹಿಂದಿನ ಸರ್ಕಾರವನ್ನು ಏನೋ ಟೀಕೆ ಮಾಡಿದ್ದೇವೆನ್ನುವ ರೀತಿಯಲ್ಲಿ, ಆ ಭಾವನೆ ಬರುವ ರೀತಿಯಲ್ಲಿ ಕೆಲವರು ಮಾತನಾಡಿದ್ದಾರೆ. ನಾನು ಹಿಂದಿನ ಸರ್ಕಾರವನ್ನು ಟೀಕೆ ಮಾಡಿಲ್ಲ. ಇವತ್ತು ನಮ್ಮ ಆರ್ಥಿಕ ಸಮಸ್ಯೆಗಳೇನು ಎನ್ನುವುದನ್ನು ಮಾತ್ರ ಗುರುತು ಮಾಡಿ ಹೇಳಿದ್ದೇನೆ. ಮತ್ತೆ, ಈ ಸಮಸ್ಯೆಗಳಿಗೆ ಪರಿಹಾರವನ್ನು ಹೇಗೆ ನಾವು ಹುಡುಕಿಕೊಳ್ಳಬೇಕು? ನಮ್ಮ ಪರಿಹಾರಗಳೇನು? ಸುಧಾರಣೆಗಳೇನು? ನಮ್ಮ ಮುಂದಿನ ದೃಷ್ಟಿಕೋನವೇನೆಂಬುದನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಆದುದರಿಂದ, ಹಿಂದಿನ ಸರ್ಕಾರವನ್ನು ಟೀಕೆ ಮಾಡಿದ್ದೇನೆ ಎನ್ನುವ ಉದ್ದೇಶವಿಲ್ಲ. ನಿಮ್ಮ ಮಾತುಗಳಲ್ಲಿ ಆ ಉದ್ದೇಶವನ್ನು ಹುಡುಕುತ್ತಿದ್ದೀರಿ. ಅದು ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಪೂಜಾರಿಯವರು ಏನೋ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಪೂಜಾರಿಯವರೂ ಹೇಳಿಲ್ಲ, ಧರ್ಮಸಿಂಗ್‌ರವರೂ ಹೇಳಿಲ್ಲ, ಯಾರೂ ಹೇಳಿಲ್ಲ. ಅದನ್ನು ಸ್ಪಷ್ಟೀಕರಣ ಮಾಡಿದ್ದಾರೆ. ಪತ್ರಿಕೆಯಲ್ಲಿ ಬಂದಂಥ ಊಹಾಪೋಹಗಳ ಮೇಲೆ ಮಾತನಾಡಿದ್ದಾರೆಯೇ ಹೊರತು, ಕಾಂಗ್ರೆಸ್ ಅಧ್ಯಕ್ಷರು ಕೂಡ ಹೇಳಲಿಲ್ಲ, ಮುಖ್ಯಮಂತ್ರಿಗಳೂ ಕೂಡ ಹೇಳಲಿಲ್ಲ, ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಕೂಡ ಈ ತರಹ ಚರ್ಚೆಯಾಗಲಿಲ್ಲ. It is a matter of fact. ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಇದು ಇವತ್ತಿನ ಪರಿಸ್ಥಿತಿಯಲ್ಲಿ ಉತ್ತಮವಾದ ಆಯವ್ಯಯವೆಂದು ಎಲ್ಲರೂ ಹೇಳಿ, ಚರ್ಚೆಯಾಗಿದೆ. ಮಾನ್ಯ ಸದಸ್ಯರು ಇಲ್ಲಿ ಅಟೆಂಡ್ ಆಗಿದ್ದಾರೆ. ಅದಕ್ಕೆ ಯಾವುದೇ ಇಂಬು ಕೊಟ್ಟು ಮಾತನಾಡುವಂಥ, ಅದಕ್ಕೆ ಬಣ್ಣ ಕೊಟ್ಟು ಮಾತನಾಡುವಂಥ ಅಗತ್ಯವಿಲ್ಲ. ನಮ್ಮ ಆಯವ್ಯಯದಲ್ಲಿ ಈಗ ನಾವೇನು ಆಗಿದ್ದೇವೆ, ಮುಂದೇನಾಗುತ್ತೇವೆ? ಈ ರಾಜ್ಯ ಯಾವ ದಿಕ್ಕಿಗೆ ಹೋಗಬೇಕು? ಏಕೆಂದರೆ, ನಾವು ಒಪ್ಪಿಕೊಂಡಿರುವುದು ರಾಜ್ಯದಲ್ಲಿ ಸಮಾನ

ಬೆಳವಣಿಗೆಯಾಗಬೇಕು, ಅದು ಸಾಮಾಜಿಕ ನ್ಯಾಯ ನೆಲೆಗಟ್ಟಿನ ಮೇಲೆ ಆಗಬೇಕು ಎಂದು. ಸರ್ವತೋಮುಖ ಅಭಿವೃದ್ಧಿಯಾಗಬೇಕು. ಅದು ನಮ್ಮ ದೃಷ್ಟಿಕೋನ. ಹಾಗೆಯೇ, ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು. ನಂಜುಂಡಪ್ಪನವರು ಉನ್ನತಾಧಿಕಾರ ಸಮಿತಿ ಏನಿದೆ, ಅದರ ಶಿಫಾರಸ್ಸುಗಳು ಅಂದರೆ ನಂಜುಂಡಪ್ಪನವರು ಅಧ್ಯಕ್ಷರಾಗಿ ಕೊಟ್ಟಿರುವ ವರದಿ. ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಏನು ಅವರು 39 ತಾಲ್ಲೂಕುಗಳನ್ನು ಬಹಳ ಹಿಂದುಳಿದವುಗಳೆಂದು ಗುರುತು ಮಾಡಿದ್ದಾರೆ, ಆ ಎಲ್ಲಾ ತಾಲ್ಲೂಕುಗಳನ್ನು ಕೂಡ ಅಲ್ಲಿ ಏನು ಈಗ ತಾರತಮ್ಯವಿದೆ, ಅದನ್ನು ಹೋಗಲಾಡಿಸಿ, ಇಡೀ ರಾಜ್ಯ ಮತ್ತು ಎಲ್ಲಾ ಜಿಲ್ಲೆಗಳು, ತಾಲ್ಲೂಕುಗಳು ಸಮಾನವಾಗಿ ಬೆಳವಣಿಗೆಯಾಗುವ, ಅದಕ್ಕೆ ಪೂರಕವಾದ ಆರ್ಥಿಕ ಚೌಕಟ್ಟನ್ನು ಕೊಡುವ ಪ್ರಯತ್ನವನ್ನು ಮಾಡಲಿಕ್ಕೆ ಈ ಆಯವ್ಯಯದಲ್ಲಿ ನಾವು ಹೆಜ್ಜೆಯನ್ನಿಟ್ಟಿದ್ದೇವೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇದರಿಂದಲೇ ಈಗಾಗಲೇ ಎಲ್ಲಾ ನಂಜುಂಡಪ್ಪನವರ ವರದಿಯನ್ನು, ಶಿಫಾರಸ್ಸುಗಳನ್ನು ಮಾಡಿ ಬಿಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿದರು. ಮಾನ್ಯ ಡಿ.ಆರ್. ಪಾಟೀಲರು, ಮುಂದಿನ ವರ್ಷವಾದರೂ ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಎಲ್ಲಿ ಇಂಬ್ಯಾಲೆನ್ಸ್ ಇದೆ, ಆ ಇಂಬ್ಯಾಲೇನ್ಸ್ ಅನ್ನು, ಆ ಗ್ಯಾಪ್ ಇದೆಯಲ್ಲಾ, ಆ ಕಂದರ ಇದೆಯಲ್ಲಾ ಅದನ್ನು ಮುಚ್ಚಬೇಕೆಂಬುದೇ ಸರ್ಕಾರದ ಉದ್ದೇಶ. 1998–99ರಲ್ಲಿ ನಾವು ಆಗ ಇದ್ದಾಗಲೇ ವರದಿ ಮಾಡಿದ್ದೆವು. ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್ದಾಗ, ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಎಂಬ ಪುಸ್ತಕವನ್ನು ತಂದೆವು, ಅದು ಬಿಡುಗಡೆಯಾಯಿತು. ಅದರಲ್ಲೂ ಕೂಡ ನಾವು ಗುರುತಿಸಿದ್ದೆವು. ಶೈಕ್ಷಣಿಕವಾಗಿ, ಆರೋಗ್ಯದ ದೃಷ್ಟಿಯಿಂದ ಯಾವ್ಯಾವು ಹಿಂದುಳಿದಿವೆ, ಅವರ ಜೀವನ ಮಟ್ಟ ಎಲ್ಲೆಲ್ಲಿ ಕಂಪ್ಯಾರಿಟೀವ್ಲಿ ಕಡಿಮೆಯಿದೆ, ಎಂದೆಲ್ಲ ಗುರುತು ಮಾಡಿ, ಎಲ್ಲರ ಜೀವನ ಮಟ್ಟ ಸುಧಾರಣೆಯಾಗಬೇಕು, ಅವರು ಗೌರವದಿಂದ ಬದುಕುವ ಹಾಗಾಗಬೇಕು, ಎಲ್ಲರಿಗೂ ದುಡಿಯಲಿಕ್ಕೆ ಅವಕಾಶವಿರಬೇಕು ಮತ್ತೆ ಆರೋಗ್ಯವಂತರಾಗಿ ಬದುಕಬೇಕು. ಈ ತರಹದ ವ್ಯವಸ್ಥೆಯಾಗಬೇಕು. ಇದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು, ಅದಕ್ಕೆ ಪೂರಕವಾದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವ ಕೆಲಸ ಆದಾಗಲೇ ಈ ರಾಜ್ಯದ ಬೆಳವಣಿಗೆ, ನಾವೇನು ಸಸ್ಟೇನ್ಡ್ ಗ್ರೋಥ್ ಎಂದು ಹೇಳುತ್ತೇವೆ, ಆ ಸಸ್ಟೇನ್ಡ್ ಗ್ರೋಥ್ ಆಗಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಆ ಹಿನ್ನೆಲೆಯಲ್ಲಿ ಈ ಆಯವ್ಯಯವನ್ನು ಮಂಡಿಸುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇನ್ನೊಂದು ಮಾತು, ಇವರು ಪ್ರಸ್ತಾಪ ಮಾಡಿರುವುದೆಂದರೆ, ನೀವು ಸರ್‌ಪ್ಲಸ್ ಬಡ್ಜೆಟ್ ಎಂದು ಹೇಳಿದ್ದೀರಿ, ಏನೋ ಬಹಳ ಮಾಯ ಮಂತ್ರ ಮಾಡಿದ್ದೀರಿ ಇಲ್ಲಿ ಎಂದರು. ಮಾಯ ಮಂತ್ರ ಮಾಡುವುದಕ್ಕಾಗುವುದಿಲ್ಲ. ಮಾಡುವುದಕ್ಕೆ ಸಾಧ್ಯವೂ ಇಲ್ಲ. ಅದು ಇಲ್ಲವೂ ಇಲ್ಲ. ಪವಾಡಗಳನ್ನು ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನಾವೇನು ಮಾಯ ಮಂತ್ರ ಮಾಡುವುದಕ್ಕೆ ಹೋಗಿಲ್ಲ. ಅದೇನೆಂದರೆ, ನಾನು 8 ವರ್ಷಗಳಲ್ಲಿ, ವರ್ಷ ಏಕೆ ಹೇಳಿದೆ ಎಂದರೆ, ಆಗ ಸರ್‌ಪ್ಲಸ್ ಇತ್ತು. ಅದಾದಮೇಲೆ, ಬೇರೆ ಬೇರೆ ಕಾರಣಗಳಿಗೆ ರೆವಿನ್ಯೂ ಡಿಫಿಸಿಟ್ ಆಗಲಿಕ್ಕೆ ಪ್ರಾರಂಭವಾಯಿತು. ಫಿಫ್ತ್ ಪೇ ಕಮಿಷನ್ ಇಂಪ್ಲಿಮೆಂಟ್ ಆದ ಮೇಲೆ, ಆಗ ಸುಮಾರು ಒಂದು ಸಾವಿರ ಕೋಟಿ ರೂ. ಒಂದೇ ಸಾರಿ ಭಾರವಾಯಿತು. ಅದಾದಮೇಲೆ, ಬರಗಾಲ ಬಂತು. ಬೇರೆ ಬೇರೆ ಕಾರಣಗಳು. ಹೀಗಾಗಿ, ರೆವಿನ್ಯೂ ಡಿಫಿಸಿಟ್ ಪೂರಾ ಚುಕ್ತಾ ಆಗಲಿಕ್ಕೆ ಸಾಧ್ಯವಾಗಲಿಲ್ಲ. ಈ

ಸಾರಿ ರೆವಿನ್ಯೂ ಡಿಫಿಸಿಟ್ ವೈಪ್–ಆಫ್ ಮಾಡಬೇಕೆಂದು ಪ್ರಯತ್ನ ನಡೆಸಿದ್ದೇವೆ. ಅಂದರೆ, ರೆವಿನ್ಯೂ ಡಿಫಿಸಿಟ್ ವೈಪ್–ಆಫ್ ಮಾಡುವುದೇ ದೊಡ್ಡ ಸಾಧನೆ ಅಲ್ಲ. ಆ ವಾದ ಕೂಡ ಇದೆ. ಯಾವುದೇ ಅಭಿವೃದ್ಧಿ ಶೀಲ ರಾಜ್ಯ, ರಾಷ್ಟ್ರಗಳಿರಬಹುದು, ಅದು ಡಿಫಿಸಿಟ್ ಬಜ್ಜೆಟ್ ಇರಬೇಕೆನ್ನುವ ಮಾತನ್ನು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

1.10 ಪಿ ಎಂ

ನಾನು ಅದನ್ನು ಒಪ್ಪಿಕೊಳ್ಳುತ್ತಾ, ರೆವಿನ್ಯೂ ಡಿಫಿಸಿಟ್‌ನ್ನು ಸಾಲ ತಂದು ಅದರ ಮೂಲಕ ವೈಪ್–ಆಫ್ ಮಾಡತಕ್ಕಂಥ ಪದ್ಧತಿ ಇದೆಯಲ್ಲಾ ಅದು ಉಪಯೋಗವಿಲ್ಲ. It is not a good fiscal discipline- ಆದುದರಿಂದ, ರೆವಿನ್ಯೂ ಎಕ್ಸ್‌ಪೆಂಡಿಚರ್‌ನ್ನು ರೆವಿನ್ಯೂ ಆದಾಯದಿಂದ ಭರಿಸತಕ್ಕಂಥ ಕೆಲಸ ಇದೆಯಲ್ಲಾ ಆ ಕೆಲಸ ನಾವು ಇಲ್ಲಿ ಮಾಡಿದ್ದೇವೆ. ರೆವಿನ್ಯೂ ಎಕ್ಸ್‌ಪೆಂಡಿಚರ್, ರಾಜಸ್ವ ಖರ್ಚು ಇದೆಯಲ್ಲಾ ಆ ರಾಜಸ್ವ ಖರ್ಚನ್ನು ರಾಜಸ್ವ ಆದಾಯದಿಂದಲೇ ಭರಿಸತಕ್ಕಂಥ ಪ್ರಯತ್ನವನ್ನು ಈ ಫಿಸ್ಕಲ್ ಡಿಫಿಸಿಟ್ ಎಂದು ನಾನು ಏನು ಹೇಳಿದ್ದೇನೆ, ಇದರಲ್ಲಿ ಆ ಪ್ರಯತ್ನ ಆಗಿದೆ. ಇನ್ನು ಮುಂದೆ ನಾವು ಸಾಲ ಮಾಡಬಾರದೆಂದು ಹೇಳುವುದಿಲ್ಲ. ಸಾಲ ಮಾಡಿದಂಥ ಹಣ ನಾವು ಅಸೆಟ್ ಕ್ರಿಯೇಟ್ ಮಾಡಲಿಕ್ಕೆ, ಸಂಪತ್ತನ್ನು ಉತ್ಪನ್ನ ಮಾಡಲಿಕ್ಕೆ, ಅಭಿವೃದ್ಧಿಗೆ, ಅಲ್ಲಿಗೆ ಬಳಸಬೇಕು ಎನ್ನುವ ದೃಷ್ಟಿಕೋನದಿಂದ ಆ ಬದ್ಧತೆಯಿಂದ ಈ ಡಿಫಿಸಿಟ್ ಎರಡು ತರಹದ ಡಿಫಿಸಿಟ್‌ಗಳು ಇವೆ, ಒಂದು ರೆವಿನ್ಯೂ ಡಿಫಿಸಿಟ್ ಇನ್ನೊಂದು ಫಿಸ್ಕಲ್ ಡಿಫಿಸಿಟ್. ರೆವಿನ್ಯೂ ಡಿಫಿಸಿಟ್‌ನ್ನು ವೈಫ್‌ಆಫ್ ಮಾಡಲಿಕ್ಕೆ ಮಾಡಿದ್ದೇವೆ. ಆದರೆ ಫಿಸ್ಕಲ್ ಡಿಫಿಸಿಟ್ ಇನ್ನೂ ಇದೆ. ನಾನು 4246 ಕೋಟಿ ರೂಪಾಯಿ ಫಿಸ್ಕಲ್ ಡಿಫಿಸಿಟ್ ಇದೆ ಎಂದು ಹೇಳಿದೆ. ಆದರೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಫಿಸ್ಕಲ್ ಡಿಫಿಸಿಟ್‌ನಲ್ಲಿ, 5564 ಕೋಟಿ ರೂ. ಇತ್ತು, 5564 ಕೋಟಿ ರೂ. ನಿಂದ 4246 ಕೋಟಿ ರೂ.ಗೆ ಇಳಿಸತಕ್ಕಂಥ ಪ್ರಯತ್ನ ಮಾಡಿದ್ದೇವೆ. ಅದು ಮುಂದಿನ ವರ್ಷಗಳಲ್ಲಿ ಇನ್ನೂ ಕೂಡ ಕಡಿಮೆ ಮಾಡತಕ್ಕ ಪ್ರಯತ್ನ ಮಾಡುತ್ತೇವೆ. ಇಲ್ಲದೇ ಹೋದರೆ ಸಾಲ ತಂದು ಫಿಸ್ಕಲ್ ಡಿಫಿಸಿಟ್‌ನ್ನು ಚುಕ್ತಾ ಮಾಡತಕ್ಕಂಥ ಕೆಲಸ ಮಾಡಬೇಕಾಗುತ್ತದೆ. ಆದುದರಿಂದ, ಸಾಲ ತಂದು ಬಡ್ಡಿ ತೀರಿಸುವುದು ಎಂದರೆ, ಬಡ್ಡಿ ವಾಪಸ್ ಕೊಡುವುದು ಎಂದರೆ ರಾಜ್ಯದ ಬೆಳವಣಿಗೆಗೆ ಅದು ಮಾರಕವಾಗುತ್ತದೆ, ಅದು ಉಪಯೋಗಕ್ಕೆ ಬರುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ಫಿಸ್ಕಲ್ ಡಿಫಿಸಿಟ್ ಕೂಡ ಇರಬೇಕಾಗುತ್ತದೆ. ಫಿಸ್ಕಲ್ ಡಿಫಿಸಿಟ್ ಪೂರಾ ಜೀರೋ ಮಾಡಿಬಿಡುತ್ತೇವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಕನಿಷ್ಟ ಅದನ್ನು 3 ರೊಳಗಡೆ ತರಬೇಕು ಎನ್ನತಕ್ಕಂಥ ಪ್ರಯತ್ನ. ಈಗ 4.52 ಇದೆ, ಆ 4.52 ರಿಂದ 3 ರೊಳಗೆ ತರಬೇಕು ಎನ್ನುವ ಪ್ರಯತ್ನ. ಆ ಪ್ರಯತ್ನದಲ್ಲಿ ಹೋಗಬೇಕಾದರೆ ಇದೇ ದಾರಿಯಲ್ಲಿ ಹೋದರೆ ಖಂಡಿತವಾಗಲೂ ಸಾಧ್ಯ. ರಾಜ್ಯದಲ್ಲಿ ಇತ್ತೀಚೆಗೆ ಮಳೆ ಚೆನ್ನಾಗಿ ಆಗುತ್ತಿದೆ, ಬೆಳೆ ಕೂಡ ಚೆನ್ನಾಗಿ ಬರುತ್ತಿದೆ, ಕಳೆದ ಮೂರು ವರ್ಷಗಳಲ್ಲಿ ಬಾರಿ ಬರಗಾಲ ಬಂದಿದ್ದು, ಸುಮಾರು 27 ಜಿಲ್ಲೆಗಳಲ್ಲಿ 25 ಜಿಲ್ಲೆಗಳಲ್ಲಿ ಬರಗಾಲ ಬಂದು, ಪ್ರೈಮರಿ ಸೆಕ್ಟಾರ್‌ನಲ್ಲಿ ಮೈನೆಸ್ ಗ್ರೋಥ್ ಆಗಿಬಿಟ್ಟಿದೆ. ಫುಡ್ ಪ್ರೊಡೆಕ್ಷನ್‌ನಲ್ಲಿ ಮೈನೆಸ್ ಗ್ರೋಥ್ ಆಗಿಬಿಟ್ಟಿದೆ. ಇದನ್ನೇ ಮಾನ್ಯ ಸದಸ್ಯರೊಬ್ಬರು ಫುಡ್ ಪ್ರೊಡೆಕ್ಷನ್ ಬಹಳ ಕಡಿಮೆಯಾಗಿದೆ ಎಂದು ಹೇಳುತ್ತಿದ್ದರು. ಅದಕ್ಕೆ ಪ್ರೈಮರಿ ಸೆಕ್ಟರ್‌ನಲ್ಲಿ 3.4 something like that ಆಗಿಬಿಟ್ಟಿದೆ. ಅದು ಇಡೀ ರಾಜ್ಯದ ಬೆಳವಣಿಗೆಯ ಮೇಲೆ ಒಟ್ಟಾರೆ ಪರಿಣಾಮ ಬೀರುತ್ತದೆ. ಮಳೆ ಬೆಳೆ ಚೆನ್ನಾಗಿ ಆದರೆ, ರೈತರಿಗೆ ಕೂಡ ಅನುಕೂಲವಾಗುತ್ತದೆ, ರಾಜ್ಯದ

ಬೆಳವಣಿಗೆಯೂ ಕೂಡ ಚೆನ್ನಾಗಿ ಆಗುತ್ತದೆ ಮತ್ತು ಫುಡ್ ಪ್ರೊಡಕ್ಷನ್ ಕೂಡ ಚೆನ್ನಾಗಿ ಆಗುತ್ತದೆ ಮತ್ತೆ ಫುಡ್ ಸೆಕ್ಯೂರಿಟಿ ಕೂಡ ಚೆನ್ನಾಗಿ ಆಗುತ್ತದೆ. ಆದರೆ ಈ ಸಾರಿ ಒಳ್ಳೆಯ ಮಳೆ ಬೆಳೆ ಆಗಲಿ ಎಂದು ನಾನು ಆಶಿಸುತ್ತೇನೆ ಮತ್ತೆ ಈ ಮಳೆ ಚೆನ್ನಾಗಿ ಆದರೆ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ. ಹೀಗಾಗಿ ನಾವು ಈ ಬಜೆಟ್ ಮೂಲಕ ಸರ್ಪ್ಲಸ್ ಬಜೆಟ್ ಎಂದು ಏನು ಹೇಳಿದ್ದಾರೆಲ್ಲಾ ಇದರಲ್ಲಿ ಏನೂ ದೊಡ್ಡ ಸಾಧನೆ ಮಾಡಿದ್ದೇವೆಂದು ಹೇಳುತ್ತಿಲ್ಲ. ಆದರೆ ಸರಿಯಾದ ದಾರಿಯಲ್ಲಿ ಹೆಜ್ಜೆಯನ್ನು ಇಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಇದೇನೂ ದೊಡ್ಡ ಸರ್ಪ್ಲಸ್ ಅಲ್ಲವೆಂದು ಹೇಳಿದರು. ನಿಜ ನೀವು ಹೇಳುವುದು ನೂರಕ್ಕೆ ನೂರು ಸತ್ಯ. ಈ 71 ಕೋಟಿ ರೂ. ಚಿಲ್ಲರೆ ಕಾಂಟಿಜೆನ್ಸ್ ಫಂಡ್‌ಗೆ ಕೊಡಬೇಕು ಎಂದು ಹೇಳಿದಿರಲ್ಲಾ It is totally true. ಇದರಲ್ಲಿ ನಮ್ಮ ಬಜೆಟ್‌ನಲ್ಲಿ ಮತ್ತೊಂದು ಅಂಶ ಏನೆಂದರೆ, – total transparent - ಯಾವುದನ್ನು ಮುಚ್ಚಿಡತಕ್ಕಂಥ ಯಾವುದೇ ಪ್ರಯತ್ನವನ್ನು ಇದರಲ್ಲಿ ಮಾಡಿಲ್ಲ. ಆ 71 ಕೋಟಿ ರೂ ಕಾಂಟಿಜೆನ್ಸ್ ಫಂಡ್‌ಗೆ ಹೋದರೆ ಇನ್ನು ಉಳಿಯುವುದು ಸರ್ಪ್ಲಸ್ ಒಂದು ಕೋಟಿ ರೂ. ಚಿಲ್ಲರೆ. ಅದರಿಂದ ಬಾರಿ ಉಳಿದು ಬಿಟ್ಟಿದೆ ಎಂದು ನಾನೇನೂ ಹೇಳಿಕೊಂಡು ಬೆನ್ನುತಟ್ಟಿಕೊಂಡಿಲ್ಲ ಅಥವಾ ಅದನ್ನು ಪತ್ರಿಕೆಯವರು, ಮಾಧ್ಯಮದವರು ಭೇಟಿ ಮಾಡಿದಾಗ ನಾನು ಹೇಳಿದ್ದೇನೆ ಆದರೆ ಅದು ಬರದೇ ಇರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : 1.83 ಸರ್ಪ್ಲಸ್ ಎಂದು ಹೇಳಿದ್ದರೆ ನಾನು ಪ್ರಾಮಾಣಿಕವಾಗಿ ಒಪ್ಪುತ್ತಿದೆ. ಇಲ್ಲಿ 72.83 ಎಂದು ಪ್ರಚಾರ ತೆಗೆದುಕೊಂಡಿರಿ ಅಷ್ಟೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಹೌದು ಹೌದು ಕಾಂಟಿಜೆನ್ಸಿ ಫಂಡ್‌ಗೆ ಕೊಟ್ಟ ಮೇಲೆ ತಾನೇ ಅಲ್ಲಿ ಕಡಿಮೆಯಾಗುವುದು ಮೊದಲೇ ಹೇಳಿಬಿಡಲಾ? ಅದು ಸರಿ ಇನ್ನು ಕೊಟ್ಟ ಮೇಲೆ ಈ ಕಾಂಟಿಜೆನ್ಸಿ ಫಂಡ್. ಈ ಬಜೆಟ್ ಪಾಸ್ ಆಗಿ ಕಾಂಟಿಜೆನ್ಸಿ ಫಂಡ್‌ಗೆ ದುಡ್ಡು ಕೊಟ್ಟ ಮೇಲೆ ತಾನೇ ಅದು ಕಡಿಮೆಯಾಗುವುದು. ಕೊಡುವುದಕ್ಕೂ ಮುಂಚೆ ನಾನು ಒಂದು ಕೋಟಿ ರೂ. ಚಿಲ್ಲರೆ ಎಂದು ಹೇಳಿಬಿಟ್ಟರೆ ಅದು ಸರಿಹೋಗುತ್ತಾ? ಅದಕ್ಕೆ ಲೆಜಿಸ್ಲೇಚರ್ ಅಪ್ರೂವ್ ಮಾಡಬೇಕಲ್ಲವೆ? ಲೆಜಿಸ್ಲೇಚರ್ ಅಪ್ರೂವ್ ಮಾಡಿದ ಮೇಲೆ ತಾನೇ ಹೇಳಬೇಕಾಗಿರುವುದು. ಲೆಜಿಸ್ಲೇಚರ್ ಅಪ್ರೂವ್ ಮಾಡಿದ ಮೇಲೆ ಆ 71 ಕೋಟಿ ರೂ. ಚಿಲ್ಲರೆ ಕಾಂಟಿಜೆನ್ಸಿ ಫಂಡ್‌ಗೆ ಹೋಗುತ್ತೆ, ಹೋದ ಮೇಲೆ ಉಳಿದಿದ್ದು ಸರ್ಪ್ಲಸ್ ಎಂದು ಆಗುತ್ತೆ; ಅದು ಪದ್ಧತಿ, ನೀವು ಅಪ್ರೂವ್ ಮಾಡದೇ ಒಂದು ರೂಪಾಯಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ, ಲೆಜಿಸ್ಲೇಚರ್ ಅಪ್ರೂವ್ ಮಾಡದೇ ಒಂದು ರೂಪಾಯಿ ಕೊಡುವುದಕ್ಕೂ ಬರುವುದಿಲ್ಲ, ಒಂದು ರೂಪಾಯಿ ಖರ್ಚು ಮಾಡುವುದಕ್ಕೂ ಬರುವುದಿಲ್ಲ. ಹಾಗಾಗಿ ಬಜೆಟ್‌ನಲ್ಲಿ ಹೇಳುವಾಗ, ಬರೆಯುವಾಗ ಆ ತರಹ ಮಾಡುವುದಕ್ಕೆ ಬರುವುದಿಲ್ಲ. ಹೀಗಾಗಿ ಒಂದು ಕೋಟಿ ರೂ. ಚಿಲ್ಲರೆ ಮಾತ್ರ ಸರ್ಪ್ಲಸ್ ಉಳಿದಿರತಕ್ಕಂಥದ್ದು ಎಂದು ಹೇಳಿದ್ದೇನೇ ಅಲ್ಲವೆ? ಅದಕ್ಕೆ ಮತ್ತೆ ಬಣ್ಣ ಗಿಣ್ಣ ಕಟ್ಟಿ ಹೇಳುವ ಪ್ರಶ್ನೆಯೇಯಿಲ್ಲ, ಸತ್ಯ ಹೇಳಲೇಬೇಕಲ್ಲಾ, ಆಮೇಲೆ ಕೆಲವು ಸದಸ್ಯರು ಏನು ಹೇಳಿದ್ದಾರೆ ಎಂದರೆ, ವೈಟ್ ಪೇಪರ್ ಮಂಡಿಸಬಹುದಾಗಿತ್ತು ಎಂದು ಈ ಬಜೆಟ್ ವೈಟ್ ಪೇಪರ್, ಅದಕ್ಕಿಂತ ಜಾಸ್ತಿ ಈ ಬಜೆಟ್. Budget itself it is more than a white paper ಎಲ್ಲಾ ಲೆಕ್ಕ ಎಲ್ಲಾ ನಿಮಗೆ ಕೊಟ್ಟುಬಿಟ್ಟಿದ್ದೇವೆ. ಎಲ್ಲಾ ಪ್ರಿಂಟ್ ಮಾಡಿ ಎಲ್ಲೆಲ್ಲಿಗೆ ಏನೇನು ಖರ್ಚು ಮಾಡಿದ್ದೇವೆ, ಎಷ್ಟೆಷ್ಟು ಖರ್ಚು

ಆಗುತ್ತದೆ, ಎಲ್ಲಾ ಇಲ್ಲಿಯೇ ಇದೆ. ಕಲರ್ ಕೂಡ ವೈಟೇ, ಮೇಲೆ ಕವರ್ ಮಾತ್ರ ಬೇರೆ ಬಣ್ಣ ಇರುವುದು ಒಳಗಡೇ ಎಲ್ಲಾ ವೈಟೇ. ಆದುದರಿಂದ ವೈಟ್ ಪೇಪರ್‌ನ ಅಗತ್ಯ ಕೂಡ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ, ಆದುದರಿಂದ ವೈಟ್ ಪೇಪರ್ ಮಂಡಿಸಬೇಕಾದಂಥ ಅಗತ್ಯವಿಲ್ಲ. ಎಲ್ಲಾ ಲೆಕ್ಕನೂ ಬಜೆಟ್‌ನಲ್ಲೇ ಇದೆ. ಯಾವ್ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಖರ್ಚು ಮಾಡುತ್ತೇವೆ, ರಿಸೀಟ್ಸ್ ಎಷ್ಟು ಬರುತ್ತದೆ, ಖರ್ಚು ಎಷ್ಟು ಆಗುತ್ತದೆ, ಈಗಿನ ಪರಿಸ್ಥಿತಿ ಏನು, ಹೋದ ವರ್ಷ ಎಷ್ಟು ಬ್ಯಾಲೆನ್ಸ್ ಇತ್ತು, ಈಗ ಎಷ್ಟು ಡಿಫಿಸಿಟ್ ಆಗಿದೆ. ಸಾಲ ಎಷ್ಟು ತಂದಿದ್ದೇವೆ, ಕ್ಯಾಪಿಟಲ್ ಅಕೌಂಟ್ಸ್‌ನಲ್ಲಿ ಎಷ್ಟು, ರೆವಿನ್ಯೂ ಅಕೌಂಟ್ಸ್‌ನಲ್ಲಿ ಎಷ್ಟು ಖರ್ಚಾಗುತ್ತದೆ, ಎನ್ನುವ ಎಲ್ಲಾ ಲೆಕ್ಕ ಇಲ್ಲಿ ಪೂರಾ ಇದೆ. ಆದುದರಿಂದ ನಾವು ಅಲ್ಲಿ ಏನು ಮುಚ್ಚುಮರೆ ಏನೂ ಮಾಡಿಲ್ಲ, ಯಾವುದನ್ನೂ ಕೂಡ ಗುಪ್ತವಾಗಿಡತಕ್ಕಂಥ ಕೆಲಸ ಏನು ಇಲ್ಲ, ಎಲ್ಲಾ ಕೂಡ ಬಹಳ ಸ್ಪಷ್ಟವಾಗಿ ಬಜೆಟ್‌ನಲ್ಲಿ ಬಂದಿರುವುದರಿಂದ ವೈಟ್ ಪೇಪರ್‌ನ್ನು ಮಂಡಿಸುವ ಅಗತ್ಯವಿಲ್ಲ ಎನ್ನುವ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ತಿಳಿಸಿ, ಇನ್ನು ಕೆಲವು ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದ್ದಾರೆ. ಕೆಲವು ಕಾರ್ಯಕ್ರಮಗಳೆಲ್ಲವೂ ಬಜೆಟ್‌ನಲ್ಲಿ ಬರಬೇಕಾಗಿತ್ತು, ಅವು ಬಂದಿಲ್ಲ ಎಂದು ಹೇಳಿರುತ್ತಾರೆ. ಆನ್ ಗೋಯಿಂಗ್ ಪ್ರೋಗ್ರಾಂಸ ಯಾವುವು ಇವೆ, ಪ್ರಾಜೆಕ್ಟ್ಸ್ ಯಾವುವು ಇವೆ, ಅವು ಯಾವೂ ಕೂಡ ಬಜೆಟ್‌ನಲ್ಲಿ ಮೆನ್‌ಷನ್ ಮಾಡುವುದಕ್ಕೆ ಹೋಗಿಲ್ಲ. ಉದಾಹರಣೆಗೆ, ನಮ್ಮ ಸುಬ್ರಹ್ಮಣ್ಯ ನಾಯ್ಡುರವರು, ಬೆಂಗಳೂರಿನಿಂದ ಗೆದ್ದು ಬಂದವರು, ಬೆಂಗಳೂರಿನಿಂದ 12 ಜನ ಗೆದ್ದು ಬಂದಿದ್ದಾರೆ, ಬೆಂಗಳೂರು ಸಿಟಿಯಿಂದ ಹಾಗೂ ಹೊರಗಡೆ 4 ಜನ ಅರ್ಬನ್ ಡಿಸ್ಟ್ರಿಕ್‌ನಿಂದ ಒಟ್ಟಾರೆ 16 ಜನ ಗೆದ್ದು ಬಂದಿದ್ದಾರೆ. ಬೆಂಗಳೂರು ಅನ್ನು ಇವರು ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಾರೆಂದು ಮಾತನಾಡಿದ್ದಾರೆ. ಬೆಂಗಳೂರನ್ನು ಮರೆಯುವ ಪ್ರಶ್ನೆಯೇ ಇಲ್ಲ. ಏಕೆಂದರೆ, ಬೆಂಗಳೂರನ್ನು ಏಕೆ ಮೆರಯುವುದು? ಬೆಂಗಳೂರಿನಲ್ಲಿ ಹಿಂದಿನ ಸರ್ಕಾರ ಏನು ಟಾಸ್ಕ್‌ಫೋರ್ಸ್ ರಚನೆ ಮಾಡಿವೆ ಅವೆಲ್ಲಾ ಮುಂದುವರಿಯುತ್ತವೆ, ಅವು ಏನು ವರದಿಗಳು ಕೊಡುತ್ತಾರೆ ಅದಕ್ಕೆಲ್ಲಾ ನಮ್ಮ ಸಹಕಾರ ಇರುತ್ತದೆ ಅದನ್ನು ಜಾರಿ ಮಾಡತಕ್ಕಂಥ ಕೆಲಸ ನಡೆದಿದೆ. ಈಗ ದೇವನಹಳ್ಳಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ, ಅದಕ್ಕೆ 70 ಕೋಟಿ ರೂಪಾಯಿ ಈ ಬಜೆಟ್‌ನಲ್ಲಿ ಇಟ್ಟಿದ್ದೇವೆ. ಬೆಂಗಳೂರು ಸುತ್ತ 7 ಸಿಎಂಸಿಗಳು ಇವೆ. ಅವುಕ್ಕೆಲ್ಲಾ ಕುಡಿಯುವ ನೀರಿಗಾಗಿ 30 ಕೋಟಿ ರೂ. ಇಟ್ಟಿದ್ದೇವೆ. ಮಾನ್ಯ ಕೃಷ್ಣಪ್ಪನವರು ಇಲ್ಲಿಯೇ ಇದ್ದಾರೆ. ಎಲ್ಲಾ ಹೇಳಿದ್ದೇವೆ, ಮತ್ತೆ ಮರೆಯುವುದೆಲ್ಲಿ ಸುಬ್ರಹ್ಮಣ್ಯ ನಾಯ್ಡುರವರೆ? ಎಲ್ಲಾ ಇನ್‌ಫ್ರಾಸ್ಟ್ರಕ್ಚರ್, ಎಲ್ಲೆಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ, ಮೂಲಭೂತ ಸೌಕರ್ಯಗಳ ಕಾರ್ಯಕ್ರಮಗಳೇನು ನಡೆಯುತ್ತಿವೆ, ಅವು ಎಲ್ಲಾ ನಡೆಯುತ್ತವೆ, ಅವುಗಳಿಗೆ ಬೇಕಾದಂಥ ಎಲ್ಲಾ ಸಹಕಾರ ರಾಜ್ಯ ಸರ್ಕಾರ ಕೊಡುತ್ತದೆ. ಈಗ ಕಾರ್ಪೋರೇಷನ್‌ನಲ್ಲಿ ಸಾಲ ಎತ್ತಿ ಕಾರ್ಯಕ್ರಮಗಳನ್ನು ಮಾಡಿದರೆ ನಾವು ಗೌರ್ನಮೆಂಟ್ ಗ್ಯಾರಂಟಿ ಕೊಡುವುದಿಲ್ಲವೆ? ಆದ್ದರಿಂದ, ಬೆಂಗಳೂರು ನಗರವನ್ನು ನೆಗ್ಲೆಕ್ಟ್ ಮಾಡಿದ್ದಾರೆಂದು ಕೆಲವು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ನಗರದಿಂದ ರಾಜ್ಯದ ಒಟ್ಟು ಜಿ.ಡಿ.ಪಿ.ಗೆ 50 ಪರ್ಸೆಂಟ್‌ನಷ್ಟು ಆದಾಯ ಬರುತ್ತಿದೆ. ನಮ್ಮ ರಾಜ್ಯದ ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್‌ನ ಅರ್ಧದಷ್ಟು ಬೆಂಗಳೂರು ನಗರದಿಂದಲೇ ಬರುತ್ತಿದೆ. ಆದ್ದರಿಂದ ಬೆಂಗಳೂರು ನಗರವನ್ನು ನಾವು ಉಪೇಕ್ಷೆ ಮಾಡಿದ್ದೇವೆ ಎನ್ನತಕ್ಕಂಥ ಭಾವನೆಗಳು ಯಾರಲ್ಲಿಯಾದರೂ ಇದ್ದರೆ, ಆ ರೀತಿಯಾದ ಒಂದು ಭಾವನೆಗಳನ್ನು ತಮ್ಮಗಳ ತಲೆಗಳಿಂದ ತೆಗೆದು ಹಾಕಬೇಕೆಂದು ಈ ಸಂದರ್ಭದಲ್ಲಿ

ವಿನಯದಿಂದ ಬೆಂಗಳೂರು ನಗರದ ಶಾಸಕರುಗಳಿಗೆ ಮತ್ತು ಬೆಂಗಳೂರು ಜನತೆಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಕೆಲವರು ಐ.ಟಿ. ಬಗ್ಗೆ ಮಾತನಾಡಿದ್ದಾರೆ. ಐ.ಟಿ.ಯಲ್ಲಿ ಬೆಂಗಳೂರು ನಗರ ಬಹಳ ಮುಂಚೂಣಿಯಲ್ಲಿರತಕ್ಕಂಥ ನಗರವಾಗಿದೆ. ಆದರೆ, ಪದೇ ಪದೇ ಇದು ಐ.ಟಿ. ನಗರ ಮತ್ತು ನಾವು ಐ.ಟಿ.ಯಲ್ಲಿ ಅದು, ಇದು ಮಾಡಿದ್ದೇವೆಂದು ಬೆನ್ನು ತಟ್ಟಿಕೊಂಡು ಹೇಳುತ್ತಲೇ ಇರಬೇಕೆ? ಈಗ ಬೆಂಗಳೂರು ನಗರ ಐ.ಟಿ.ಯಲ್ಲಿ ಮುಂಚೂಣಿಯಲ್ಲಿದೆ. ಮತ್ತೆ ಇದು ಹಾಗೆ ಮುಂದುವರಿದುಕೊಂಡು ಹೋಗುತ್ತದೆ. ಮತ್ತೆ ಐ.ಟಿ.ಗೆ ನಾವು ಪ್ರೋತ್ಸಾಹ ಕೊಡತಕ್ಕಂಥದ್ದನ್ನು ನಿಲ್ಲಿಸಿದ್ದೇವೆ ಎನ್ನತಕ್ಕಂಥದ್ದೂ ಕೂಡ ಇಲ್ಲ. ಆದರೆ, ಇಲ್ಲೊಂದು ಏನಾಗಿದೆ ಎಂದರೆ, 5 ಪರ್ಸೆಂಟ್ ಟ್ಯಾಕ್ಸ್‌ನ್ನು 12 ಪರ್ಸೆಂಟ್ ಟ್ಯಾಕ್ಸ್ ಮಾಡಿರುವುದಕ್ಕೆ ಕೆಲವು ವಲಯಗಳಲ್ಲಿ ಇದನ್ನೇ ದೊಡ್ಡದಾಗಿ ವ್ಯಾಖ್ಯಾನ ಮಾಡಲಾಗಿದೆ ಮತ್ತೆ ಚರ್ಚೆ ಕೂಡ ಆಗಿದೆ. ಇವತ್ತಿನದಿವಸ ನಮ್ಮಲ್ಲಿ ಐ.ಟಿ. ಇಂಡಸ್ಟ್ರೀಗಳು ಚೆನ್ನಾಗಿ ಬೆಳೆದಿವೆ. 10 ವರ್ಷಗಳ ಹಿಂದೆ 4 ಪರ್ಸೆಂಟ್ ಟ್ಯಾಕ್ಸ್ ಇತ್ತು. ಅವತ್ತಿನದಿವಸಗಳಲ್ಲಿ ಐ.ಟಿ. ಇಂಡಸ್ಟ್ರೀಸ್ ಇನ್ನು ಬಾಲ್ಯಾವಸ್ಥೆಯಲ್ಲಿತ್ತು ಈಗ ಇವು ಚೆನ್ನಾಗಿ ಬೆಳೆದಿವೆ. ಇವತ್ತಿನದಿವಸ ಯಾರಿಗೆ ತೆರಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಅಂಥವರು ಸ್ವಲ್ಪ ತೆರಿಗೆ ಕೊಡಬೇಕಾಗುತ್ತದಲ್ಲವೆ? ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಂಥ ಸಂದರ್ಭದಲ್ಲಿ ಏನು ಹೇಳಿದರೆಂದರೆ, ನೀವು ರಿಸೋರ್ಸ್‌ನ್ನು ಮೊಬಲೈಜ್ ಮಾಡುವುದೆಂದರೆ, ಅಲ್ಲಿಂದ ಸ್ವಲ್ಪ ಕಿತ್ತು ಆ ಕಡೆ ಈ ಕಡೆ ಹಾಕುವುದಲ್ಲ. ಟ್ಯಾಕ್ಸ್ ಬೇಸ್‌ನ್ನೇ ಹೆಚ್ಚು ಮಾಡಬೇಕೆಂದು ಹೇಳಿದರು. ರಿಸೋರ್ಸ್‌ನನ್ನು ಮೊಬಲೈಜ್ ಮಾಡಬೇಕಾದರೆ ಒಂದು ಕಡೆ ಟ್ಯಾಕ್ಸ್ ಬೇಸ್‌ನ್ನು ಹೆಚ್ಚು ಮಾಡಬೇಕಾಗುತ್ತದೆ. ಮತ್ತೆ ಇನ್ನೊಂದು ಕಡೆ ಟ್ಯಾಕ್ಸ್‌ನ್ನು ಎಗ್ಸಮ್ಷನ್ ಮಾಡಬೇಕಾಗುತ್ತದೆ. ಇವೆರಡೂ ಒಂದು ರೀತಿಯಲ್ಲಿ ಕಾಂಟ್ರಡಿಕ್ಷನ್, ಕ್ಯಾಷ್ ಬೇಸ್ ಹೆಚ್ಚಾಗಬೇಕು. ಮತ್ತು ರಾಜ್ಯದ ಸಂಪನ್ಮೂಲಗಳು ಹೆಚ್ಚಾಗಬೇಕು. ಮತ್ತೆ ತೆರಿಗೆ ಸಂಗ್ರಹಣೆ ಹೆಚ್ಚಾಗಬೇಕು. ಹಾಗೆಯೇ ಎಗ್ಸಮ್ಷನ್‌ಗಳು ಕೂಡ ಆಗಬೇಕು. ಮತ್ತೆ ತೆರಿಗೆಗಳನ್ನೂ ಕೂಡ ಹೆಚ್ಚು ಮಾಡಬಾರದು ಎನ್ನತಕ್ಕಂಥ ವಾದಗಳು ಕೂಡ ಇವೆ. ಈ ಎರಡು ವಾದಗಳನ್ನು ಸರಿದೂಗಿಸಿಕೊಂಡು ಒಟ್ಟಿಗೆ ತರುವುದು ಕಷ್ಟ. ಈ ಒಂದು ಕಾರಣಗಳಿಂದ ನಾನು ಹೇಳುವುದೇನೆಂದರೆ, ಯಾರಿಗೆ ತೆರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅವರು ಸ್ವಲ್ಪ ಕೊಡಲಿ ಎಂದು ಮಾಡಿದ್ದೇವೆ. ಏಕೆಂದರೆ, ನಾವು ಈಗ ಬಡವರಿಗೆ ಅಕ್ಕಿ ಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ದಾಸೋಹ ಯೋಜನೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಸಮಯದಲ್ಲಿ ಊಟ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಮತ್ತು ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಗುವಂಥ ವ್ಯವಸ್ಥೆ ಮಾಡಬೇಕು. ಇದಕ್ಕೆಲ್ಲಾ ಹಣ ಬೇಕಾಗುತ್ತದೆ. ಇದ್ದಕ್ಕಿದ್ದ ಹಾಗೆ ಜಾದು ಮಾಡಿ ಹಣ ಪಡೆಯುವುದಕ್ಕೆ ಆಗುವುದಿಲ್ಲ. ಮತ್ತೆ ಇದ್ದಕ್ಕಿದ್ದ ಹಾಗೆ ರಿಸೋರ್ಸ್‌ನ್ನು ಪವಾಡ ಮಾಡಿ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ತೆರಿಗೆಯನ್ನು ಕೊಡುವುದಕ್ಕೆ ಯಾರಿಗೆ ಸಾಧ್ಯವಾಗುತ್ತದೆ ಅಂಥ ಕಡೆಯಿಂದ ಸ್ವಲ್ಪ ತೆರಿಗೆ ಹಣವನ್ನು ಪಡೆಯುವುದಕ್ಕೆ ಈ ರೀತಿ ಮಾಡಲಾಗಿದೆ. ಆದ್ದರಿಂದ ಐ.ಟಿ. ಸಂಸ್ಥೆಗಳು ಪಲಾಯನ ಮಾಡುತ್ತಾರೆಂದು ಹೇಳಿದ್ದೀರಿ. ಮಾನ್ಯ ಪ್ರೇಮ್‌ಜಿರವರು ನಾವು ಪಲಾಯನ ಮಾಡುತ್ತೇವೆಂದು ಏನೂ ಹೇಳಿಲ್ಲ. ಇಲ್ಲಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡಿ ಎಂದು ಹೇಳಿದ್ದಾರೆ. ಅಂದರೆ, ರಸ್ತೆಗಳನ್ನು ಚೆನ್ನಾಗಿ ಮಾಡಿ ಮತ್ತು ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಚೆನ್ನಾಗಿರುವಂತೆ ಮಾಡಿ ಮತ್ತು ಇಂಟರ್‌ನ್ಯಾಷನಲ್

ಏರ್ ಪೋರ್ಟ್‌ನ್ನು ಮಾಡಬೇಕೆಂದು ಮತ್ತು ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿರಬೇಕೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 2004–2005ನೇ ಸಾಲಿನಿಂದ ಇಡೀ ದೇಶದಲ್ಲಿಯೇ ವ್ಯಾಟ್ ಜಾರಿಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ 2004–2005ನೇ ಸಾಲಿನಲ್ಲಿ ಅಂದರೆ 1ನೇ ಏಪ್ರಿಲ್ 2005ನೇ ಇಸವಿಯಿಂದ ವ್ಯಾಟ್ ಪದ್ಧತಿ ಇಡೀ ದೇಶದಲ್ಲಿ ಬರತಕ್ಕಂಥ ಸಾಧ್ಯತೆ ಇದೆ. ವ್ಯಾಲ್ಯೂ ಆ್ಯಡೆಡ್ ಟ್ಯಾಕ್ಸ್ ಬಂದಾಗ ಇಡೀ ದೇಶದಲ್ಲಿ ಎಲ್ಲಾ ಕಮಾಡಿಟಿಸ್ ಸಮಾನ ರೇಟ್‌ಗೆ ಬರುತ್ತದೆ. ಈ ರಾಜ್ಯದಿಂದ ಆ ರಾಜ್ಯಕ್ಕೆ ವಹಿವಾಟು ಹೊರಟು ಹೋಯಿತೆಂದು ಮತ್ತು ಈ ರಾಜ್ಯದ ತೆರಿಗೆ ಜಾಸ್ತಿ ಮತ್ತು ಆ ರಾಜ್ಯದ ತೆರಿಗೆ ಕಡಿಮೆ ಎನ್ನತಕ್ಕಂಥ ಪರಿಸ್ಥಿತಿ ಇದರಿಂದ ನಿವಾರಣೆಯಾಗುತ್ತದೆ. ಇದಕ್ಕೋಸ್ಕರವೇ ನಾವು ವ್ಯಾಟ್‌ಗೂ ಕೂಡ ಎಲ್ಲಾ ಸಿದ್ಧತೆಗಳನ್ನು ಪ್ರಾರಂಭ ಮಾಡಿದ್ದೇವೆ. ಈ ಸಾರಿ ತೆರಿಗೆ ವಸೂಲಿ ಸರಿಯಾಗಲೆಂದು ಅದಕ್ಕೆ ಪೂರಕವಾಗಿ, ನಾನು ಹಿಂದೆ ಹಣಕಾಸಿನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ವ್ಯಾಟ್ ತೆರಿಗೆ ಪದ್ಧತಿ ಬರುತ್ತದೆಂದು 98 ಪರ್ಸೆಂಟ್ ನಷ್ಟು ಕಮಾಡಿಟಿಗಳನ್ನು 3 ರೇಟ್‌ನಲ್ಲಿ ಬರುವಂತೆ ಮಾಡಿದ್ದೇವೆ. ಅಂದರೆ 2–4–8 ರೇಟ್‌ನಲ್ಲಿ ಬರುವಂತೆ ಮಾಡಿದ್ದೇವೆ. ಇದರಲ್ಲಿ ಕೆಲವು ಸ್ಪೆಷಲ್ ರೇಟ್‌ಗಳನ್ನು ಬಿಟ್ಟು ಉಳಿದ 99 ಪರ್ಸೆಂಟ್‌ನಷ್ಟು ಕಮಾಡಿಟಿ ಈ ಮೂರು ರೇಟಿನಲ್ಲಿತು. ಮುಂದಿನ ವರ್ಷ 1ನೇ ತಾರೀಖು ಏಪ್ರಿಲ್ ತಿಂಗಳಿಂದ ಮತ್ತೆ ರ್‍ಯಾಷನಲೈಜೇಶನ್ ಆಗುತ್ತಿದೆ. ನಾವು ಸ್ವಲ್ಪ ಇಲ್ಲಿ ರ್‍ಯಾಷನಲೈಜೇಶನ್ ಮಾಡಿದ್ದೇವೆ. ಅಂದರೆ, 14 ರೇಟ್‌ಗಳಿದ್ದಂಥವುಗಳನ್ನು ಈಗ 7 ರೇಟ್‌ಗೆ ಇಳಿಸಿದ್ದೇವೆ. ಇದರಲ್ಲಿ ನಾಲ್ಕು ಬೇಸಿಕ್ ರೇಟ್. ಅಂದರೆ, 4–8–12–16– ಈ ರೀತಿಯಾಗಿ ನಾಲ್ಕು ಬೇಸಿಕ್ ರೇಟ್ ಮಾಡಲಾಗಿದೆ. 1, 20 ಮತ್ತು 28 ಸ್ಪೆಷಲ್ ರೇಟ್ಸ್. ಅಂದರೆ, 9 ಬೇಸಿಕ್ ರೇಟ್ಸ್‌ನಿಂದ 4 ಬೇಸಿಕ್ ರೇಟ್ಸ್‌ಗೆ ಇಳಿಸಿದ್ದೇವೆ. ಮತ್ತೆ 5 ಸ್ಪೆಷಲ್ ರೇಟ್ಸ್‌ನಿಂದ 3 ಸ್ಪೆಷಲ್ ರೇಟ್ಸ್‌ಗೆ ಇಳಿಸಿದ್ದೇವೆ. ಈಗಾಗಲೇ ರ್‍ಯಾಷನಲೈಜೇಶನ್‌ನಲ್ಲಿ ಡೀಸಲ್ 17.5 ಪರ್ಸೆಂಟ್ ನಷ್ಟು ಇತ್ತು. ಮತ್ತೆ ಇದಕ್ಕೆ ಇನ್ನೊಂದು ಸ್ಪೆಷಲ್ ರೇಟ್ ಇರುವುದು ಬೇಡವೆಂದು ಅದನ್ನು 20 ಪರ್ಸೆಂಟ್‌ಗೆ ಮಾಡಿದ್ದರಿಂದ ಒಂದು ಲೀಟರ್ ಡೀಸಲ್‌ಗೆ 0.55 ಪೈಸೆ ಜಾಸ್ತಿಯಾಗಿದೆ. 17.5 ಯಿಂದ 20.00 ಪರ್ಸೆಂಟ್ ಜಾಸ್ತಿ ಮಾಡಿದ್ದರಿಂದ ಡೀಸಲ್ ಬೆಲೆಯಲ್ಲಿ 0.55 ಪೈಸೆ ಹೆಚ್ಚಾಯಿತು. ಮತ್ತೆ ಸೀಮೆಂಟ್ ರೇಟ್ ಜಾಸ್ತಿಯಾಗಿದೆ ಎಂದು ಇಲ್ಲಿ ಚರ್ಚೆಯಾಯಿತು. ಸೀಮೆಂಟ್ ರೇಟ್ ಜಾಸ್ತಿಯಾಗಿಲ್ಲ. ಹೇಗೆಂದರೆ, ಇದಕ್ಕೆ 15 ಪರ್ಸೆಂಟ್‌ನಷ್ಟು ಬೇಸಿಕ್ ರೇಟ್ ಇತ್ತು. ಮತ್ತೆ 5 ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಇತ್ತು. ಇವತ್ತಿನದಿವಸ ಇದರ ಎಫೆಕ್ಟೀವ್ ರೇಟ್ 15+5 ಪರ್ಸೆಂಟ್ ಅಂದರೆ ಟೋಟಲ್, 20 ಪರ್ಸೆಂಟ್‌ನಷ್ಟೆ ಇತ್ತು. 15% basic rate and 5% entry tax. Both put together, the effective rate is 20%. ಆದರೆ, ನಾನು ಈಗ 15ರ ರೇಟ್ ತೆಗೆದು 20 ಪರ್ಸೆಂಟ್ ಮಾಡಿದ್ದು, ಮೊದಲು ಇದ್ದಂಥ ಎಂಟ್ರಿ ಟ್ಯಾಕ್ಸ್‌ನ್ನು ತೆಗೆದು ಹಾಕಲಾಗಿದೆ. ಆದ್ದರಿಂದ, there is no entry tax on that. So, there is no change at all. ಇದರಲ್ಲಿ ಯಾವುದೇ ರೀತಿ ಬದಲಾವಣೆಯಾಗಿಲ್ಲ. ಸೀಮೆಂಟ್ ಬೆಲೆಯಲ್ಲಿ ಒಂದು ಪೈಸೆ ಹೆಚ್ಚು ಆಗಿಲ್ಲ ಅಥವಾ ಕಡಿಮೆ ಕೂಡ ಆಗಿಲ್ಲ. ಇದು 20 ಪರ್ಸೆಂಟ್‌ನಲ್ಲಿಯೇ ಇದೆ. ಆದರೆ ಈಗ ಸ್ಪೆಷಲ್ ರೇಟ್‌ನಲ್ಲಿ ಬರುತ್ತದೆಯಷ್ಟೆ. ಮತ್ತೆ ಕೊಬ್ಬರಿ ಎಣ್ಣೆಯ ಮೇಲೆ ಇರತಕ್ಕಂಥ

ಟ್ಯಾಕ್ಸನ್ನು ಹೆಚ್ಚು ಮಾಡಿದ್ದಾರೆಂದು ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಮೊದಲು ಯಾವರೀತಿ ಇತ್ತೆಂದರೆ, ಎರಡು ಕೆ.ಜಿ. ಬ್ರಾಂಡೆಡ್ ಕೊಬ್ಬರಿ ಎಣ್ಣೆಗೆ 20 ಪರ್ಸೆಂಟ್ ಇತ್ತು. ಮತ್ತೆ 4 ಪರ್ಸೆಂಟ್ ಎಡಿಬಲ್ ಆಯಿಲ್‌ಗೆ ಇತ್ತು. ಅಂದರೆ ಅಡಿಗೆ ಮತ್ತು ಬೇರೆ ಬೇರೆ ಉಪಯೋಗಿಸುವಂಥ ಎಣ್ಣೆಗೆ 4 ಪರ್ಸೆಂಟ್ ಇತ್ತು. ಇದರಲ್ಲಿ ತೆರಿಗೆ ಕಳ್ಳತನ ಮತ್ತು ಸೋರುವಿಕೆ ಕೂಡ ಆಗುತ್ತಿತ್ತು. ಆದ್ದರಿಂದ, ಎನ್‌ಫೋರ್ಸ್ ಮೆಷರ್‌ಮೆಂಟ್ ಎಂದು ಮಾಡಿ ಬ್ರಾಂಡ್ ಮತ್ತು ಅನ್ ಬ್ರಾಂಡ್ ಎನ್ನತಕ್ಕಂಥದನ್ನು ಈಗ ತೆಗೆದು ಹಾಕಿದ್ದೇವೆ. ತಲೆಗೆ ಉಪಯೋಗಿಸತಕ್ಕಂಥ 200 ಮಿ.ಲೀ. ಕೊಬ್ಬರಿ ಎಣ್ಣೆ ಕಂಟೈನರ್‌ಗೆ ಮಾತ್ರ 20 ಪರ್ಸೆಂಟ್ ಇದೆ. ಇವತ್ತಿನದಿವಸ ನಾರ್ತ್ ಮತ್ತು ಸೌತ್ ಕೆನರಾದ ಜನರು ಹೆಚ್ಚಾಗಿ ಕೊಬ್ಬರಿ ಎಣ್ಣೆಯನ್ನು ಅಡುಗೆ ಮಾಡುವುದಕ್ಕೆ ಉಪಯೋಗ ಮಾಡತಕ್ಕಂಥದ್ದು ನನಗೆ ಗೊತ್ತಿದೆ. ಆದ್ದರಿಂದ, ಅಡುಗೆಗೆ ಉಪಯೋಗ ಮಾಡತಕ್ಕಂಥ ಕೊಬ್ಬರಿ ಎಣ್ಣೆಗೆ 5 ಪರ್ಸೆಂಟ್ ನಿಂದ 4 ಪರ್ಸೆಂಟ್ ಆಗಿದೆಯೇ ಹೊರತು: 1 ಪರ್ಸೆಂಟ್‌ನಷ್ಟು ಹೆಚ್ಚಾಗಿಲ್ಲ. ಅಡುಗೆ ಪರ್ಪ್‌ಸ್‌ಗೋಸ್ಕರ ಉಪಯೋಗಿಸತಕ್ಕಂಥ ಕೊಬ್ಬರಿ ಎಣ್ಣೆಗೆ 5 ರಿಂದ 4 ಪರ್ಸೆಂಟ್ ಆಗಿದೆಯೇ ವಿನಹ ಇದಕ್ಕೆ ತೆರಿಗೆ ಹೆಚ್ಚಾಗಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದ್ದರಿಂದ ಕೊಬ್ಬರಿ ಎಣ್ಣೆ ದುಬಾರಿಯಾಗಿದ್ದು, ಈಗ 20 ಪರ್ಸೆಂಟ್ ಆಗಿರುವುದರಿಂದ ಸೌತ್ ಕೆನರಾ ಮತ್ತು ಮಂಗಳೂರು ಭಾಗದಲ್ಲಿ ಉಪಯೋಗಿಸತಕ್ಕಂಥ ಜನತೆಗೆ ಇದು ಬಹಳ ದುಬಾರಿಯಾಯಿತು ಎನ್ನತಕ್ಕಂಥ ಸಂಶಯವನ್ನು ಕೂಡ ನಾನು ನಿವಾರಣೆ ಮಾಡುತ್ತಿದ್ದೇನೆ. ಅಂದರೆ ಇದೂ ಕೂಡ ಹೆಚ್ಚು ಮಾಡಿಲ್ಲ. ಇನ್ನು ಗ್ರಾನೈಟ್ ಬಗ್ಗೆ ಹೇಳುವುದಾದರೆ, ಇದರ ಪ್ರೋಸೆಸಿಂಗ್‌ಗೆ ಸಿ.ಎಸ್.ಟಿ. 4 ಪರ್ಸೆಂಟ್‌ನಷ್ಟು ಇತ್ತು. ರಫ್ ಮತ್ತು ಪಾಲೀಶ್ ಗ್ರಾನೈಟ್‌ಗೆ ಎರಡು ಸಾರಿ ತೆರಿಗೆ ಹಾಕಬಾರದೆಂದು ಇದನ್ನು ತೆಗೆದು ಹಾಕಲಾಗಿದೆ. ಆದರೆ, ಪಾಲೀಶ್ಡ್ ಗ್ರಾನೈಟ್‌ಗೆ 20 ಪರ್ಸೆಂಟ್‌ನಷ್ಟೇ ಇದೆ. ಇದರಲ್ಲಿ ಕೂಡ ಹೆಚ್ಚು ಕಡಿಮೆ ಇಲ್ಲ. ಯಾರೋ ಶ್ರೀಮಂತರಿಗೆ ಅನುಕೂಲ ಮಾಡುವುದಕ್ಕೆ ಲಾಭಿಗೆ ಒಳಗಾಗುತ್ತಿದ್ದಾರೆ, ನಮಗೆ ಯಾರ ಲಾಭಿಯಿಂದ ಏನೂ ಇನ್‌ಫ್ಲೂಯೆನ್ಸ್ ಮಾಡುವುದಕ್ಕಾಗುವುದಿಲ್ಲ. We are very, very clear. ನಾವು ಯಾರ ಮುಲಾಜಿನಲ್ಲೂ ಕೂಡ ಇಲ್ಲ. ನಾವು ಯಾರ ಮೂಲಾಜಿಗೂ ಒಳಗಾಗುವ ಅಗತ್ಯವಿಲ್ಲ. ಯಾರ ಲಾಭಿಯೂ ನಮ್ಮ ಮೇಲೆ ಪ್ರಭಾವವನ್ನು ಬೀರಲಾರದು. ಈಗ ನಾವು ಎಕ್ಸೈಸ್ ಮೇಲೆ ಹೊಸ ಪಾಲಿಸಿ ಮಾಡಿದ್ದೇವೆ. ನಾವು ಮುಲಾಜಿಗೆ ಒಳಗಾಗಿದ್ದರೆ ಮಾಡುತ್ತಿದ್ದೇವಾ? ಆ ರೀತಿ ಇದ್ದರೆ ನಾವು ಹೊಸ ಪಾಲಿಸಿಯನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಈಗ ಮಾನ್ಯ ವೀರಪ್ಪಮೊಯಿಲಿಯವರು ತೆರಿಗೆ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಒಂದು ವರದಿಯನ್ನು ಕೊಟ್ಟಿದ್ದರು. ಅಬ್ಕಾರಿಯಲ್ಲಿ ಬಹಳ ಸೋರಿಹೋಗುತ್ತದೆ ಎಂದು ಹೇಳಿದ್ದರು. ಅದನ್ನೂ ಸಹ ಗಮನದಲ್ಲಿಟ್ಟುಕೊಂಡು ಹಿಂದೆ 2002ನೇ ಇಸವಿಯಲ್ಲಿ ಪಾನೀಯ ನಿಗಮವನ್ನು ಮಾಡಿ ಐ.ಎಂ.ಎಲ್. ನಲ್ಲಿ ಸೆಕೆಂಡ್ಸ್ ಥರ್ಡ್ಸ್ ಹೋಗುತ್ತಿತ್ತು. ಅದನ್ನು ಬಹುತೇಕವಾಗಿ ನಿಲ್ಲಿಸತಕ್ಕಂತಹ ಕೆಲಸವಾಗಿದೆ. ಹಾಗೆಯೇ ತೆರಿಗೆಯೂ ಕೂಡ ಹೆಚ್ಚಾಗಿದೆ, ಹಿಂದಿನ ಸರ್ಕಾರದಲ್ಲಿ ಪಾನೀಯ ನಿಗಮವನ್ನು ಮಾಡಿದ ಮೇಲೆ ಐ.ಎಂ.ಎಲ್. ಗೋಸ್ಕರ ಅಲ್ಲಿ ತೆರಿಗೆಯೂ ಹೆಚ್ಚಾಗಿದೆ, ಇಲ್ಲಿ ಸಾರಾಯಿ ಇದೆಯಲ್ಲಾ ಸಾರಾಯಿಯಲ್ಲಿ ಸೋರಿ ಹೋಗುವುದು ಇರುತ್ತಿತ್ತು. ಸೆಕೆಂಡ್ಸ್ ಥರ್ಡ್, ಇವೆಲ್ಲವೂ ನಡೆಯತಕ್ಕಂಥದ್ದು ಇತ್ತು. ಇದಕ್ಕೂ ಕೂಡ ನಾಂದಿ ಹಾಡಬೇಕೆಂದು ಹೇಳಿ ಈ ಸಾರಿ ಹೊಸ ಸಾರಾಯಿ ನೀತಿಯನ್ನು ನಮ್ಮ ಆಯವ್ಯಯದಲ್ಲಿ ತಿಳಿಸಿದ್ದೇವೆ. ಇದರಿಂದ ಸರ್ಕಾರಕ್ಕೆ

ಸುಮಾರು 300–400 ಕೋಟಿ ರೂಪಾಯಿಗಳು ಹೆಚ್ಚು ಬರುವ ಸಾಧ್ಯತೆ ಇದೆ. ನಾನು ಇದರ ಬಗ್ಗೆ ಹೆಚ್ಚು ಹೇಳದೆಯೇ ಸಾರಾಯಿಯೂ ಕುಡ ಭಟ್ಟಿ ಸಾರಾಯಿ ಕುಡಿಯುವುದು, ಕಳಪೆ ಗುಣಮಟ್ಟದ ಸಾರಾಯಿಯನ್ನು ಕುಡಿಯುವುದು. ಈ ತರಹದ್ದೂ ಕೂಡ ನಿಲ್ಲಬೇಕು. ಈಗ ರೆಕ್ಟಿಫೈಡ್ ಸ್ಪಿರಿಟ್ ಎಲ್ಲಿಂದಲೋ ಬರುತ್ತದೆ, ಹೊರರಾಜ್ಯದಿಂದ ಮತ್ತು ಗೋವಾದಿಂದ ಬರುತ್ತದೆ. ರಾಜಾಸ್ಥಾನದಿಂದ ಬರುತ್ತದೆ, ಬೇರೆ ಬೇರೆ ರಾಜ್ಯಗಳಿಂದಲೂ ಸಹ ಬರುತ್ತದೆ. ನಿಮ್ಮ ಹತ್ತಿರ ಎನ್‌ಫೋರ್ಸ್‌ಮೆಂಟ್ ಇಲ್ಲವೋ ಎಂದು ನೀವು ಕೇಳಬಹುದು. ಅದನ್ನು ಏತಕ್ಕೆ ಬರುವುದಕ್ಕೆ ಬಿಟ್ಟಿದ್ದೀರಿ? ಇದೊಂದು ರೋಗ, ಇದನ್ನು ನಿಲ್ಲಿಸುವುದಕ್ಕಾಗಲಿಲ್ಲ. ಇದು ಹಿಂದಿನಿಂದಲೂ ಕೂಡ ಬೆಳೆದುಕೊಂಡು ಬಂದಂತಹ ರೋಗವಾಗಿದೆ. ಭಟ್ಟಿ ಸಾರಾಯಿ ಕುಡಿಯುವುದು, ಸೆಕೆಂಡ್ಸ್ ಮಾರಾಟ ಮಾಡುವುದು ಮತ್ತೆ ಇದರಲ್ಲಿ ಅವರ ಮುಲಾಜುಗಳು, ಇದನ್ನು ಕೊನೆಗಾಣಿಸಬೇಕೆಂದು ನಾವು ಹೊಸ ಪಾಲಿಸಿಯನ್ನು ಮಾಡಿದ್ದೇವೆ. ಇದರಿಂದಾಗಿ ರಾಜ್ಯಕ್ಕೆ ಸೋರಿ ಹೋಗುತ್ತಿದ್ದಂತಹ ಆದಾಯ ಬಹುತೇಕವಾಗಿ ರಾಜ್ಯಸರ್ಕಾರಕ್ಕೆ ಬರತಕ್ಕಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಈ ಹೊಸ ನೀತಿಯ ಮೂಲಕ ಮಾಡಿದ್ದೇವೆ. ಏಕೆಂದರೆ ಸೆಕೆಂಡ್ಸ್ ಕಡಿಮೆ ರೇಟ್‌ನಲ್ಲಿ ಸಿಗುತ್ತದೆ, ಅರ್ರ್ಯಾಕ್ ಮಾರುಕಟ್ಟೆಯಲ್ಲಿ ಸಿಗುವುದಕ್ಕಿಂತ ಡ್ಯೂಟಿ ಪೈಡ್ ಅರ್ರ್ಯಾಕ್‌ಗಿಂತ ಯಾವಾಗಲೂ ಕೂಡ ಸಾಮಾನ್ಯವಾಗಿ ನಾನ್–ಡ್ಯೂಟಿ ಫೈಡ್ ಅರ್ರ್ಯಾಕ್ ಕಡಿಮೆಗೆ ಸಿಗುತ್ತದೆ. ಇದರಲ್ಲಿ ಎರಡು ತರಹ ಇರುತ್ತದೆ. ಅದು ಎರಡು ರೂಪಾಯಿಗಳಿಗೆ ಸಿಗುತ್ತದೆ. ಅಲ್ಲಿ 10 ರೂಪಾಯಿಗಳನ್ನು ಕೊಟ್ಟು ಒಂದು ಪ್ಯಾಕೇಟನ್ನು ಕುಡಿಯುವ ಬದಲು ಇಲ್ಲಿ ಎರಡು ರೂಪಾಯಿಗಳನ್ನು ಕೊಟ್ಟು ಕುಡಿದುಬಿಡುತ್ತಾರೆ. ಸಾರಾಯಿಗೆ ಏನೇನು ಹಾಕಿ ಮಾಡುತ್ತಾರೋ ಗೊತ್ತಿಲ್ಲ, ಸಾರಾಯಿಗೆ ಸುಮ್ಮನೆ ನೀರನ್ನು ಕಲೆಸಿ ಕೊಡುವುದು ಅಷ್ಟೇನೇ ರೆಕ್ಟಿಫೈಡ್ ಸ್ಪಿರಿಟ್‌ಗೆ ನೀರನ್ನು ಸೇರಿಸಿ ಆ ಕಾನ್ಸ್‌ಟ್ರೇಷನ್ ಹೇಗೆ ಇರಬೇಕೆಂದು ನೋಡಿಕೊಂಡು ಕೊಡುವುದು ಅಷ್ಟೇ. ಅದಕ್ಕೆ ಎಷ್ಟೆಷ್ಟು ಹಾಕುತ್ತಾರೋ ಏನೋನೋ ಗೊತ್ತಿಲ್ಲ. ನಿಶೆ ಬರಬೇಕಲ್ಲಾ? ಆ ನಿಶೆ ಬರುವುದಕ್ಕೆ ಏನೇನೋ ಮಾಡಿಬಿಟ್ಟು ಯಾವಾಗಲೂ ಸಾಮಾನ್ಯವಾಗಿ ಜನರು ಕಿಕ್ ಆಗುವುದನ್ನೆ ಜಾಸ್ತಿ ಕುಡಿಯುತ್ತಾರೆ. ಕಿಕ್ ಆಗದಿರುವುದನ್ನು ಜನರು ಕುಡಿಯುವುದಿಲ್ಲ. ಏನು ಗುರುಪಾದಪ್ಪನವರೇ? ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರಿಗೆ ಕೇಳಿದರೆ ಗೊತ್ತಿರುವುದಿಲ್ಲ.

ಶ್ರೀ ಬಾದರ್ಲಿ ಹಂಪನಗೌಡ : ಇದರ ಬಗ್ಗೆ ಎಸ್.ಎಸ್. ಪಾಟೀಲರನ್ನು ಕೇಳಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ : ಎಸ್.ಎಸ್. ಪಾಟೀಲ್‌ರವರಿಗೂ ಹಾಗೂ ಯಡಿಯೂರಪ್ಪ–ನವರಿಗೂ ಗೊತ್ತಿಲ್ಲ. ಜಗದೀಶ್‌ಶೆಟ್ಟರಿಗೆ ಗೊತ್ತಾ? ಅವರಿಗೆ ಗೊತ್ತಿದೆ ಎಂಬುದು ನನಗೆ ಗೊತ್ತಿಲ್ಲ. ನನಗೆ ನಿಮ್ಮ ಜೊತೆ ಅಷ್ಟೊಂದು ಒಡನಾಟವಿರಲಿಲ್ಲ. ನಿಮಗೇನಾದರೂ ಅನುಭವವಿದ್ದರೆ ಹೇಳಿ, ನಮಗೆ ಸಂತೋಷ.

ಶ್ರೀ ಅರಗ ಜ್ಞಾನೇಂದ್ರ : ಈ ಸದನದಲ್ಲಿ ಅಧಿಕೃತವಾಗಿ ಹೇಳಬಹುದಾದಂಥವರು ಯಾರು ಅಂತ?

ಶ್ರೀ ಸಿದ್ಧರಾಮಯ್ಯ : ಹೀಗೆ ಒಬ್ಬಿಬ್ಬರು ಎಂದು ಹೇಳುವುದಕ್ಕಾಗುವುದಿಲ್ಲ. ಬಹಳ ಜನರು ಇದ್ದಾರೆ, ಯಾರೋ ಒಬ್ಬರಿಗೆ ಹೇಳಿಬಿಟ್ಟರೆ ಬೇರೆಯವರಿಗೆ ಅವಮಾನವಾಗುತ್ತದೆ. ಆದ್ದರಿಂದ ಇಂತಹವರೇ ಎಂದು ಹೇಳವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಅಧಿಕೃತವಾಗಿ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರು ಹೇಳಿದ್ದರು. ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಪಟೇಲ್‌ರವರಿಗೆ ಪವರ್ ಮತ್ತು ಎಕ್ಸೈಸ್ ಕೊಟ್ಟಿದ್ದರು. ಆದ್ದರಿಂದ ಅವರು ಹೇಳಿದರು 'One gives me a shock and other gives me a kick.' ಎಂದು

Sri Siddaramaiah : One gives shock and other gives kick. The second is the second category.

ಅದಕ್ಕೆ ಮಂಗಳಹಾಡಬೇಕಾದಂತಹ ಕೆಲಸ ಮಾಡಬೇಕೆಂಬ ಪ್ರಯತ್ನವನ್ನು ಮಾಡಿದ್ದೇವೆ. ಬಹುಶಃ ನೀವೆಲ್ಲರೂ ಅದನ್ನು ಅಪ್ರೀಷಿಯೇಟ್ ಮಾಡುತ್ತೀರೆಂದು ನಾನು ನಂಬಿಕೊಂಡಿದ್ದೇನೆ. ಅದರ ಬಗ್ಗೆ ಒಬ್ಬರೂ ಕೂಡ ಮಾತನಾಡದೆ ಹೋಗಿದ್ದೀರಿ. ಅದಕ್ಕಾದರೂ ಸ್ವಲ್ಪ ಬೆನ್ನುತಟ್ಟಿರಿ ಎಂದರೆ ಅದನ್ನೂ ಕೂಡ ಮಾಡಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಮೊಲಾಸಿಸ್ ಬಗ್ಗೆ ಹೇಳಿದ್ದೆ ಅದನ್ನು ತೆಗೆದುಕೊಂಡರೆ ಸೋರಿ ಹೋಗುವುದು ನಿಲ್ಲುತ್ತಿತ್ತು.

ಶ್ರೀ ಸಿದ್ಧರಾಮಯ್ಯ : ಅದನ್ನು ಮಾಡುತ್ತಿದ್ದೇವೆ. ಅದು ಈಗ ಕೇಂದ್ರದಲ್ಲಿದೆ. ಅದು ಬಂದ ಮೇಲೆ ಮೊಲಾಸಿಸ್‌ದ್ದು ಡೀರೆಗ್ಯುಲೇಷನ್ ಬಿಲ್ ಇದೆಯಲ್ಲಾ ಅದು ಕೇಂದ್ರಕ್ಕೆ ಹೋಗಿದೆ. ಅದು ಬಂದ ಮೇಲೆ ಅದನ್ನು ಮಾಡುತ್ತೇನೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ಅದಕ್ಕೆ ಏನು ಮಾಡಿದ್ದೇವೆಂದರೆ, ಈ ಹೊಸ ಪಾಲಿಸಿಯಲ್ಲಿ ಎಲ್ಲಾ ರೆಕ್ಟಿಫೈಡ್ ಸ್ಪಿರಿಟ್ ಇದೆಯಲ್ಲಾ ಅವೆಲ್ಲವೂ ಪಾನೀಯ ನಿಗಮದ ಮೂಲಕ ಹೋಗಬೇಕು. ಅವೆಲ್ಲವೂ ಅಲ್ಲಿಗೆ ಬರಬೇಕಾಗುತ್ತದೆ. ಎಷ್ಟೋ ರೆಕ್ಟಿಫೈಡ್ ಸ್ಪಿರಿಟ್ ಹೋಗುತ್ತದೆ, ಎಷ್ಟು ಪ್ರೊಡೆಕ್ಷನ್ ಆಗುತ್ತದೆಂಬುದರ ಬಗ್ಗೆ ಈಜಿಯಾಗಿ ಗೊತ್ತಾಗುತ್ತದೆ. ಅದರಲ್ಲಿ ಡ್ಯೂಟಿ ಹಾಗೂ ನಾನ್ ಡ್ಯೂಟಿ ಪೈಡ್ ಎಷ್ಟು ಎಂಬುದು ಗೊತ್ತಾಗುತ್ತದೆ. ಇನ್ನೊಂದು ಏತಕ್ಕಾಗಿ ಎನ್‌ಕರೇಜ್ ಮಾಡಬಾರದು, ಸೆಕೆಂಡ್ಸ್‌ನ್ನು ಎಂಕರೇಜ್ ಮಾಡಲೇಬಾರದು ಎಂಬ ಕಾರಣಕ್ಕಾಗಿ ಏನು ಮಾಡಿರುವುದೆಂದರೆ, ಪಾನೀಯ ನಿಗಮವನ್ನು ಮಾಡಿದರೂ ಕೂಡ ಎಕ್ಸೈಡ್ ಡ್ಯೂಟಿಯನ್ನು 50 ಪರ್ಸೆಂಟ್ ಕಡಿಮೆ ಮಾಡಿದೆವು, ಈಗ ನಾವು ಏನು ಮಾಡಿದ್ದೇವೆಂದರೆ, ಅರ್‍ಯಾಕ್ ಮೇಲೆ ಡ್ಯೂಟಿ 20 ರೂಪಾಯಿಗಳು ಇತ್ತಲ್ಲಾ ಅದನ್ನು 18 ರೂಪಾಯಿಗಳಿಗೆ ಇಳಿಸಿ 2 ರೂ. ಮಾತ್ರ ಮ್ಯಾನ್ಯುಫ್ಯಾಕ್ಚರಿಂಗ್ ಪಾಯಿಂಟ್‌ನಲ್ಲಿಟ್ಟುಕೊಂಡಿದ್ದೇವೆ. ಮತ್ತೆ 18 ರೂಗಳು ಸಹ ಇಲ್ಲಿಯೇ ಮರ್ಜ್ ಆಗಬೇಕು. ರೆಂಟಲ್ಸ್‌ನಲ್ಲಿಯೇ ಅದು ಬಂದುಬಿಡಬೇಕು. ಆಗ ಏನಾಗುತ್ತದೆಂದರೆ, ಮಾರ್ಕೆಟ್‌ನಲ್ಲಿ ಮಾರಾಟ ಮಾಡುವಂತಹ ಸಾರಾಯಿ ಮತ್ತೆ ನಾನ್ ಪೈಡ್ ಅರ್‍ಯಾಕ್ ಏನು ಇರುತ್ತದೆಯಲ್ಲಾ ಅದಕ್ಕೂ ಮತ್ತು ಇದಕ್ಕೂ ವ್ಯತ್ಯಾಸವಿರುವುದಿಲ್ಲ. ಯಾವಾಗ ರೇಟ್ ಹೆಚ್ಚು ಕಡಿಮೆ ಇರುವುದಿಲ್ಲ, ಕಳ್ಳಭಟ್ಟಿ ಮತ್ತು ಸೆಕೆಂಡ್ಸ್‌ನ್ನು ಯಾರೂ ಮಾರಾಟ ಮಾಡುವುದಕ್ಕೆ ಹೋಗುವುದಿಲ್ಲ. ಇದು ಉದ್ದೇಶ. ಈ ಉದ್ದೇಶದಲ್ಲಿ ಸಫಲವಾಗುತ್ತೇವೆ ಎಂಬ ವಿಶ್ವಾಸ ನನಗೆ ಇದೆ. ಆದ್ದರಿಂದ ಇದು ಆಗಿಯೇ ಆಗುತ್ತದೆ, ಇನ್ನು ಮುಂದೆ ಎಕ್ಸೈಸ್ ಡಿಪಾರ್ಟ್‌ಮೆಂಟ್ ಮೇಲೆ ಏನೂ ಕಳಂಕ ಇದೆ, ಅದು ಈ ಹೊಸ ಪಾಲಿಸಿಯ ಮೂಲಕ ಹೋಗುತ್ತದೆ, ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ

ಸಾರಿ ಇನ್ನೊಂದು ಹೊಸದಾಗಿ ತೀರ್ಮಾನ ಮಾಡಿದ್ದೇವೆಂದರೆ, ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಕೆಲವರು ಸೊಸೈಟಿಗಳನ್ನು ಮಾಡಿಕೊಂಡು ಹೆಂಡ ಮಾರುತ್ತೇವೆಂದು ಹೇಳಿ ಮಾಡುತ್ತಿದ್ದರು. ಶೇಂದಿ, ಹೆಂಡ ಎಂದು ನಿಮ್ಮ ಕಡೆ ಕರೆಯುವುದಿಲ್ಲವೇ? ಈಚಲ ಗಿಡದಿಂದ ಮಾಡುತ್ತೇವೆ, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ ಈಚಲ ಗಿಡಗಳು ಎಂದು ಬಿಟ್ಟಿತ್ತು. ನಮಗೆ ದೂರು ಏನು ಬಂದಿದೆ ಎಂದರೆ, ಜನರಿಂದ ಮತ್ತು ಬೇರೆಯವರಿಂದ ಅಲ್ಲಿ ಈಚಲಮರಗಳೇ ಇಲ್ಲ ಎಂದು. ಇರಬಹುದು, ಹೆಂಡ ತಯಾರು ಮಾಡುವಷ್ಟು ಈಚಲ ಮರಗಳು ಅಲ್ಲಿ ಇಲ್ಲ. ಅಲ್ಲಿ ಮತ್ತು ಇಲ್ಲಿ ಒಂದೊಂದು ಇರಬಹುದು. ಈಗ ಈಚಲ ಮರಗಳೆಲ್ಲವೂ ಹೋಗಿಬಿಟ್ಟಿದೆ. ಇಡೀ ಕರ್ನಾಟಕದಲ್ಲಿ ಈಚಲ ಮರಗಳೆಲ್ಲಾ ಹೋಗಿದೆ. ನಾವು ಹುಡುಗರಾಗಿದ್ದಾಗ ಎಮ್ಮೆ ಮೇಯಿಸುವುದಕ್ಕೆ ಹೋದಾಗ ಈಚಲ ಮರಗಳನ್ನು ನೋಡುತ್ತಿದ್ದೆವು. ಈಗ ಎಲ್ಲಿಯೂ ಕೂಡ ಈಚಲಮರಗಳು ಇಲ್ಲ. ಈಚಲಮರದಿಂದ ತೆಗೆದು ಹೆಂಡ ಮಾರಾಟ ಮಾಡಬೇಕಾದರೆ ಯಾವುದರಿಂದ ಮಾಡಬೇಕು? ಅಲ್ಲಿ ಕ್ಲೋರೋ ಹೈಡ್ರೇಟ್ ಅನ್ನು ಮಿಕ್ಸ್ ಮಾಡಿ ಕೊಡುತ್ತಿದ್ದರು ಇದರಿಂದ ಜನರ ಹೆಲ್ತ್, ಎಲ್ಲವೂ ಹಾಳಾಗಿ ಹೋಗತಕ್ಕಂಥಹದ್ದು ಆಗುತ್ತಿತ್ತು. ನಾವು ಒಂದು ಕಡೆ ಬಡವರಿಗೆ ಅಕ್ಕಿ ಕೊಡುತ್ತೇವೆಂದು ಹೇಳುವುದು. ಇನ್ನೊಂದು ಕಡೆ ಈ ತರಹದ ಕ್ಲೋರೋ ಹೈಡ್ರೇಟ್‌ಅನ್ನು ಕುಡಿಯತಕ್ಕಂತಹ ವ್ಯವಸ್ಥೆಯನ್ನು ಇಟ್ಟುಕೊಂಡಿರುವುದು. ಇದು ಹೋಗಬೇಕೆಂದು ಈ ಸಾರಿ ಟೋಟಲ್ ಆಗಿ ರಾಯಚೂರು ಗುಲ್ಬರ್ಗಾ ಜಿಲ್ಲೆಗಳ 5–6 ತಾಲ್ಲೂಕುಗಳಲ್ಲಿ ಅದನ್ನು ಈ ಬಾರಿಯಿಂದ ನಿಲ್ಲಿಸಿದ್ದೇವೆ. ಇನ್ನು ಮುಂದೆ ಕಳಪೆಯನ್ನು ಕುಡಿದು ಜನರು ಹಾಳಾಗುವುದನ್ನು ನಾವು ನಿಲ್ಲಿಸಿದ್ದೇವೆ. ಆದರೆ ಸೌತ್ ಕೆನರಾ ಕರಾವಳಿ ಪ್ರದೇಶಗಳಲ್ಲಿ ಸೊಸೈಟಿಗಳು ಏನು ಇವೆ, ಅದು ಮುಂದುವರಿಯುತ್ತವೆ. ಏಕೆಂದರೆ ಇದರ ಬಗ್ಗೆ ಕನ್‌ಫ್ಯೂಷನ್ ಆಗಬಾರದು. ಕರಾವಳಿಯಲ್ಲಿ ತೆಂಗಿನ ಮರಗಳು ಇದೆಯಲ್ಲಾ ಅಲ್ಲಿ ಇದನ್ನೆಲ್ಲವನ್ನೂ ಮಾಡುತ್ತಾರೆ.

1.40 ಪಿ ಎಂ

ಈಕಡೆ ಉತ್ತರ ಕರ್ನಾಟಕ ಮಂಗಳೂರು ರಾಯಚೂರು ಇದೆಯಲ್ಲಾ ಅಲ್ಲಿ ತೆಂಗನ್ನು ಬೆಳೆಯುವುದಿಲ್ಲ. ಅಲ್ಲಿ ಯಾರೂ ತೆಂಗಿನ ತೋಟಗಳನ್ನು ಮಾಡಿಕೊಳ್ಳುವುದು ಕಡಿಮೆ. ಅಲ್ಲಿರತಕ್ಕಂತಹ ಕ್ಲೈಮೇಟ್. ಇನ್ನೊಂದು ಸಾರ್ವಜನಿಕರಿಂದ ಒತ್ತಾಯ ಬಂದಿತ್ತು, ಪವರ್ ಟಿಲ್ಲರ್...

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಟಿಲ್ಲರ್ ಬಗ್ಗೆ ಹೇಳುವುದಕ್ಕೆ ಮೊದಲು ಇನ್ನು ಎಕ್ಸೈಸ್ ಬಗ್ಗೆ ಹೇಳುತ್ತಿರೆಂದು ನಾನು ಕಾಯುತ್ತಾ ಕುಳಿತಿದ್ದೆ. ತಾವು ಸೆಕೆಂಡ್ಸ್ ಬಗ್ಗೆ ಹೇಳಿದ್ದೀರಿ, ಥರ್ಡ್ಸ್ ಬಗ್ಗೆ ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ : ಥರ್ಡ್ಸ್ ಸಹ ನಿಂತುಹೋಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಕಮರಿಪೇಟೆಯಲ್ಲಿ ನಿಲ್ಲಬೇಕಾದರೆ ಚೀಪರ್ ವೆರೈಟೀಸ್ ರೇಟ್‌ನ್ನು ಕಡಿಮೆ ಮಾಡಿದರೆ ಒಳ್ಳೆಯದು. ಎಕ್ಸ್‌ಪೆನ್ಸೀವ್ ಬ್ರಾಂಡ್ ಕಡಿಮೆ ಮಾಡಿದ್ದಾರೆ. ಚೀಪ್ ಬ್ರಾಂಡ್‌ನ್ನು ಕಡಿಮೆ ಮಾಡಿದಾಗ ಮಾನ್ಯ ಜಗದೀಶ್ ಶೆಟ್ಟರ್‌ರವರ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಹುಬ್ಬಳ್ಳಿಯ ಕಮರಿಪೇಟೆ ಇರಬಹುದು, ಇಲ್ಲಿ ಆನೇಕಲ್ ತಾಲ್ಲೂಕಿನಲ್ಲಿ ಆ ಭಾಗದಲ್ಲಿ ನಡೆಯತಕ್ಕಂಥಹದ್ದು ಇರಬಹುದು, ಬೆಂಗಳೂರಿನ ಬಯಲು–ನರಸಾಪುರದಲ್ಲಿ ನಡೆಯಬಹುದು, ಇದನ್ನು ನಿಲ್ಲಿಸುವುದಕ್ಕೆ ಸ್ವಲ್ಪ ಪೊಲೀಸ್‌ನವರು ಹಾಗೂ ಎಕ್ಸೈಸ್ ಡಿಪಾರ್ಟ್‌ಮೆಂಟಿನವರು ಒಟ್ಟಿಗೆ ಸೇರಿ ಕೆಲಸವನ್ನು ಮಾಡಿದರೆ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಪ್ರಯತ್ನವನ್ನು ಮಾಡುತ್ತೇವೆ. ಅದನ್ನು ನಿಲ್ಲಿಸುವುದರ ಬಗ್ಗೆ ಎಲ್ಲಾ ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂಬ ಆತ್ಮವಿಶ್ವಾಸದ ಮಾತುಗಳನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ. ಇದೇನೂ ಕಮರಿಪೇಟೆಯಲ್ಲಿ ನಡೆಯುತ್ತದೆ, ಇನ್ನೆಲ್ಲೋ ನಡೆಯುತ್ತದೆ, ಥರ್ಡ್ಸ್ ರೆಕ್ಟಿಫೈಡ್ ಸ್ಪಿರಿಟ್ ಹೊರಗಡೆಯಿಂದ ಬರುತ್ತದೆಯಲ್ಲಾ ಮಹಾರಾಷ್ಟ್ರ ಹಾಗೂ ಗೋವಾ ಭಾಗಗಳಿಂದ ಬರುತ್ತದೆಯಲ್ಲಾ, ಇದರ ಬಗ್ಗೆ ಎನ್‌ಫೋರ್ಸ್‌ಮೆಂಟ್‌ನ್ನು ಬಿಗಿ ಮಾಡಬೇಕಾಗುತ್ತದೆ. ನಾನು ಎಕ್ಸೈಸ್ ಇಲಾಖೆಯ ಎಲ್ಲಾ ಡಿ.ಸಿ.ಗಳಿಗೆ, ಜಾಯಿಂಟ್ ಕಮೀಷನರ್‌ಗಳಿಗೆ, ಮತ್ತೆ ನಮ್ಮ ಎಕ್ಸೈಸ್ ಕಮೀಷನರ್‌ಗಳಿಗೆ ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಒಂದು ತೊಟ್ಟು ಬೇರೆ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬರಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅಬ್ಕಾರಿ ಇಲಾಖೆಯ ನೌಕರರು ಸುಮಾರು ಜನರು ಕೆಲವೊಂದು ಪೊಸಿಷನ್‌ಲ್ಲಿ ಇದ್ದುಬಿಟ್ಟಿದ್ದಾರೆ. ಇವರೆಲ್ಲರಿಗೂ ರೈಡ್ ಮಾಡಿಸಿದರೆ ಕಾನ್‌ಫಿಸಿಕೇಟ್ ಮಾಡಿದರೆ ಅವರಿಂದ ಬಹಳ ದುಡ್ಡು ಬರುತ್ತದೆ. ಒಬ್ಬೊಬ್ಬರ ಹತ್ತಿರ ಕೋಟಿಗಟ್ಟಲೆ ಹಣವಿರುತ್ತದೆ. ಸುಮ್ಮನೆ ಪಾಪ ನಮ್ಮ ಮಂತ್ರಿಗಳೆಲ್ಲರೂ ನಾವೆಲ್ಲರೂ ಇಲ್ಲಿ ಸೇರಿ ಧೂಳು ಎರಚಿಕೊಳ್ಳುತ್ತೇವೆ. ಅವರ ಮೇಲೆ ನಾವು ನಮ್ಮ ಮೇಲೆ ಅವರು ಮಾಡಿಕೊಳ್ಳುತ್ತೇವೆ. ನಮ್ಮೆಲ್ಲರನ್ನೂ ಕೊಂಡುಕೊಳ್ಳುವ ಚೈತನ್ಯ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿರುವ ಇನ್ಸ್‌ಪೆಕ್ಟರ್ ರ್ಯಾಂಕ್‌ನಿಂದ ಇದ್ದಾರೆ.

ಶ್ರೀ ಸಿದ್ಧರಾಮಯ್ಯ : ಅದರ ಬಗ್ಗೆಯೂ ಪ್ರಯತ್ನವನ್ನು ಮಾಡೋಣ. ಈಗಾಗಲೇ ರೈಡ್ ಮಾಡುವುದರ ಬಗ್ಗೆ ಪ್ರಾರಂಭ ಮಾಡಿದ್ದೇವೆ. ಅವರನ್ನು ರೈಡ್ ಮಾಡಿಸುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದನ್ನು ಇನ್ನೂ ತೀವ್ರಗೊಳಿಸುತ್ತೇವೆ. ಇಲಾಖೆಯಲ್ಲಿ ಒಳ್ಳೆಯ ಹಾಗೂ ಕೆಟ್ಟ ಅಧಿಕಾರಿಗಳು ಸಹ ಇರುತ್ತಾರೆ. ಯಾರು ದಕ್ಷ ಅಧಿಕಾರಿಗಳು ಇರುತ್ತಾರೆ, ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಾರೆ. ಅಂತಹ ಅಧಿಕಾರಿಗಳನ್ನು ಆಯಕಟ್ಟಿನ ಜಾಗಗಳಿಗೆ ಹಾಕೋಣ. ಈ ಬಜೆಟ್ ಪಾಸಾದ ಮೇಲೆ ಇವೆಲ್ಲವನ್ನೂ ನೋಡಿಕೊಂಡು ಆಯಕಟ್ಟಿನ ಜಾಗಗಳಿಗೆ ಹಾಕಿ, ಹೊರಗಡೆ ರಾಜ್ಯದಿಂದ ಏನು ಬರುತ್ತಿದೆಯಲ್ಲಾ ರೆಕ್ಟಿಫೈಡ್ ಸ್ಪಿರಿಟ್ ಅವೆಲ್ಲವನ್ನೂ ಕೂಡ ನಿಲ್ಲಿಸಲು ನಾನು ನೂರಕ್ಕೆ ನೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದರ ಜೊತೆಗೆ ಇನ್ನೊಂದು ಏನು ಮಾಡಿದ್ದೇನೆಂದರೆ, ಈ ಕ್ವಾಲಿಟಿ ಮತ್ತು ಕ್ವಾಂಟಿಟಿ ಎರಡೂ ಕೂಡ ಮೇನ್‌ಟೇನ್ ಆಗಬೇಕು. ನಮ್ಮ ಇಲಾಖೆಯುವರ ಜೊತೆಗೆ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಮಾಡಿಸತಕ್ಕಂಥದ್ದು. ಈಗ ಸಿ.ಎಫ್.ಟಿ.ಆರ್.ಐ. ಒಳ್ಳೆಯ ಗುಣಮಟ್ಟದ ಸಾರಾಯಿ ಕೊಡುತ್ತಾರೋ ಇಲ್ಲವೋ ಎಂದು ಹೇಳಿ 3ನೇ ಪಾರ್ಟಿ ಮೂಲಕ ಸಿ.ಎಫ್.ಟಿ.ಆರ್.ಐನಲ್ಲಿ ಕೆಮಿಕಲ್ ಅನಾಲೈಸಿಸ್ ಮಾಡುವ ತಜ್ಞರುಗಳು ಇದ್ದಾರೆ. ಅದು ಒಳ್ಳೆಯ ಅಥವಾ ಕೆಟ್ಟ ಸಾರಾಯಿಯೋ ಎಂದು ನೋಡತತಕ್ಕಂತಹದ್ದು ಅದನ್ನೂ ಕೂಡ ಆಗಿಂದಾಗ್ಗೆ ಮೇಲಿಂದ ಮೇಲೆ ಅದನ್ನು ಮಾಡಿಸಿ ಸಾಧ್ಯವಾದ ಮಟ್ಟಿಗೆ ಗುಣಮಟ್ಟದ

ಸಾರಾಯಿ ಮತ್ತೆ ಏನು ರೆಕ್ಟಿಫೈಡ್ ಸ್ಪಿರಿಟ್ ಇದೆ ಅದು ಪಾನೀಯ ನಿಗಮದ ಮೂಲ ಹೋಗುತ್ತದೆ. ಅದರಿಂದ ಎಷ್ಟು ಬೈ ಪ್ರಾಡಕ್ಟ್ ಸಾರಾಯಿ ಆಗುತ್ತದೆ, ಅಷ್ಟೇ ರಾಜ್ಯದಲ್ಲಿ ಆಗಬೇಕು. ಮತ್ತೆ ಎಷ್ಟು ಕನ್‌ಸ್ಯೂಮ್ ಆಗುತ್ತದೆ. ಕರ್ನಾಟಕದಲ್ಲಿ ಅಷ್ಟರಿಂದಲೂ ಕೂಡ ತೆರಿಗೆ ಬರಬೇಕು ಎನ್ನತಕ್ಕಂಥಹದ್ದು ಸರ್ಕಾರದ ಉದ್ದೇಶ. ಅದಕ್ಕೋಸ್ಕರ ಈ ಹೊಸ ನೀತಿಯನ್ನು ತಂದಿರುತ್ತೇವೆ. ಬಹುಶಃ ನೀವೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತೀರಾ ಎಂಬ ನಂಬಿಕೆ ನನಗೆ ಇದೆ. ಮಾನ್ಯ ರಾಜೇಂದ್ರನ್‌ಗೆ I hope I have made myself clear and also to Mr. J.C. Madhuswamy. ಅವರಿಗೆ ಏತಕ್ಕಾಗಿ ಹೇಳಿದೆ ಎಂದರೆ, ವಿಶೇಷವಾಗಿ ಅದರ ಬಗ್ಗೆ ಶ್ರೀ ರಾಜೇಂದ್ರನ್‌ರವರು ಮಾತನಾಡಿದ್ದರು. ಅದಕ್ಕೋಸ್ಕರ ಅವರಿಗೇ ಹೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅರ್ರ್ಯಾಕ್ ಅಕ್ಷನ್ ಆಗುವಾಗ ಏನೋ ಒಬ್ಬೊಬ್ಬರೇ ಕುಳಿತುಕೊಂಡು ಕಂಟ್ರಾಕ್ಟ್‌ನ್ನು ಕಡಿಮೆ ಕೂಗಿಸುತ್ತಿದ್ದೀರಿ. ಡಿ.ಸಿ. ಆಫೀಸ್‌ನಲ್ಲಿ 50 ಸಾವಿರ ರೂ. ಮತ್ತು 1 ಲಕ್ಷ ರೂ. ಕೊಟ್ಟು ಅಲ್ಲಿಯೇ ಸ್ಕ್ವೀಜ್ ಮಾಡುತ್ತಾರೆ. ಅದನ್ನು ಸರಿ ಮಾಡುತ್ತೀರಾ ಹೇಳಿ? ಅದರಲ್ಲಿಯೂ ದೊಡ್ಡ ದೊಡ್ಡವರು ಇದ್ದಾರೆ ಅವರನ್ನು ಏನು ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ : ನೀವು ಏನೇನು ಸಲಹೆಗಳನ್ನು ಕೊಡುತ್ತೀರಿ, ಆ ಎಲ್ಲಾ ಸಲಹೆಗಳನ್ನು ಕೂಡ ಅಲ್ಲಿ ಅಳವಡಿಸುವ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ವೈನ್‌ಶಾಪ್‌ಗೆ ಲೈಸೆನ್ಸ್ ಕೊಟ್ಟ ಹಾಗೆ, ಈ ಅರ್ರ್ಯಾಕ್ ಮಾರಾಟ ಮಾಡುವ ಬಗ್ಗೆ ಶಾಪ್‌ಲೈಸೆನ್ಸ್ ಕೊಟ್ಟು ಬಿಡಿ. ಆಗ ಇವರು ಮನೋಪಲಿ ಮಾಡುವುದು ನಿಂತುಹೋಗುತ್ತದೆ. ಅನೇಕ ಜನರಿಗೆ ಉದ್ಯೋಗವೂ ಕೊಟ್ಟಂತೆ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ : ಮುಂದೆ ಅದರ ಬಗ್ಗೆ ಯೋಚನೆಯನ್ನು ಮಾಡೋಣ. ಈಗ ಈ ವರ್ಷಕ್ಕೆ ಹೊಸ ಪಾಲಿಸಿಯನ್ನು ತಂದಿದ್ದೇವೆ. ಮುಂದೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಕೊಟ್ಟಿರುವಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆಯನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೊದಲು ಪಂಚಾಯಿತಿಗಳಿಗೆ ಅಂಗಡಿ ಲೆವೆಲ್‌ಗೆ ಆಕ್ಷನ್ ಮಾಡಬೇಕೆಂಬುದರ ಬಗ್ಗೆ ಚಿಂತನೆ ಇತ್ತು. ಸ್ವಲ್ಪ ಸ್ಕ್ವೀಜ್ ಆಗಿರುವುದು ಆಚೆಗೆ ಬರಿಸಿ. ತಾಲ್ಲೂಕು ಏತಕ್ಕಾಗಿ ಮಾಡುತ್ತೀರಿ? ಗ್ರಾಮಪಂಚಾಯಿತಿ ಲೆವೆಲ್‌ಗೆ ಹರಾಜು ಮಾಡಿಸಿ ಇದರಿಂದ ತಪ್ಪು ಏನಾಗುತ್ತದೆ?

ಶ್ರೀ ಸಿದ್ಧರಾಮಯ್ಯ : ನೋಡೋಣ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ,

ಶ್ರೀ ಸಿದ್ಧರಾಮಯ್ಯ : ಆಂಜನೇಯರವರೆ, ತಾವು ಕ್ಲಾರಿಫಿಕೇಷನ್ ಕೇಳುವಾಗ ಕೇಳಿ. ಮಧ್ಯೆ ನಾವು ಏನು ಮಾತನಾಡುತ್ತೇವೋ ಗೊತ್ತಾಗುವುದಿಲ್ಲ.

ಶ್ರೀ ಹೆಚ್. ಆಂಜನೇಯ : ಅಲ್ಲಾ ಕುಡಿಯುವವರೆಲ್ಲರೂ ನಮ್ಮವರೇ; ಬಹಳ ಜನರು ಕುಡಿದು, ಕುಡಿದು ಹಾಳಾಗುತ್ತಿರುವವರೆಲ್ಲರೂ ನಮ್ಮವರೇ ಆಗಿದ್ದಾರೆ. ಅದನ್ನು ಮಾರಾಟ ಮಾಡುವವರೆಲ್ಲರೂ ಬೇರೆಯವರು, ಇದನ್ನು ಮಾರಾಟ ಮಾಡುವುದಕ್ಕೆ ನಮ್ಮವರಿಗೆ ಅವಕಾಶವನ್ನು

ಮಾಡಿಕೊಡಿ. ಅದರಲ್ಲಿಯೂ ಏನಾದರೂ ರಿಸರ್ವೇಶನ್‌ನ್ನು ತೆಗೆದುಕೊಂಡು ಬನ್ನಿ. ನೀವು ಒಂದು ಕಡೆ ನಮ್ಮವರನ್ನು ಕುಡಿಸುವುದು....

ಶ್ರೀ ಅಂಜನಾಮೂರ್ತಿ : ಅಂಜನೇಯರವರೆ, ಹಾಗಾಗಿ ಬಿಟ್ಟರೆ ಇನ್ನೂ ಜನ ಜಾಸ್ತಿ ಕುಡಿದು ಸತ್ತುಹೋಗಿಬಿಡುತ್ತಾರೆ. ದಯಮಾಡಿ ಬೇಡ ಅವರು ಹಾಳಾಗಿಹೋಗುತ್ತಾರೆ. ಅವರು ಕುಡಿಯುವುದನ್ನು ಕಡಿಮೆ ಮಾಡಬೇಕೆಂಬುದೇ ನಮ್ಮೆಲ್ಲರ ಉದ್ದೇಶ.

ಶ್ರೀ ಸಿದ್ಧರಾಮಯ್ಯ : ಕುಡಿಯುವವರು ಕೆಳವರ್ಗದ ಜನ ಅವರು ಹೇಳುವುದೆಲ್ಲವೂ ನಿಜ. ಆದರೆ ಈಗ ಟೆಂಡರ್‌ನಲ್ಲಿ ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಎಲ್ಲರಿಗೂ ಮುಕ್ತವಾದಂತಹ ಅವಕಾಶವಿದೆ. You can also participate.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಎಲ್ಲಾ ಸಾರಾಯಿಯನ್ನು ಮಾರಾಟ ಮಾಡುವುದನ್ನು ನಿಷೇಧ ಮಾಡಿಬಿಡಿ.

ಶ್ರೀ ಸಿದ್ಧರಾಮಯ್ಯ : ಮಾರಾಟ ಮಾಡುವುದನ್ನು ನಿಷೇಧ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಹಿಂದೆಯೂ ಉತ್ತರವನ್ನು ಕೊಟ್ಟಿದ್ದೇನೆ. ಪ್ರಾಕ್ಟಿಕಲಿ ನಾಟ್ ಪಾಸಿಬಲ್. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅದನ್ನು ನಿಲ್ಲಿಸುವುದರಿಂದ ಎಲ್ಲಾ ನಿಷೇಧವನ್ನು ತೆಗೆದುಕೊಂಡು ಪ್ರೋಹಿಬಿಷನ್ ಆ್ಯಕ್ಟ್ ತಂದಾಕ್ಷಣ ಎಲ್ಲರೂ ಕುಡಿಯುವುದನ್ನು ನಿಲ್ಲಿಸಿಬಿಡುತ್ತಾರೆಂದರೆ ಅದನ್ನು ಮಾಡಬಹುದಾಗಿತ್ತು. It is impossible.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ತಂದರೆ 11–12 ಗಂಟೆಯ ತನಕ ಕುಡಿಯುತ್ತಿರುತ್ತಾರೆ. ಅವರಿಗೆ 9 ಗಂಟೆಗೆ ಕಟ್ಟುಪಾಡು ಮಾಡಿದರೆ, ಬೆಳಿಗ್ಗೆ 6 ಗಂಟೆಯಿಂದ ಮಾರಾಟ ಮಾಡುತ್ತಾರೆ, ಅವರು 12 ಗಂಟೆ ಮಾರಾಟ ಮಾಡಬೇಕೆಂದು ಕಾನೂನಿನಲ್ಲಿ ಬದಲಾವಣೆಯನ್ನು ತಂದರೆ 100ಕ್ಕೆ 100 ಪಾಲು ಇದನ್ನು ಕಡಿಮೆ ಮಾಡಬಹುದು.

ಶ್ರೀ ಸಿದ್ಧರಾಮಯ್ಯ : ನಿಮ್ಮ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮಾನ್ಯ ಸುಬ್ರಹ್ಮಣ್ಯ ನಾಯ್ಡುರವರೇ, ತಾವು ಏನಾದರೂ ಬಿಸಿನೆಸ್ ಮಾಡಿದ್ದೀರಾ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇಲ್ಲಿಯವವರೆಲ್ಲರೂ ಬಿಸಿನೆಸ್ ಮಾಡಿಕೊಂಡು ಸಲಹೆಯನ್ನು ಕೊಡುತ್ತಿದ್ದಾರಾ? ಹಾಗಿದ್ದರೆ ಎಲ್ಲಾ ಸದಸ್ಯರು ಬಿಸಿನೆಸ್ ಮಾಡಿರುವವರೇನಾ?

ಶ್ರೀ ಸಿದ್ಧರಾಮಯ್ಯ : ನಾನು ನನ್ನ ಇನ್‌ಫರ್ಮೇಷನ್‌ಗೋಸ್ಕರ ಕೇಳಿದೆ. ನೀವು ಮಾಡುತ್ತಿದ್ದೀರಿ, ಮಾಡಲೇಬೇಕು ಎಂದೇನೂ ಇಲ್ಲ ನನಗೆ. ನಿಮಗೆ ಅದರ ಬಗ್ಗೆ ನಾಲೇಡ್ಜ್ ಇದೆಯಾ ಎಂದು ಕೇಳಿಕೊಳ್ಳುವುದಕ್ಕಷ್ಟೇ ಕೇಳಿದೆ. ಇದ್ದರೆ ನಾನು ನಿಮ್ಮನ್ನು ಪ್ರತ್ಯೇಕವಾಗಿ ಕರೆದು ನಿಮ್ಮ ಜೊತೆ ಮೀಟಿಂಗ್ ಮಾಡಿ ಏನೋ ಒಳ್ಳೆಯ ಸಲಹೆಗಳಿದ್ದರೆ ತೆಗೆದುಕೊಳ್ಳೋಣವೆಂದು ಕೇಳಿದೆ ಅಷ್ಟೆ. ಏನೂ ಇಲ್ಲ ಬಿಡಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಸಾರಾಯಿಯನ್ನು ನಿಷೇಧ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು, ಸಾರ್ವಜನಿಕ...

ಶ್ರೀ ಸಿದ್ಧರಾಮಯ್ಯ : ತಾವು ರಿಪ್ಲೈ ಆದ ಮೇಲೆ ಕೇಳಿ. ತಾವು ಕುಳಿತುಕೊಳ್ಳಿ. ಈಗಲೇ ತಾವು ಮಾತನಾಡಿದರೆ ಹೇಗೇ?

ಅಧ್ಯಕ್ಷರು : ಕ್ಲಾರಿಫಿಕೇಷನ್ ಕೇಳುವಾಗ ನಿಮಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅದರ ಬಗ್ಗೆ ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಏಕೆ prohibition is not possible.. ಎಂಬುದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಎಲ್ಲಾ ಇದರ ಬಗ್ಗೆ ಚರ್ಚೆಯಾಗಿದೆ. ಈಗ ಪಂಪುಸೆಟ್ಟಿಗೆ ಬಂದಿದ್ದೆ. ಪಂಪುಸೆಟ್ಟುಗಳಲ್ಲಿ ಹತ್ತು ಹಾರ್ಸ್‌ಪವರ್‌ಗಿಂತ ಕಡಿಮೆ ಹಾಕತಕ್ಕಂಥ ಮೋಟಾರುಗಳಿಗೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್‌ಇದೆ. ಅದಕ್ಕಿಂತ ಜಾಸ್ತಿ ಇರುವ ಅಂದರೆ ಹತ್ತು ಹಾರ್ಸ್‌ಪವರ್‌ಗಿಂತ ಹೆಚ್ಚು ಇರುವುದಕ್ಕೆ 13 ಪರ್ಸೆಂಟ್ ಟ್ಯಾಕ್ಸ್ ಇದೆ. ಆ 13 ಪರ್ಸೆಂಟ್ ಟ್ಯಾಕ್ಸ್‌ನ್ನು 13 ರಿಂದ 8 ಪರ್ಸೆಂಟ್‌ಗೆ ಇಳಿಸಿದ್ದೇನೆ. ಮೊದಲು 13 ಪರ್ಸೆಂಟ್ ಇತ್ತು. 12 ಪರ್ಸೆಂಟ್ ಎಂದು ಬಜೆಟ್‌ನಲ್ಲಿ ಪ್ರಪೋಸ್ ಮಾಡಿದ್ದೆ. ಈಗ ಅದು ಮತ್ತೆ ಕಡಿಮೆಯಾಗಿ 13 ರಿಂದ 12 ಆಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಿದ್ದೆ. ಈಗ ಅದು 12 ರಿಂದ 8 ಆಗಿದೆ. Notification will be issued to that effect. ಇದರ ಉದ್ದೇಶ ಏನು ಎಂದರೆ, ಕೋಲಾರ, ತುಮಕೂರು ಈ ವಿಭಾಗಗಳಲ್ಲೆಲ್ಲಾ ಏಳುನೂರು–ಎಂಟುನೂರು ಸಾವಿರ ಅಡಿವರೆಗೂ ಹೊರಟುಹೋಗಿಬಿಡುತ್ತದೆ. ಈಗ ಎಲ್ಲರೂ ಹತ್ತು ಹೆಚ್.ಪಿ.ಗಿಂತ ಹೆಚ್ಚಾಗಿರುವುದನ್ನು ತೆಗೆದುಕೊಳ್ಳಲೇಬೇಕು. ಹತ್ತರ ಒಳಗಡೆ ಇರುವುದರಿಂದ ಏನು ಕೆಲಸ ನಡೆಯುವುದಿಲ್ಲ. ದೇವನಹಳ್ಳಿ ಅಂತಹ ಕಡೆ ಜಾಸ್ತಿ ಇರುವುದರಿಂದ ಬಹಳ ದುಬಾರಿ ಆಗುತ್ತದೆಯೆಂದು ಹೇಳಿ ಹತ್ತು ಹೆಚ್.ಪಿ.ಗಿಂತ ಹೆಚ್ಚಿಗೆ ಇರುವುದಕ್ಕೆ 13 ರಿಂದ 8 ಪರ್ಸೆಂಟ್‌ಗೆ ಇಳಿಸಿದ್ದೇನೆ. ಅಂದರೆ ಐದು ಪರ್ಸೆಂಟ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿದ್ದೇನೆ. ಇದು ಈ ಭಾಗದ ರೈತರಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕೋಸ್ಕರವಾಗಿ ಸಹಾಯ ಮಾಡಿರತಕ್ಕಂಥಾದ್ದು ಇದೇನೂ ಒಬ್ಬರಿಗೇ ಅಂತಲ್ಲ. ಇವರನ್ನು ಗಮನದಲ್ಲಿಟ್ಟುಕೊಂಡು ಮಾಡಿರುವುದು ಅಂತ ಹೇಳಿದ್ದು ಅಷ್ಟೇ, ಪಾಟೀಲರೇ. ಆಮೇಲೆ ಶ್ರೀ ಮಾಧುಸ್ವಾಮಿಯವರು ಕೊಬ್ಬರಿ ಟ್ಯಾಕ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ತೆಂಗಿನಕಾಯಿ ಲೋಕಲ್ ವ್ಯಾಪಾರಕ್ಕೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಇದೆ. ಅದು ಬೇರೆ ರಾಜ್ಯಗಳಲ್ಲಿ ಮಾರಾಟ ಮಾಡಿದರೆ ಲೋಕಲ್ ಟ್ಯಾಕ್ಸ್ ನಾಲ್ಕು ಪರ್ಸೆಂಟ್ ಬಿಟ್ಟು ಎಂಟು ಪರ್ಸೆಂಟ್ ಸಿ.ಎಸ್.ಟಿ. ಆಗುತ್ತದೆ ಮತ್ತು 'ಸಿ' ಫಾರಂ ಎಲ್ಲಾ ಬರುತ್ತಿರಲಿಲ್ಲ. ಅನೇಕ ಸಾರಿ 'ಸಿ' ಫಾರಮ್‌ನಿಂದ ಬಹಳ ತೊಂದರೆಯಾಗಿದ್ದು, ಮಾಧುಸ್ವಾಮಿಯವರು ಹಿಂದೆ ನೀವು ಸ್ವಲ್ಪ ಕೊಬ್ಬರಿ ಬೆಳೆಗಾರರಿಗೆ ಸಹಾಯ ಮಾಡತಕ್ಕಂಥ ಪ್ರಯತ್ನ ಮಾಡಿದ್ದೀರಿ ಎಂದು ಹೇಳಿದರು. ಈ ಸಾರಿಯೂ ಕೂಡ ಹಾಗೆ ಮಾಡಬೇಕೆಂದು ಕೂಡ ಹೇಳಿದ್ದೀರಿ. ನೋಡಿ, ನಿಮ್ಮ ಸ್ನೇಹ ಹೇಗಿದೆ ಅಂತ. ಅದಕ್ಕೋಸ್ಕರ ಮಾಡಿರುವುದಂತಲ್ಲ. ಈಗ ಅದನ್ನು ಹೊರರಾಜ್ಯಗಳಿಗೂ ಕೂಡ, ಏಕೆಂದರೆ ತೆಂಗಿನಕಾಯಿಗಳನ್ನು ಬೇರೆ ರಾಜ್ಯಗಳಿಗೂ ಮಾರಾಟ ಮಾಡಲಿ, ಒಂದಿಷ್ಟು ತೆಂಗಿನಕಾಯಿ ಬೆಳೆಯುವವರಿಗೂ ನಾಲ್ಕು ಕಾಸು ಸಿಗಲಿ, ವ್ಯಾಪಾರ ಕುದುರಿಸಲು ಈ ವಹಿವಾಟು ಜಾಸ್ತಿಯಾಗಲಿ ಎನ್ನುವ ಕಾರಣಕ್ಕೋಸ್ಕರ ಇದನ್ನು ಎಂಟು ಪರ್ಸೆಂಟ್‌ನಿಂದ ನಾಲ್ಕು ಪರ್ಸೆಂಟ್‌ಗೆ ಇಳಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಿ.ಎಸ್.ಟಿ. ಇಲ್ಲದ ಹಾಗೆ ಮಾಡುತ್ತಿದ್ದೀರಾ?

ಶ್ರೀ ಸಿದ್ಧರಾಮಯ್ಯ : ಇಲ್ಲ, ಇನ್ನುಮೇಲೆ ನಾಲ್ಕು ಪರ್ಸೆಂಟ್ ಅಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ : 'ಸಿ' ಫಾರಂ ಇಲ್ಲ ಎಂದರೆ ಎಂಟು ಪರ್ಸೆಂಟ್ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ : ಸಿ' ಫಾರಂ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರಾನೇ ಮತ್ತು ಹೊರರಾಜ್ಯಕ್ಕೆ ಮಾರಾಟ ಮಾಡುವುದಕ್ಕೂ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಮಾಡಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾಲ್ಕು ಪರ್ಸೆಂಟ್ ಇದೆ..

ಶ್ರೀ ಸಿದ್ಧರಾಮಯ್ಯ : ಎಂಟು ಪರ್ಸೆಂಟ್ ಕೊಡಬೇಕಿತ್ತು. ನೀವು ಏನು ಹೇಳಿದ್ದೀರಿ ಅದನ್ನು ಮಾಡೋಣ. ತಿದ್ದುಪಡಿ ಮಾಡುವಾಗ, ಆರ್ಡರ್ಸ್ ಮಾಡುವಾಗ ಯಾವ ತರಹ ವರ್ಡಿಂಗ್ಸ್ ಏನಾಗಬೇಕೋ ಅದನ್ನು ಮಾಡೋಣ. ಆಮೇಲೆ ಈ ಹೆಂಚು ಬಗ್ಗೆ. ಮಂಗಳೂರು ಟೈಲ್ಸ್ ಇದೆಯಲ್ಲಾ ಅದಕ್ಕೆ ಮತ್ತೆ ಡೆಕ್ಕೋರೇಟೆಡ್ ಟೈಲ್ಸ್‌ಗೆ ಒಂದೇ ಹಾಕಿದ್ದರು. ಈ ಡೆಕೊರೇಟೆಡ್ ಟೈಲ್ಸ್ ಉಪಯೋಗ ಮಾಡುವವರು ಯಾರು ಎಂದರೆ, ಪಟ್ಟಣಗಳಲ್ಲಿ ಸ್ವಲ್ಪ ದುಡ್ಡುಕಾಸು ಜಾಸ್ತಿ ಇರುವವರು. ಈ ಮಂಗಳೂರು ಟೈಲ್ಸ್ ಉಪಯೋಗಿಸುವವರೆಲ್ಲಾ ಯಾರು ಎಂದರೆ ಸಾಮಾನ್ಯವಾಗಿ ಆಶ್ರಯ ಮನೆಗಳಿಗೆ ಉಪಯೋಗಿಸುವವರು ಮತ್ತು ಹಳ್ಳಿಗಳಲ್ಲಿ ಇರುವ ಬಡವರು. ಇದನ್ನು ಆ ತರಹದ ಜನರು ಉಪಯೋಗಿಸುತ್ತಿದ್ದರು. ಅದಕ್ಕೋಸ್ಕರ....

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗಲಾದರೂ ವಾಟಾಳ್ ಅವರಿಗೆ ಇಲ್ಲಿಗೆ ಬರುತ್ತೀರಾ ಎಂದು ಇನ್ನೊಂದು ಸಲ ಕೇಳಿ. ದಯವಿಟ್ಟು ಅವರು ಬರಬೇಕು.

ಶ್ರೀ ಸಿದ್ಧರಾಮಯ್ಯ : ಇಷ್ಟೆಲ್ಲಾ ಒಳ್ಳೆಯದನ್ನು ಹೇಳುತ್ತಿದ್ದೇನೆ. ಮಾಧುಸ್ವಾಮಿಯವರೇ, ಅವರೇನು ನಿದ್ದೆಮಾಡುತ್ತಿದ್ದಾರಾ? ನಾನು ತಮಾಶೆಗೆ ಹೇಳಿದೆ. ಅದನ್ನು ಅವರು ತಪ್ಪು ತಿಳಿದುಕೊಳ್ಳಬಾರದು. ಅವರು ಎಲ್ಲವನ್ನೂ ಬರೆದುಕೊಳ್ಳುತ್ತಿದ್ದಾರೆ. ಬಹಳ ಅಟೆಂಟಿವ್ ಆಗಿದ್ದಾರೆ. ಆದ್ದರಿಂದ ಮಂಗಳೂರು ಟೈಲ್ಸ್ ಬೇರೆ ನಾಡಹೆಂಚು ಬೇರೆ. ಮಂಗಳೂರು ಹೆಂಚು ಅದನ್ನು ಕರೆಯುವುದು. ನಾಡಹೆಂಚಿಗೆ ಟ್ಯಾಕ್ಸ್ ಎಕ್ಸಂಪಶನ್ ಇದೆ. So, no tan on Nada Hanchu. ಈ ರಾಜಾ ಹೆಂಚುಗಳಿಗೆ ನಾಲ್ಕು ಪರ್ಸೆಂಟ್‌ನಿಂದ ಒಂದು ಪರ್ಸೆಂಟ್‌ಗೆ ತೆಗೆದುಕೊಂಡು ಬಂದಿದ್ದೇನೆ. ಇದು ಒಂದೇ ಒಂದು ಪರ್ಸೆಂಟ್. ಒಟ್ಟಾರೆ ನಮ್ಮ ಟ್ಯಾಕ್ಸ್ ಇದೆಯಲ್ಲಾ ಕೆಲವು ವಲಯಗಳಲ್ಲಿ ಏನು ಚರ್ಚೆಯಾಗುತ್ತಿತ್ತು ಎಂದರೆ ಈ ತೆರಿಗೆಯಿಂದ ರೈತರಿಗೆ ಇದು ಅನುಕೂಲವಾಗುತ್ತದೆ, ಮಧ್ಯಮ ವರ್ಗದವರಿಗೆ ದುಬಾರಿಯಾಗುತ್ತದೆ ಎಂದು. ಇದು ಒಂದು ಮತ್ತು ನಾಲ್ಕು ತೆರಿಗೆ ಹೊಂದಿರುವುದು. ಒಂದು ಪರ್ಸೆಂಟ್ ಮತ್ತು ನಾಲ್ಕು ಪರ್ಸೆಂಟ್ ಇರುವಂಥಾದ್ದು ಇದು ಮಾಸ್ ಕನ್‌ಸಂಪಶನ್ ಮಾಡತಕ್ಕಂಥ ಕಮಾಡೀಸ್‌ನಲ್ಲಿ ಇವೆಲ್ಲಾ ಬರುವುದು. ಸಾಮಾನ್ಯ ಜನ ಉಪಯೋಗಿಸತಕ್ಕಂಥ ಎಲ್ಲಾ ಪದಾರ್ಥಗಳಿಗೂ ಕೂಡ ಒಂದು ಪರ್ಸೆಂಟ್ ಹೆಚ್ಚಾಯಿತು. ಅದು ಬಿಟ್ಟರೆ ನಾಲ್ಕು. ಇನ್ನು ಇದು ಬಿಟ್ಟರೆ 8,12,14 ಅಂದರೆ ಅವರು ಯಾರು ಅಪೋರ್ಡಬಲ್ ಸೆಕ್ಷನ್‌ನವರು ಯಾರು ಇದ್ದಾರೆ, ಅವರಿಗೆ ಆ ತೆರಿಗೆಗಳನ್ನು ಹಾಕಿರತಕ್ಕಂಥಾದ್ದು. ಆದ್ದರಿಂದ ಈ ತೆರಿಗೆ ಬಗ್ಗೆ ನಾವು ಏನು ಮಾಡಿದ್ದೇವೆ ಎಂದರೆ, ನೂರು ಕೋಟಿ ರೂಪಾಯಿಗಳ ಸುಮಾರು 125 ಕಮಾಡಿಟೀಸ್ ಮೇಲೆ ತೆರಿಗೆ ಕಡಿಮೆ ಮಾಡಿದ್ದೇವೆ. ಈ 9 ತೆರಿಗೆಯಿಂದ ನಾಲ್ಕು ಬೇಸಿಕ್ ತೆರಿಗೆಗಳನ್ನು ಮಾಡುವಾಗ 125 ಕಮಾಡಿಟೀಸ್‌ನಲ್ಲಿ ಸುಮಾರು 43 ಕಂಟ್ರಾಕ್ಟ್ ವರ್ಕ್ಸ್‌ಗೆ ಇದನ್ನು ಕಡಿಮೆ ಮಾಡಿದ್ದೇನೆ. ಬರೇ 26 ಐಟಮ್ಸ್‌ಗಳಿಗೆ ಮಾತ್ರ ಹೆಚ್ಚು ತೆರಿಗೆಯನ್ನು ಮಾಡಿರತಕ್ಕಂಥಾದ್ದು. ಇವೂ ಕೂಡ ಯಾರು ಸಮಾಜದ ಅಫ್ಲುಯೆಂಟ್ ಸೆಕ್ಷನ್ ಆಫ್ ದಿ ಸೊಸೈಟಿ ಇದ್ದಾರೆ, ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆ ಅವರಿಗೆ

ಇದನ್ನು ಹೆಚ್ಚು ಮಾಡಿರುವಂಥಾದ್ದು ಇನ್ನೂ ಸಾಮಾನ್ಯ ಜನ ಬಳಸತಕ್ಕಂಥ ಪದಾರ್ಥಗಳು. ಸೀಮೆಎಣ್ಣೆ ಬಗ್ಗೆ ಮಾತನಾಡಿದರು. ಸೀಮೆಎಣ್ಣೆ ಬೆಲೆ ಏನಾಗಿದೆ ಎಂದರೆ ಅದು ಹೆಚ್ಚಾಗಿಬಿಟ್ಟಿದೆ. ಪಿ.ಡಿ.ಎಸ್. ಕಾರ್ಡ್ ಹೋಲ್ಡರ್ಸ್ ಇದ್ದಾರಲ್ಲಾ ಅವರಿಗೆ ನಾಲ್ಕು ಪರ್ಸೆಂಟೇ ಇರುವುದು. ಅದನ್ನು ಹೆಚ್ಚು ಮಾಡಿಲ್ಲ. ಆದರೆ ಹೊರಗಡೆಯಿಂದ ಏನು ಎಣ್ಣೆಯನ್ನು ತೆಗೆದುಕೊಂಡುಬರುತ್ತಾರಲ್ಲಾ, ಕೇಂದ್ರಸರ್ಕಾರದವರು ಕೂಡ ಇದನ್ನು ಶಿಫಾರಸ್ಸು ಮಾಡಿದ್ದಾರೆ ಮತ್ತು ನಮ್ಮಲ್ಲಿ ಟಾಸ್ಕ್‌ಫೋರ್ಸ್‌ನವರೂ ಸಹ ಶಿಫಾರಸ್ಸು ಮಾಡಿದ್ದರು. ಇದು ಏನಪ್ಪ ಆಗುತ್ತಿದೆ ಎಂದರೆ, ಎಣ್ಣೆಯನ್ನು ತೆಗೆದುಕೊಂಡುಬಂದು ಡೀಸಲ್‌ಗೆ ಮಿಕ್ಸ್ ಮಾಡಿ ಮಾರಾಟ ಮಾಡುವಂಥಾದ್ದು ಇತ್ತು. ಅದನ್ನು ಡೀಸಲ್‌ಗೆ ಮಿಕ್ಸ್ ಮಾಡಿ ಮಾರಾಟ ಮಾಡಿದರೆ ಪೊಲ್ಯುಶನ್ ಆಗುತ್ತಿತ್ತು. ಹೊಗೆ ಬರುತ್ತಿತ್ತು. ಅದನ್ನು ಇಳಿಸುವುದಕ್ಕೆ ಮಾಡಿರುವುದೇ ಹೊರತು, ಇದು ಪಿ.ಡಿ.ಎಸ್. ಕಾರ್ಡ್ ಹೋಲ್ಡರ್ಸ್ ಯಾರು ಸಾಮಾನ್ಯ ಜನ ಬಳಸತಕ್ಕಂಥ ಸೀಮೆಎಣ್ಣೆ ಇದೆ, ಇದಕ್ಕೆ 0.1 ಪರ್ಸೆಂಟ್ ಕೂಡ ಹೆಚ್ಚು ಮಾಡಿಲ್ಲ. ಅದು ಎಷ್ಟು ಇದೆಯೋ ಅಷ್ಟೇ ಇದೆ. ಆದ್ದರಿಂದ ಇದರಲ್ಲಿ ಯಾವುದೇ ಕನ್‌ಫ್ಯೂಶನ್ ಬೇಕಾಗಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇದು ತೆರಿಗೆಯ ಬಗ್ಗೆ ಆಯಿತು. ಜೊತೆಗೆ ಚುನಾವಣೆ ಸಂದರ್ಭದಲ್ಲಿ ಮತ್ತು ಬೇರೆಬೇರೆ ಸಂದರ್ಭಗಳಲ್ಲಿ ನಾವು ಜನರನ್ನು ಭೇಟಿ ಮಾಡಿದಾಗ, ಸಾರ್ವಜನಿಕ ಸಭೆಗಳಿಗೆ ಹೋದಾಗ ಈ ಆನ್‌ಲೈನ್ ಲಾಟರಿ ಮತ್ತು ಇಂಟರ್‌ನೆಟ್ ಲಾಟರಿಯನ್ನು ನಿಲ್ಲಿಸಬೇಕೆಂದು ಜನರು ಹೇಳುತ್ತಿದ್ದರು. ವಿಶೇಷವಾಗಿ ಮಹಿಳೆಯರು ಯಾವುದೇ ಸಾರ್ವಜನಿಕ ಸಭೆಗೆ ಹೋದರೂ ಕೂಡ ಇದರ ಬಗ್ಗೆ ಹೇಳುತ್ತಿದ್ದರು. ಇನ್ನು ಯುವಕರೂ ಕೂಡ ಆನ್‌ಲೈನ್ ಲಾಟರಿಯನ್ನು ಮತ್ತು ಇಂಟರ್‌ನೆಟ್ ಲಾಟರಿಯನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದರು. ಇದನ್ನು ನಿಲ್ಲಿಸಿದ್ದಕ್ಕೆ ಎಲ್ಲಾ ಸದಸ್ಯರುಗಳು ಕೂಡ ಸ್ವಾಗತ ಮಾಡಿದ್ದಾರೆ. ಬಹಳ ಸಂತೋಷ. ಅದರಿಂದ ರಾಜ್ಯಕ್ಕೆ ಸುಮಾರು 250 ಕೋಟಿ ರೂಪಾಯಿಗಳ ನಷ್ಟ ಒಂದು ವರ್ಷಕ್ಕೆ ಆಗುತ್ತದೆ. ಇದು ಈ ರೀತಿಯಾಗಿ ತಪ್ಪಿದಂಥ ಆದಾಯ. ಆದರೆ ನಷ್ಟ ಬಹಳ ಮುಖ್ಯ ಅಲ್ಲ. ಇದನ್ನು ಬಂದ್ ಮಾಡಿದ್ದರಿಂದ ಎಷ್ಟು ಬಡ ಕುಟುಂಬಗಳಿಗೆ ಸಹಾಯವಾಗುತ್ತದೆ ಎನ್ನತಕ್ಕಂಥಾದ್ದು ಬಹಳ ಮುಖ್ಯವಾಗುತ್ತದೆ. ಈ ದೃಷ್ಟಿಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸಾರ್ವಜನಿಕ ಒತ್ತಾಯದ ಮೇಲೆ ರಾಜ್ಯಸರ್ಕಾರಕ್ಕೆ 250 ಕೋಟಿ ರೂಪಾಯಿಗಳ ನಷ್ಟ ಆದರೂ ಕೂಡ, ಇದನ್ನು ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಕೂಡ ಒಪ್ಪಿಕೊಂಡಿದ್ದೇವೆ. ಅದಕ್ಕೋಸ್ಕರ ಇದನ್ನು ಬಂದ್ ಮಾಡಿದ್ದೇವೆ ಮತ್ತು ಈಗಾಗಲೇ ಆದೇಶವನ್ನು ಕೂಡ ಹೊರಡಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಯೀಲ್ಡ್ ಆದರೆ ಒಂದು ನಿಮಿಷ. ತಾವೇನು ಆನ್‌ಲೈನ್ ಲಾಟರಿಯನ್ನು ರದ್ದುಮಾಡಿದ್ದೇವೆ ಎಂದು ಘೋಷಣೆ ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನಾನು ನಿಮಗೆ ಏನು ಹೇಳುತ್ತಿದ್ದೇನೆ ಎಂದರೆ, ಇಲ್ಲಿ ಇಡೀ 224 ಜನ ಶಾಸಕರ ಸಮಕ್ಷಮದಲ್ಲಿ ಹೇಳುತ್ತಿದ್ದೇನೆ. ಈ ಬಜೆಟ್ ಮುಗಿಯುತ್ತಿದ್ದ ಹಾಗೆಯೇ ಕೋರ್ಟಿನಲ್ಲಿ ಅವರು ಸ್ಟೇ ತೆಗೆದುಕೊಂಡು ಬರುತ್ತಾರೆ. ಇದು 101 ಪರ್ಸೆಂಟ್ ನಿಜ. ಈಗಾಗಲೇ ಆನ್‌ಲೈನ್ ಲಾಟರಿಯಿಂದ 270–80 ಕೋಟಿ ರೂ. ಬಾಕಿಯನ್ನು ನೀವು ವಸೂಲಿ ಮಾಡಿಲ್ಲ. ಮುಂದೆ ಅದು ವೆಕೇಟ್ ಆಗುವವರೆಗೂ ಅವರು ದಂದೆಯನ್ನು ಮುಂದುವರೆಸಿಕೊಳ್ಳುತ್ತಾ ಹೋಗುವುದು 101 ಪರ್ಸೆಂಟ್ ಆಗುವಂತಹ ಸಂಭವ ಇದೆ. ಆದ್ದರಿಂದ ನಾನು ಏನು ಸಲಹೆ ಕೊಡುತ್ತಿದ್ದೇನೆ ಎಂದರೆ,

ನಿಜವಾಗಿಯೂ ನಿಮಗೆ ಕಳಕಳಿ ಇದ್ದರೆ, ಆ ರೂಲ್‌ಗೆ ತಿದ್ದುಪಡಿಯನ್ನು ತಂದು, ಇಲ್ಲಿ ಪಾಸ್ ಮಾಡುವ ವಿಶೇಷ ಪ್ರಯತ್ನ ಮಾಡಿದರೆ ಮಾತ್ರ ನೀವು ಮಾಡಿದ ಈ ಘೋಷಣೆಗೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಇದು ಆಗುವುದಿಲ್ಲ ಎನ್ನುವಂಥ ನನ್ನ ಅಭಿಪ್ರಾಯವನ್ನು ನಿಮಗೆ ತಿಳಿಸುತ್ತಿದ್ದೇನೆ. ಉಳಿದಿದ್ದು ತಮಗೆ ಬಿಟ್ಟಿದ್ದು.

ಶ್ರೀ ಸಿದ್ಧರಾಮಯ್ಯ : ನಿಮ್ಮ ಈ ಮುನ್ನೆಚ್ಚರಿಕೆ ಸಲಹೆ ಇದೆಯಲ್ಲಾ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದು ಮದ್ರಾಸಿನಲ್ಲಿ ಬ್ಯಾನ್ ಮಾಡಿದಾಗ, ಹೈಕೋರ್ಟ್‌ನವರು uphold ಮಾಡಿದ್ದಾರೆ, ಅದನ್ನೂ ತಾವು ತರಿಸಿಕೊಳ್ಳಿ, ಅಲ್ಲಿ ಆರ್ಡರ್ ಪಾಸ್ ಮಾಡಿದ್ದರೆ.

ಶ್ರೀ ಸಿದ್ಧರಾಮಯ್ಯ : ನಾನು ಇದನ್ನು ಮಾಡುವುದಕ್ಕೆ ಮುಂಚಿತವಾಗಿ ಕಾನೂನು ಇಲಾಖೆಯ ಅಭಿಪ್ರಾಯವನ್ನೂ ಕೂಡ ತೆಗೆದುಕೊಂಡಿದ್ದೇನೆ. ಸುಮ್ಮನೇ ಏಕಾಏಕಿ ಆರ್ಡರ್ಸ್ ಇಷ್ಯೂ ಮಾಡಿಲ್ಲ. ಕಾನೂನು ಇಲಾಖೆಯ ಒಪೀನಿಯನ್ ಕೂಡ ತೆಗೆದುಕೊಂಡು ಮಾಡಿದ್ದೇವೆ. ಮತ್ತೆ ನಮಗೂ ಅವರಿಗೂ ಅಗ್ರಿಮೆಂಟ್ ಇತ್ತಲ್ಲಾ, ಆ ಅಗ್ರಿಮೆಂಟೆಲ್ಲಾ ವಯಲೇಟ್ ಮಾಡಿದ್ದಾರೆ. There is a clear breach of contract. ಅವರು ಯಾರೋ ನಡೆಸುತ್ತಿದ್ದರಲ್ಲಾ ಅವರು ಎಲ್ಲಾ ಒಪ್ಪಂದಗಳನ್ನೆಲ್ಲಾ ಮುರಿದಿದ್ದಾರೆ. ಮತ್ತೆ ಸರ್ಕಾರಕ್ಕೆ ಕೊಡಬೇಕಾದಂಥ ಹಣವನ್ನೂ ಕೊಟ್ಟಿಲ್ಲ. ಒಂದು ಕಡೆ ರಿಕವರಿ ಪ್ರೊಸೀಡಿಂಗ್ಸ್ ಆಗಬೇಕು. ಅದನ್ನು ರಿಕವರಿ ಮಾಡಬೇಕು, ಇದು ಒಂದು ಭಾಗ. ಇನ್ನೊಂದು ಕಡೆ ಈಗಾಗಲೇ ನಾನು ನಮ್ಮ ಸರ್ಕಾರಿ ವಕೀಲರುಗಳಿಗೆ ಕೇವಿಯಟ್ ಹಾಕುವುದಕ್ಕೆ ಅಡ್ವೊಕೇಟ್ ಜನರಲ್ ಮೂಲಕ ಲಾ ಸೆಕ್ರಟರಿ ಯವರಿಗೂ ಹೇಳಿದ್ದೇನೆ. ಕೇವಿಯಟ್ ಹಾಕಿಸಿ, ಇದನ್ನು ಸೀರಿಯಸ್ಸಾಗಿ ಫೈಂಡ್ ಔಟ್ ಮಾಡಬೇಕೆಂದು ನಾವು ಈಗಾಗಲೇ ನಮ್ಮ ಎಲ್ಲಾ ಸರ್ಕಾರಿ ವಕೀಲರುಗಳಿಗೆ ತಿಳಿಸಿದ್ದೇನೆ. ಈ ರೀತಿ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ವಸೂಲಿಗೂ ಕೂಡ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ಅವರಿಂದ ಬರಬೇಕಾದಂಥ ಬಾಕಿಯನ್ನು ವಸೂಲ್ಮಾಡತಕ್ಕ ಕೆಲಸವನ್ನೂ ಕೂಡ ಮಾಡುತ್ತೇವೆನ್ನತಕ್ಕ ಮಾತನ್ನೂ ಕೂಡ ತಿಳಿಸುತ್ತೇನೆ. ಮತ್ತೆ ರೂಲ್ಸ್ ಕೂಡ ರಿಪೀಲ್ ಮಾಡುತ್ತೇವೆ. ಏನೇನು ರೂಲ್ಸ್ ಮಾಡಿಕೊಂಡಿದ್ದಾರೆ, ಆ ರೂಲ್ಸ್‌ಗಳನ್ನು ಅಮೆಂಡ್‌ಮೆಂಟ್ ಮಾಡಿ, ಕೋರ್ಟ್‌ನಲ್ಲಿ ಅವರಿಗೆ ಸ್ಟೇ ಸಿಕ್ಕುವುದೇ ಆಗಲೀ ಅಥವಾ ಅವರು ಕೋರ್ಟಿನಲ್ಲಿ ಗೆಲ್ಲತಕ್ಕ ವ್ಯವಸ್ಥೆ ಮಾಡಿಕೊಳ್ಳುವುದಾಗಲೀ ಇವೆಲ್ಲಕ್ಕೂ ಕೂಡ ಕಾನೂನಿನಲ್ಲಿ ಏನೇನು ಮಾಡಲಿಕ್ಕೆ ಸಾಧ್ಯವಾಗುತ್ತದೆ, ಅವೆಲ್ಲವನ್ನೂ ಕೂಡ ತಿದ್ದುಪಡಿ ಮಾಡುವುದರ ಮೂಲಕ, ಮಾಡತಕ್ಕಂಥ ಎಲ್ಲಾ ಕ್ರಮಗಳನ್ನೂ ಕೂಡ ನಾನು ತೆಗೆದುಕೊಳ್ಳುತ್ತಾ ಇದ್ದೇನೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಟೈಮ್ ಕೊಟ್ಟಮೇಲೆ ರಕ್ಷಣೆ ತೆಗೆದುಕೊಳ್ಳುತ್ತಾನೆ. ಇದುವರೆಗೆ, ನೀವು ಹೇಳಿದಹಾಗೆ ಏನೇನು ವಯಲೇಟ್ ಮಾಡಿದ್ದಾರೆ, ಅವರಿಗೆ ಒಂದು ನೋಟೀಸೂ ಹೋಗಿಲ್ಲ. ಬಾಕಿಯೂ ವಸೂಲಾಗಿಲ್ಲ.

ಶ್ರೀ ಸಿದ್ಧರಾಮಯ್ಯ : ನಾವು ಕೋರ್ಟ್ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಕಾನೂನು ಪ್ರಕಾರವಾಗಿ ಮಾಡತಕ್ಕಂಥ ಎಲ್ಲಾ ತೀರ್ಮಾನಗಳನ್ನು ಮಾಡುತ್ತೇವೆ. ಇದು ಆನ್‌ಲೈನ್ ಲಾಟರಿ ಮತ್ತು ಇಂಟರ್‌ನೆಟ್ ಲಾಟರಿ. ಆದರೆ, ನಮ್ಮ ಲಾಟರಿ, ಟ್ರೆಡಿಷನಲ್ ಲಾಟರಿ ಇದೆಯಲ್ಲಾ, ಎಂ.ಎಸ್.ಐ.ಎಲ್.ನಿಂದ ನಾವೇನು ಮಾಡುತ್ತಿದ್ದೇವೆ ಈ ಲಾಟರಿ ಮುಂದುವರಿಯುತ್ತದೆ. ಆನ್‌ಲೈನ್ ಲಾಟರಿ ಮತ್ತು ಇಂಟರ್‌ನೆಟ್ ಎಂದು ಕರೆಯುತ್ತಿದ್ದೆವಲ್ಲಾ. ಆ ಇಂಟರ್‌ನೆಟ್ ಎನ್ನುವುದೇ ಸಿಂಗಲ್ ಡಿಜಿಟ್. ಅದಕ್ಕಾಗಿಯೇ ನಾವು ಎರಡೂ ಪದ ಉಪಯೋಗಿಸಿದ್ದೇವೆ. ಆನ್‌ಲೈನ್ ಅಂಡ್ ಇಂಟರ್‌ನೆಟ್ ಎಂದು. ಅದಕ್ಕೆ ಅವಕಾಶ ಇರಬಾರದೆಂದೇ, ಕಾನೂನಿನಲ್ಲಿ ಸಿಕ್ಕಿಹಾಕಿಕೊಳ್ಳಬಾರದೆಂದು ಆನ್‌ಲೈನ್ ಅಂಡ್ ಇಂಟರ್‌ನೆಟ್ ಎಂದು ಹೇಳಿದ್ದೇವೆ. ಮತ್ತೆ ಬೇರೆ ಬೇರೆ ಮಟ್ಕಾ ಇತ್ಯಾದಿ ಹೇಳಿದ್ದಾರಲ್ಲಾ..

ಶ್ರೀ ಎಸ್.ಎಸ್. ಪಾಟೀಲ್ : ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಅಧಿಕಾರಿಗಳಿಗೇ ಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ : ಅದೆಲ್ಲಾ ಪೋಲೀಸಿನವರ ಮುಖಾಂತರ ನಿಲ್ಲಿಸಬೇಕಾಗಿರುವಂಥಾದ್ದು. ಕಾನೂನಿಗೆ ವಿರುದ್ಧವಾದುದ್ದನ್ನು, Law takes its own course. Only thing is enforcement of Law. ಇವೆಲ್ಲಾ ಇಲ್ಲೀಗಲ್ ಆಕ್ಟಿವಿಟೀಸ್. ನಾವೇ ಅಗ್ರಿಮೆಂಟ್ ಮಾಡಿಕೊಂಡು ನಡೆಸುತ್ತಿದ್ದದ್ದನ್ನು ನಿಲ್ಲಿಸಿರುವುದು. Other illegal activities which are going on, ಅವನ್ನು ನಿಲ್ಲಿಸುವುದಕ್ಕೆ ಕಾನೂನಿನಲ್ಲಿ ಮತ್ತು ನಮ್ಮ ಎನ್‌ಫೋರ್ಸ್‌ಮೆಂಟ್‌ನ್ನು ಎಷ್ಟು ಬಿಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಆ ಎಲ್ಲಾ ಬಿಗಿ ಮಾಡತಕ್ಕ ಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಳ್ಳುತ್ತದೆ ಎಂಬ ಮಾತನ್ನು ಕೂಡ ತಿಳಿಸುತ್ತೇನೆ. ಆದ್ದರಿಂದ ಮಟ್ಕಾ, ಓ.ಸಿ.ನೋ, ಇನ್ನೆಂಥದೋ ಏನೇನು ನಡೆಯುತ್ತವೆ, ಈ ಎಲ್ಲಾ ಕಾನೂನು ಬಾಹಿರವಾದಂಥ ಕ್ರಮಗಳು, ಕಾನೂನು ಬಾಹಿರವಾದಂಥ ಚಟುವಟಿಕೆಗಳು. ನೀವು ಸ್ಪೆಸಿಫಿಕ್ ಆಗಿ ಯಾವುದಾದರೂ ಹೇಳಿ. ಓ.ಸಿ. ಎನ್ನುವುದೇ ಸ್ಪೆಸಿಫಿಕ್, ಅದನ್ನು ಹೇಳಿಯೇ ಜನರಲೈಸ್ ಮಾಡಿರುವುದು. ಮೊದಲು ಓ.ಸಿ. ಹೇಳಿ, ಮಟ್ಕಾ ಹೇಳಿ ಆಮೇಲೆ ಜನರಲೈಸ್ ಮಾಡಿರುವುದು. ಇವೆಲ್ಲಾ ಕಾನೂನು ಬಾಹಿರ. ಹಾಗಾದರೆ, ಇವರೆಡೂ ಬಿಟ್ಟು, ಉಳಿದ ಇಲ್ಲೀಗಲ್ ಚಟುವಟಿಕೆಗಳು ಇರಬೇಕೆಂದೇ ನೀವು ಹೇಳುವ ಪ್ರಕಾರ. ಇವೆರಡು ಬಿಟ್ಟು, other illegal activities should continue? ಅವೂ ಕೂಡ ನಿಲ್ಲಬೇಕಲ್ಲಾ. ಆದ್ದರಿಂದ ಕಾನೂನುಬಾಹಿರವಾಗಿ ನಡೆಯುತ್ತಿದ್ದ ಎಲ್ಲವನ್ನೂ ನಿಲ್ಲಿಸತಕ್ಕ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಇನ್ನೆರಡು ವಿಚಾರಗಳನ್ನು ಬಹಳ ಜನ, ಆ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನೀವು ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದಿರಿ, ಇನ್ನೊಂದು ಐದುನೂರು ರೂಪಾಯಿ ಮಾಸಿಕ ಭತ್ಯೆ ಕೊಡುತ್ತೇವೆಂದು ಹೇಳಿದ್ದಿರಿ, ಇದರಲ್ಲಿ ಅದನ್ನು ಹೇಳಿಲ್ಲವಲ್ಲಾ ಎಂದು ಹೇಳಿದ್ದಾರೆ. ಇದನ್ನು ಮಾಡಿಲ್ಲವೆಂಬ ಮಾತುಗಳನ್ನು ಹೇಳಿದ್ದಾರೆ. ಬಡ್ಡಿ ಮತ್ತು ಸುಸ್ತಿ ಬಡ್ಡಿ ವಿಚಾರವಾಗಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಹೇಳಿರುವುದು ನಿಜ. ಅದನ್ನು ಬಿಟ್ಟುಬಿಟ್ಟಿದ್ದೇವೆಂದು ಯಾರೂ ಕೂಡ ಭಾವಿಸಿಕೊಳ್ಳಬೇಕಾಗಿಲ್ಲ. ನಮ್ಮ ಬಜೆಟ್ ಸ್ಪೀಚ್‌ನಲ್ಲಿ ನಾವೇನು ಹೇಳಿದ್ದೇವೆ. ಕೇಂದ್ರದ ಹಣಕಾಸು ಮಂತ್ರಿಗಳಾದ ಮಾನ್ಯ ಚಿದಂಬರಂರವರು ಅವರ ಬಜೆಟ್ ಸ್ಪೀಚ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ.

ಈ ಸಾರಿ credit flow to agriculture sector ಅದನ್ನು ದುಪ್ಪಟ ಮಾಡುತ್ತೇನೆ; ಬ್ಯಾಂಕುಗಳ ಮೂಲಕ ಎಂಬ ಒಂದು ಮಾತನ್ನು ಹೇಳಿದ್ದಾರೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಈ ಕ್ರೆಡಿಟ್‌ಗೆ ಸಂಬಂಧಪಟ್ಟಂತೆ ನಾನು ಒಂದು ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡುತ್ತಾ ಇದ್ದೇನೆ. ಈ ಟಾಸ್ಕ್‌ಫೋರ್ಸ್ ರಚನೆ ಮಾಡಿದಮೇಲೆ, ಅವರು ವರದಿ ಏನು ಕೊಡುತ್ತಾರೆಂಬುದರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಈ ಕ್ರೆಡಿಟ್ ಬಗ್ಗೆ ನಾನು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ. ಅದಕ್ಕೆ, ಆ ವರದಿ ಬಂದಮೇಲೆ ಕೇಂದ್ರ ಸರ್ಕಾರ ಟಾಸ್ಕ್‌ಫೋರ್ಸ್ ವರದಿ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ ಅದನ್ನೂ ಕೂಡ ಕಾದು, ಅವರಿಂದ ಏನಾದರೂ ಸಹಾಯ ಸಿಕ್ಕುವುದಾದರೆ ಅದನ್ನೂ ಉಪಯೋಗಿಸಿಕೊಂಡು ಮತ್ತೆ ರಾಜ್ಯಸರ್ಕಾರವೂ ಕೂಡ ರೈತರು ಈವರೆಗೆ ಕೋ ಆಪರೇಟಿವ್ ಬ್ಯಾಂಕುಗಳಲ್ಲಿ, ಸೊಸೈಟಿಗಳಲ್ಲಿ ಏನು ಸಾಲ ಮಾಡಿದ್ದಾರೆ, ಅದರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಸುಮಾರು 900 ಕೋಟಿ ರೂ ಆಗುತ್ತದೆ. ಈ ಒಂಬೈನೂರು ಕೋಟಿ ರೂಪಾಯಿ ಒಮ್ಮೆಲೇ ರಾಜ್ಯಸರ್ಕಾರ ಭರಿಸತಕ್ಕ ಆರ್ಥಿಕ ಶಕ್ತಿ ಈ ವರ್ಷ ಇಲ್ಲದೇ ಇರುವುದರಿಂದ ಮತ್ತು ಇದು ಎಂಟು ತಿಂಗಳ ಬಜೆಟ್ ಆಗಿರುವುದರಿಂದ, ಮುಂದೆ ನಾನು ಈ ಬಗ್ಗೆ ಸ್ಪಷ್ಟವಾದಂಥ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮತ್ತು ಯಾರು ಮೂರು ವರ್ಷಗಳ ಕಾಲ ರೈತರು ಬರಗಾಲದಲ್ಲಿ ಕಷ್ಟಪಟ್ಟಿದ್ದಾರೆ, ಸಾಲ ತೆಗೆದುಕೊಂಡು ಬಡ್ಡಿ, ಸುಸ್ತಿ ಬಡ್ಡಿ ಕಟ್ಟುವುದಕ್ಕೆ ಯಾರಿಗೆ ಸಾಧ್ಯವಾಗಿಲ್ಲ, ಅದಕ್ಕೆ ಪರಿಹಾರವನ್ನು ಕೊಡತಕ್ಕ ತೀರ್ಮಾನವನ್ನು ಈ ಸರ್ಕಾರ ಮಾಡುತ್ತದೆ ಎನ್ನತಕ್ಕ ಮಾತನ್ನು ನಾನು ಈ ಸದನದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಈಗ ಮೊದಲನೇ ಬಾರಿಗೆ ಕರ್ನಾಟಕದಲ್ಲಿ ಪ್ರಾಯಶಃ ಇಡೀ ಭಾರತದಲ್ಲಿ ರೈತರಿಗೆ ಸೊಸೈಟಿಗಳ ಮೂಲಕ ಶೇಕಡ 6ರ ಬಡ್ಡಿ ದರದಲ್ಲಿ ಇನ್ನು ಮುಂದೆ ರೈತರಿಗೆ ಸಾಲ ಸಿಗತಕ್ಕ ವ್ಯವಸ್ಥೆಯನ್ನು ಮಾಡಿರತಕ್ಕಂಥ ಮೊದಲನೇ ರಾಜ್ಯ ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇದಕ್ಕೆ ನೀವೆಷ್ಟು ದುಡ್ಡು ಇಟ್ಟಿದ್ದೀರಿ, 60 ಕೋಟಿ ರೂ. ಇಟ್ಟಿದ್ದೀರಿ, ಇದು ಸಾಕಾಗುವುದಿಲ್ಲವೆಂದು ಹೇಳುತ್ತಾರೆ. ನಾವು ಒಂದು ಅಂದಾಜು ಮಾಡಿದ್ದೇವೆ. ಸೊಸೈಟಿಗಳಿಂದ 1,600 ಕೋಟಿ ರೂಪಾಯಿಗಳ ಸಾಲ ಕೊಡಬಹುದು, ಕಳೆದ ವರ್ಷ ಸೊಸೈಟಿಗಳಲ್ಲಿ 1,300 ಕೋಟಿ ರೂ. ಸಾಲ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ರಾಜ್ಯದ ಜನ ನೋಡುತ್ತಿರುವಂಥಾದ್ದು ಈ ರಾಜ್ಯದ ರೈತರ ಸಾಲದ ಮೇಲಿನ ಸಂಪೂರ್ಣ ಬಡ್ಡಿ ಮನ್ನಾ ಆಗುತ್ತೆ ಎನ್ನುವಂಥಾದ್ದು. ಕೇಂದ್ರ ಸರ್ಕಾರದವರು ಏನಾದರೂ ಮಾಡಲಿ. ನಾನು ಒಬ್ಬ ಸಾಮಾನ್ಯ ರೈತ, ಸಾಲಗಾರ. ನಾಳೆ, ನಾನು ಏನು ಮಾಡಬೇಕೆಂದು ದಿಕ್ಕುತೋಚುತ್ತಾ ಇಲ್ಲ. ಈ ಮನೆಯಿಂದ ನಿಮ್ಮ ಸ್ಪಷ್ಟವಾದ ಸಂದೇಶ ಹೋದರೆ, ಈ ರಾಜ್ಯದಲ್ಲಿ ಸಹಕಾರಿ ಸಂಘಗಳಿಂದ ಪಡೆದಂಥ ಎಲ್ಲಾ ರೀತಿಯ ಸಾಲ, ದೀರ್ಘಾವಧಿ, ಮಧ್ಯಮಾವಧಿ ಮತ್ತು ಅಲ್ಪಾವಧಿ ಈ ಯಾವುದೇ ಸಾಲ ಇರಬಹುದು, ಅದರ ಸಂಪೂರ್ಣ ಬಡ್ಡಿ ಮನ್ನಾ ಮಾಡುತ್ತಿದ್ದೇವೆಂದು ಹೇಳಿದರೆ ಇಷ್ಟನೇ ತಾರೀಖಿನೊಳಗೆ ಅಸಲು ಕಟ್ಟಿದರೆ, ಸೆಪ್ಟಂಬರ್ ಕೊನೆಯೊಳಗಾಗಿ ಅಸಲು ಕಟ್ಟಿದರೆ ಎಂಬ ಒಂದು ಮಾತು ನೀವು ಹೇಳಿದರೆ, ಆ ಸಿದ್ಧತೆಯನ್ನು ಅವನು ಮಾಡಿಕೊಳ್ಳುತ್ತಾನೆ. ಆದ್ದರಿಂದ, ಸ್ಪಷ್ಟವಾದಂಥ ಮೆಸೇಜ್ ಇಲ್ಲಿಂದ ಹೋಗಬೇಕು. ಇಲ್ಲದೇ ಇದ್ದರೆ ಗೊಂದಲಕ್ಕೆ ಅವಕಾಶವಾಗುತ್ತೆ; ಎನ್ನುವಂಥಾದ್ದು ನನ್ನ ಪ್ರಶ್ನೆ.

2.10 ಪಿ ಎಂ

ಶ್ರೀ ಜಿ. ಚಂದ್ರಣ್ಣ : ಇನ್ನೊಂದು ವಿಚಾರವನ್ನು ಹೇಳಬಹುದು. ಚುನಾವಣೆ ಬೇರೆ ಬರುತ್ತಿತ್ತು. ಚುನಾವಣೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಅದನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ,

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ವಿಧಾನಸಭಾ ಕ್ಷೇತ್ರಕ್ಕೆ ಆರು ಕೋಟಿ ರೂಪಾಯಿ, ಏಳು ಕೋಟಿ ರೂಪಾಯಿ ತಾವು ಕೊಡುತ್ತಿದ್ದೀರಿ. 200, 300 ಜನ 50–50 ಸಾವಿರ ರೂ. ತೆಗೆದುಕೊಂದರೆ ಒಂದು ವಿಧಾನಸಭಾ ಕ್ಷೇತ್ರಕ್ಕೆ 300 ಜನಕ್ಕೆ ಸಾಕಾಗುತ್ತದೆ. ಅದಕ್ಕಿಂತಲೂ ಜಾಸ್ತಿ ತಾವು ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸುಬ್ರಹ್ಮಣ್ಯ ನಾಯ್ಡು ಅವರೇ, ನಾನು ನಾನೇ ಬರೆದು ಬಿಟ್ಟು ಲೆಕ್ಕ ಹಾಕಿಕೊಂಡಿಲ್ಲ. ಕೋ ಆಪರೇಟಿವ್ ಡಿಪಾರ್ಟ್‌ಮೆಂಟಿನಿಂದ ಅಂಕಿಅಂಶಗಳನ್ನು ತರಿಸಿಕೊಂಡು ಅವರು ಏನು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ, ಅದರ ಮೇಲೆ ಲೆಕ್ಕ ಮಾಡಿ ಹೇಳಿರತಕ್ಕದ್ದು. ನನ್ನ ಲೆಕ್ಕ ಅಲ್ಲ ಇದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವ್ಯಾಕೆ ಕೇಳಿದ್ದೇವೆ ಎಂದರೆ ಬೇರೆ ಕಡೆಗೆ ಲೋನ್ ತೆಗೆದುಕೊಳ್ಳುವುದು ಕಡಿಮೆ ಆಗಿ ಈ ಕಡೆ ಜಾಸ್ತಿ ಆಗುತ್ತದೆ. 6 ಪರ್ಸೆಂಟ್ ರೇಟ್ ಆಫ್ ಇಂಟರೆಸ್ಟ್ ಆದರೆ ಈ ಕಡೆ ಜಾಸ್ತಿ ಆಗುತ್ತದೆ. ಅದರಿಂದ ಅಮೌಂಟ್ ಜಾಸ್ತಿ ಮಾಡಿ.

ಶ್ರೀ ಸಿದ್ಧರಾಮಯ್ಯ : ಇನ್ ಕೇಸ್ ಅದಕ್ಕಿಂತ ಜಾಸ್ತಿ ಆಯಿತು ಎಂದು asuming for the argument sake, ಅದಕ್ಕಿಂತ ಜಾಸ್ತಿ ಆಯಿತು ಎಂದು ಇಟ್ಟುಕೊಳ್ಳೋಣ. 1600 ಕೋಟಿ ರೂ. ಯಿಂದ 2000 ಕೋಟಿ ರೂ. ಆಯಿತು ಎಂದು ಇಟ್ಟುಕೊಳ್ಳೋಣ. ಅದಕ್ಕೆ ಬೇಕಾದಂತಹದನ್ನೂ ಕೊಡುತ್ತೇವೆ. ಏಕೆಂದರೆ ಮಾನ್ಯ ಯಡಿಯೂರಪ್ಪನವರು ಹೇಳಿದಂತಹ ಸಲಹೆಗೆ ನಾವು 900 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಡಬೇಕು. ಬರೇ ಬಾಯಿನಲ್ಲಿ ಇದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ. ನಾವು ಬಡ್ಡಿ ಮನ್ನಾ ಮಾಡುತ್ತೇವೆ ಎಂದರೆ ನಬಾರ್ಡ್‌ನವರು ರೀಫೈನಾನ್ಸ್ ಮಾಡುವುದಿಲ್ಲ. ಅವರು ಒಪ್ಪುವುದಿಲ್ಲ. ಅದಕ್ಕೋಸ್ಕರ ನಾವು ಜನಗಳಿಗೆ ಆಸೆ ಹುಟ್ಟಿಸುವುದಕ್ಕೋಸ್ಕರ ಮಾಡಬಾರದು. Whatever we say-- ಅದು ಅನುಷ್ಠಾನ ಆಗಬೇಕು. ಅದಕ್ಕೆ ನಿಮ್ಮ ಕಳಕಳಿ ನಮಗೂ ಇದೆ. ನೀವೂ ರೈತರ ಪರವಾಗಿ ಹೋರಾಟ ಮಾಡಿದವರು. ನಾವೂ ರೈತರ ಮನೆಯಿಂದಲೇ ಬಂದಂತಹವರು. ಹಳ್ಳಿ ಜೀವನ, ಹಳ್ಳಿಯ ಕಷ್ಟಗಳನ್ನು ಎಲ್ಲಾ ಸ್ವತಃ ನೋಡಿರತಕ್ಕಂಥವರು. ಅದರ ಬಗ್ಗೆ ಎರಡನೇ ಮಾತಿಲ್ಲ. ನೀವು ಹೇಳತಕ್ಕಂಥ ಮಾತು, ಅದರ ಹಿಂದೆ ಇರತಕ್ಕ ಕಳಕಳಿ ಬಗ್ಗೆ ಎರಡನೇ ಮಾತಿಲ್ಲ. ಆದರೆ ಇದು ಬರೇ ರಾಜ್ಯ ಸರ್ಕಾರ ಒಂದೇ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರವೂ ಮಾಡಬೇಕಾಗುತ್ತದೆ. ಹಿಂದೆ ನಿಮ್ಮ ಸರ್ಕಾರ ಇತ್ತು. ಆಗ ಮಾನ್ಯ ಜಸ್ವಂತ್ ಸಿಂಗ್ ಅವರು ಹಣಕಾಸಿನ ಮಂತ್ರಿ ಆಗಿದ್ದರು. ಅವರೊಂದು ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದರು. 9 ಪರ್ಸೆಂಟ್‌ನಲ್ಲಿ ಸಾಲ ಕೊಡುತ್ತೇವೆ ಆದರೆ ಸೀಲಿಂಗ್ ಮಾತ್ರ 50 ಸಾವಿರ ರೂ. ಎಂದರು. ಸೀಲಿಂಗ್ ಮಾತ್ರ 50 ಸಾವಿರ ರೂ. 50 ಸಾವಿರದವರೆಗೆ ಮಾತ್ರ 9 ಪರ್ಸೆಂಟ್ ಇಂಟರೆಸ್ಟ್.

ಓವರ್ ಅಂಡ್ ಎಬೋವ್ 50 ಪರ್ಸೆಂಟ್, ಅದಕ್ಕೆ ಮಾಮೂಲಿ ರೇಟ್ ಕೊಡಬೇಕು ಎನ್ನತಕ್ಕದ್ದನ್ನು ಹೇಳುತ್ತಿದ್ದರು. ಆ ತರಹ ಆಗುವುದರಿಂದ ಹೆಚ್ಚು ಜನರಿಗೆ ಉಪಯೋಗ ಆಗುವುದಿಲ್ಲ. ಇದು ನನ್ನ ಪ್ರಕಾರ ಎಲ್ಲಾ ಬ್ಯಾಂಕ್‌ಗಳು ಕೊಡತಕ್ಕ ಸಾಲ, ಎಲ್ಲಾ ಕೋ ಆಪರೇಟಿವ್‌ನಲ್ಲಿ ಕೊಡತಕ್ಕ ಸಾಲ. ರೈತರಿಗೆ ಏನೇನು ಅಗ್ರಿಕಲ್ಚರಲ್ ಸೆಕ್ಟಾರ್‌ಗೆ ಕ್ರೆಡಿಟ್ ಬರುತ್ತದೆ.......

ಶ್ರೀ ಕೆ.ಎನ್. ರಾಜಣ್ಣ : ಸಾಲ ಕೊಡತಕ್ಕಂಥ ಉದ್ದೇಶ ಇರತಕ್ಕದ್ದು ಬಹಳ ಮಹತ್ವ. ಒಂದು ತಮ್ಮ ಗಮನಕ್ಕೆ ತರುತ್ತೇನೆ. ಮುಂದೆ ಬರತಕ್ಕಂಥ ಒಂದು ಪರಿಸ್ಥಿತಿ. ಸಹಕಾರಿ ಸಂಘಗಳಲ್ಲಿ ಏನು ಸಾಲ ಕೊಡುತ್ತಾರೆ, ಅದಕ್ಕೆ 6 ಪರ್ಸೆಂಟ್. ಕಮರ್ಷಿಯಲ್ ಬ್ಯಾಂಕಿಗೆ ಅಪೆಟು 50,000ಗೆ 9 ಪರ್ಸೆಂಟ್. ಆದರೆ ಸಹಕಾರಿ ಸಂಘಗಳ ಮೂಲಕ ಕೊಡತಕ್ಕದ್ದು ಈ ರಾಜ್ಯದಲ್ಲಿ ಬರೇ 15 ಲಕ್ಷ ರೈತರಿಗೆ ಮಾತ್ರ. 70 ಲಕ್ಷ ರೈತ ಕುಟುಂಬಗಳು ಇದ್ದಾವೆ. ಆದರೆ ಆರ್‌ಆರ್‌ಬಿಗಳು ಮತ್ತು ಕಮರ್ಷಿಯಲ್ ಬ್ಯಾಂಕ್ಸ್‌ನಲ್ಲಿ ತೆಗೆದುಕೊಳ್ಳತಕ್ಕಂಥದ್ದು 65 ಪರ್ಸೆಂಟ್ ಸಾಲ ಹೆಚ್ಚಿದೆ. ಬರೀ 35 ಪರ್ಸೆಂಟ್ ಸಾಲವನ್ನು ಮಾತ್ರ ರೈತರು ಸಹಕಾರಿ ಸಂಘಗಳಲ್ಲಿ ತೆಗೆದುಕೊಳ್ಳತಕ್ಕದ್ದು. ನೀವು ಕೊಡತಕ್ಕಂಥ ಆರು ಪರ್ಸೆಂಟ್ ಏನು ಹೇಳುತ್ತೀರಿ, ಬರೇ ಈ ಒಂದು 35 ಪರ್ಸೆಂಟ್ ಸಾಲಗಾರನ ಹಣಕ್ಕೆ ಮಾತ್ರ. 65 ಪರ್ಸೆಂಟ್ ಸಾಲವನ್ನು ಕೊಡತಕ್ಕಂಥ ಸಂಸ್ಥೆಗಳು ಏನು ಇದ್ದಾವೆ, ಅವರು ಇನ್ನೂ ಹೆಚ್ಚೇ ಹಾಕುತ್ತಾರೆ. ನಾವು ರೈತರನ್ನು ಎರಡು ಬಗೆ ಮಾಡಿದ ಹಾಗೆ ಆಗುತ್ತದೆ. ಇದು ಬಹಳ ಪ್ರಮುಖವಾದಂತಹದು. ಇದನ್ನು ಯಾವ ರೀತಿ ಪರಿಹರಿಸುತ್ತೀರಿ? ಏಕೆಂದರೆ ನ್ಯಾಶನಲೈಸ್ಡ್ ಬ್ಯಾಂಕ್‌ನಲ್ಲಿ 9 ಪರ್ಸೆಂಟ್ ಬಡ್ಡಿ ಇದೆ. ಅವರಿಗೆ ಈ 6 ಪರ್ಸೆಂಟ್‌ನಲ್ಲಿ ಬಡ್ಡಿ ಸಿಗುವುದಿಲ್ಲ. ಸಹಕಾರಿ ಸಂಘಗಳಲ್ಲಿ ಮಾತ್ರ ತಾವು ಹೇಳಿರತಕ್ಕದ್ದು. 35 ಪರ್ಸೆಂಟ್ ಸಾಲದ ಹಣಕ್ಕೆ ಮಾತ್ರ 6 ಪರ್ಸೆಂಟ್ ಆಗುತ್ತದೆ. ಇದು ವಿಚಾರ ಬರುತ್ತದೆ. ಇದನ್ನು ನೀವು ಯಾವ ರೀತಿ ಬಗೆಹರಿಸುತ್ತೀರಿ ಎಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರಾಜಣ್ಣನವರು ಕೇಳಿದಂತೆ ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಸಹಕಾರಿ ಸಂಘದಿಂದ ನಮ್ಮ ರೈತರು ಪಡೆದಿದ್ದರೆ ನಿಮ್ಮ ಅಂಕಿ ಅಂಶದ ಪ್ರಕಾರಾನೇ, ಸುಮಾರು ಮೂರುವರೆ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ನಮ್ಮ ರೈತರು ಪಡೆದಿದ್ದಾರೆ. ಇಬ್ಬರೂ ಬರಗಾಲಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಕಳೆದ ಮೂರು ವರ್ಷದಿಂದ. ತಾವು ಇವತ್ತು 6 ಪರ್ಸೆಂಟ್ ಅನ್ನು ಕೋ ಆಪರೇಟಿವ್ ಲೋನ್ಸ್‌ಗೆ ಮಾಡಿದ್ದೀರಿ ಇದನ್ನು ನಾವು ಸ್ವಾಗತ ಮಾಡಿದ್ದೇವೆ. ದಿಟ್ಟ ನಿರ್ಧಾರ ನೀವು ತೆಗೆದುಕೊಂಡಿದ್ದೀರಿ. ಆದರೆ ಯಾವ ಒಬ್ಬ ರೈತನಿಗೆ ನಮ್ಮ ಸಹಕಾರಿ ಸಂಘದಿಂದ ಹೆಚ್ಚು ಸಾಲವನ್ನು ಕೊಡುವುದಕ್ಕೆ ಆಗಲಿಲ್ಲ; ಆತ ಅನಿವಾರ್ಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹೋಗುತ್ತಾನೆ. ಅವನಿಗೆ ಕನ್ಸಿಷನ್ ಕೊಡದೇ ಇದ್ದರೆ ಹೇಗೆ; ಎರಡು ಹೊಲ ಅಕ್ಕ ಪಕ್ಕ ಇದೆ. ಇಬ್ಬರು ರೈತರೂ ಬರಗಾಲಕ್ಕೆ ಸಿಕ್ಕಿದ್ದಾರೆ. ಒಬ್ಬ ಕೋ ಆಪರೇಟಿವ್ ಸೊಸೈಟಿಯಿಂದ ಲೋನ್ ತೆಗೆದುಕೊಂಡಿದ್ದಾರೆ, ಒಬ್ಬ ರಾಷ್ಟ್ರೀಕೃತ ಬ್ಯಾಂಕಿನಿಂದ ಲೋನ್ ತೆಗೆದುಕೊಂಡಿದ್ದಾನೆ. ಅವನಿಗೆ ಈ ಕನ್ಸಿಷನ್ ಕೊಡದೇ ಇದ್ದರೆ ಹೇಗೆ ಎನ್ನುವುದು ಒಂದು. ಎರಡನೆಯದು ಬಡ್ಡಿ ಮನ್ನಾ ಬಗ್ಗೆ ನೀವಿನ್ನೂ ಗೊಂದಲದಲ್ಲಿದ್ದೀರಿ. ಏಕೆಂದರೆ ಇವತ್ತು ರಾಜ್ಯಪಾಲರ ಭಾಷಣ ಆದ ಮೇಲೆ, ನಿಮ್ಮ ಬಜೆಟ್ ಆದ ಮೇಲೆ ಹೆಡ್‌ಲೈನ್ಸ್‌ನಲ್ಲಿ

ಪ್ರಕಟವಾಗಿರುವಂತಹದು ಈ ರಾಜ್ಯದ ರೈತರ ಸಾಲದ ಮೇಲಿನ ಬಡ್ಡಿ ಸಂಪೂರ್ಣ ಮನ್ನಾ ಆಗುತ್ತದೆ ಎಂದು ಇದೆ. ಆದರೆ ಇವತ್ತು ನಿಮ್ಮ ಉತ್ತರದಲ್ಲಿ ಅದು ಇಲ್ಲ ಎನ್ನುವುದಾದರೆ ಈ ಬಜೆಟ್, ಈ ರೈತರ ಬಗ್ಗೆ ನಾವು ಮಾತನಾಡುವಂತಹದು ಏನೂ ಅರ್ಥ ಇಲ್ಲದಂತೆ, ಒಂದು ಮೊಸಳೆ ಕಣ್ಣೀರು ಸುರಿಸಿದ ಹಾಗೆ ಆಗುತ್ತದೆ. ಬರಗಾಲಕ್ಕೆ ತುತ್ತು ಆದಂತಹ ರೈತನಿಗೆ ನೆರವು ಕೊಡದ ಹಾಗೆ ಆಗುತ್ತದೆ. ಏನೇ ನಿಮ್ಮ ಕಷ್ಟವಾದರೂ ಒಂದು ನಿರ್ಧಾರಕ್ಕೆ ಬರದಿದ್ದರೆ ಕಷ್ಟ. ನಬಾರ್ಡ್‌ನವರು ಏನು ತಿಳಿದುಕೊಳ್ಳುತ್ತಾನೆ? ಇನ್ನೊಬ್ಬರು ಏನು ತಿಳಿದುಕೊಳ್ಳುತ್ತಾರೆ? ಮೂರು ವರ್ಷದಿಂದ ಬರಗಾಲದಿಂದ ರೈತರು ಸಾಯುತ್ತಿದ್ದಾರೆ. ಅದಕ್ಕೋಸ್ಕರ ಗವರ್ನಮೆಂಟ್ ಈಸ್ ಟೇಕಿಂಗ್ ಫರ್ಮ್ ಡಿಸಿಷನ್. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಾವು 18 ಜನ ಬೆಂಬಲ ಕೊಟ್ಟ ಕಾಲದಲ್ಲಿ ಮೊದಲ ಬಾರಿಗೆ ರಾಜ್ಯದ ಇತಿಹಾಸದಲ್ಲಿ ಸಾಲ ಮನ್ನಾ ಮಾಡಿ ಒಂದು ನಿರ್ಧಾರವನ್ನು ಸಣ್ಣ ಅತಿ ಸಣ್ಣ ರೈತರ ಬಗ್ಗೆ ತೆಗೆದುಕೊಳ್ಳಬೇಕಾಯಿತು. ಒಂದು ದೊಡ್ಡ ಕನ್ಸೆಷನ್ ಕೊಡಬೇಕಾಯಿತು. ಆ ರೀತಿ ಮಾಡಬೇಕು. ಬರೇ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಲ್ಲ. ಸಾಲವನ್ನೇ ಮನ್ನಾ ಮಾಡಿ ಅವನು ಮತ್ತೊಮ್ಮೆ ನೆಮ್ಮದಿಯಿಂದ ಬದುಕುವಂತಹ ವ್ಯವಸ್ಥೆ ಮಾಡುತ್ತಿರಬೇಕಾದ ಈ ಕಾಲದಲ್ಲಿ ನೀವು ಬಡ್ಡಿ ಮನ್ನಾ ಮಾಡಲೂ ಮೀನಾಮೇಷ ಎಣಿಸುತ್ತಿದ್ದೀರಿ. ಅಂದರೆ ನಾಳೆ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದ ರೈತನ ಮುಖ ಹೇಗೆ ತೋರಿಸುವುದು ಇಲ್ಲಿ ಕುಳಿತಿರುವಂತಹ ಶಾಸಕರು? ಅದಕ್ಕಾಗಿ ಸ್ಪಷ್ಟವಾದ ಉತ್ತರವನ್ನು ನಾನು ಕೇಳಿದೆ. ನಿರ್ಧಾರ ನಿಮಗೆ ಬಿಟ್ಟಿದ್ದು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಕ್ಲಾರಿಫೀಕೇಷನ್‌ಗೆ ಅವಕಾಶ ಇದೆ. ಎಲ್ಲಾ ಹೀಗೆ ಎದ್ದರೆ ದಯಮಾಡಿ ಅವರು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಶಿವಾನಂದ ಪಾಟೀಲ್ : ಈಗ ಒಂದು ನಿಮಿಷ ಸಾರ್, ಇಂಪಾರ್ಟೆಂಟ್ ಇಶ್ಯೂ.

ಅಧ್ಯಕ್ಷರು : ಮಾನ್ಯ ಅರ್ಥ ಸಚಿವರೇ, ನೀವು ಎಲ್ಲರಿಗೂ ಈ ತರಹ ಯೀಲ್ಡ್ ಆಗುವುದಾದರೆ ಉತ್ತರ ಹೇಳಲು ಸಮಯ ಆಗುತ್ತದೆ.

ಶ್ರೀ ಶಿವಾನಂದ ಪಾಟೀಲ್ : ಡಿಸಿಸಿ ಬ್ಯಾಂಕ್ ಅಧ್ಯಕ್ಷರು ನಾವು ಇಲ್ಲೇ ಇದ್ದೇವೆ.

ಶ್ರೀ ಸಿದ್ಧರಾಮಯ್ಯ : ನಾನು ಈಗ ಯೀಲ್ಡ್ ಆಗುವುದಿಲ್ಲ.

ಅಧ್ಯಕ್ಷರು : ಆಮೇಲೆ ಕ್ಲಾರಿಫಿಕೇಷನ್‌ಗೆ ಸಮಯ ಆಗುತ್ತದೆ. ಈ ತರಹ ಯೀಲ್ಡ್ ಆಗುವುದಾದರೆ ನಾನೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಸಿದ್ಧರಾಮಯ್ಯ : ನಾನು ಯಾರಿಗೂ ಯೀಲ್ಡ್ ಆಗುವುದಿಲ್ಲ. ಮಾನ್ಯ ಸದಸ್ಯರು ಸಹಕರಿಸಬೇಕು. ನಾನು ಯಾರಿಗೂ ಯೀಲ್ಡ್ ಆಗುವುದಿಲ್ಲ.

ಅಧ್ಯಕ್ಷರು : ಕ್ಲಾರಿಫಿಕೇಶನ್‌ಗೆ ಸಮಯ ಇದೆ, ಅವರು ಉತ್ತರ ಕೊಡಲಿ. ಆಗ ಸರಾಗವಾಗಿ ಉತ್ತರ ಬರುತ್ತದೆ.

ಶ್ರೀ ಸಿದ್ಧರಾಮಯ್ಯ : ಸಧ್ಯಕ್ಕೆ ಬಜೆಟ್ ಭಾಷಣ ಮಾಡುತ್ತಿದ್ದೇನೆ. ಈಗ ಎಷ್ಟು ಯೀಲ್ಡ್ ಆಗಿ ಛೇಂಜಸ್‌ಗಳನ್ನೆಲ್ಲಾ ಹೇಳಿದೆನಲ್ಲಾ. ನಮಗೆ ಇರತಕ್ಕ ಇತಿಮಿತಿಯೊಳಗೆ ಏನು ಸಹಾಯ ಮಾಡಲಿಕ್ಕೆ ಆಗುತ್ತದೆ ಗರಿಷ್ಟ ಪ್ರಮಾಣದಲ್ಲಿ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಎಲ್ಲಾ ಬಡ್ಡಿ ಮನ್ನಾ ಆಗಬೇಕು. ಒಂದು ಸಲ ಸಾಲವನ್ನೇ ಮನ್ನಾ ಮಾಡಬೇಕು ಎನ್ನುವುದರಲ್ಲಿ ನಾನೂ ಒಬ್ಬ. ಕೇಂದ್ರ ಸರ್ಕಾರದವರು ಆ ನೆರವಿಗೆ ಬಂದರೆ ಬಹಳ ಸಂತೋಷ. ಬೇಕಾದರೆ ನಾವೆಲ್ಲಾ ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕೋಣ.

110-13

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ತರಹ ರೈತರ ಎಲ್ಲಾ ಸಾಲದ ಮೇಲೆ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿ ನೀವು ಅಧಿಕಾರಕ್ಕೆ ಬಂದು ಕುಳಿತಿದ್ದೀರಿ ಸ್ವಾಮಿ. ಅದನ್ನು ನಾವು ಕೇಳುತ್ತಿದ್ದೇವೆ, ಬೇರೆ ಏನೂ ಕೇಳುತ್ತಿಲ್ಲ.

ಅಧ್ಯಕ್ಷರು : ಅವರು ಉತ್ತರ ಹೇಳಲಿ, ಆಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಸಿದ್ಧರಾಮಯ್ಯ : ನೀವು ಭಾಷಣದಲ್ಲಿ ಹೇಳಿದ್ದೀರಲ್ಲಾ ಅದನ್ನೇ. ಮಾನ್ಯ ಯಡಿಯೂರಪ್ಪನವರು ಭಾರತೀಯ ಜನತಾ ಪಕ್ಷದಲ್ಲಿ ಬಹಳ ಸೀನಿಯರ್ ಲೀಡರ್ ಮತ್ತು ಪ್ರಭಾವೀ ನಾಯಕರು., ಅದನ್ನೆಲ್ಲಾ ಕೇಳಿ ಮಾನ್ಯ ವಾಜಪೇಯಿಯವರ ಹತ್ತಿರ ಹೇಳಿ ಬಿಟ್ಟು ಮೂರು ವರ್ಷ ಬರಗಾಲ ಇತ್ತಲ್ಲಾ ಮನ್ನಾ ಮಾಡಿಸಿದ್ದರೆ ಆಗುತ್ತಿರಲಿಲ್ಲವೇ? ನಮಗೇಕೆ ಇಷ್ಟು ಕಷ್ಟ ಆಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾಡಿ, ಈಗೇನು ತೊಂದರೆ? ಬಹಳ ಸ್ಪಷ್ಟವಾಗಿ ಮಾನ್ಯ ವಾಜಪೇಯಿಯವರು ಹೇಳಿದರು.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ?

ಗೊಂದಲ

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ಅವರು ಉತ್ತರ ಹೇಳಲಿ. ಮಾನ್ಯ ಸಚಿವರಿಗೆ ಉತ್ತರ ಕೊಡಲು ಅವಕಾಶ ಕೊಡಿ. ನಂತರ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು : 130 ಕೋಟಿ ರೂಪಾಯಿ ಮನ್ನಾ ಮಾಡುತ್ತೇವೆಂದು ಹೇಳಿದಿರಲ್ಲಾ, ಎಲ್ಲಿ ನೀವು ಮನ್ನಾ ಮಾಡಿದಿರಿ?

ಶ್ರೀ ಡಿ.ಆರ್. ಪಾಟೀಲ್ : ಸಾರ್, ಮಾನ್ಯ ಯಡಿಯೂರಪ್ಪನವರು ಪ್ರಯತ್ನ ಮಾಡಿದರು. ಮಾನ್ಯ ವಾಜಪೇಯಿಯವರು ಕೇಳಲಿಲ್ಲ.

ಗೊಂದಲ

ಮಾನ್ಯ ಸದಸ್ಯರು : ಅವರು ಪ್ರಯತ್ನ ಮಾಡಿರಬಹುದು. ಮಾನ್ಯ ವಾಜಪೇಯಿಯವರು ಕೇಳದೇ ಇರಬಹುದು.

ಶ್ರೀ ಸಿದ್ಧರಾಮಯ್ಯ : ಅದೂ ಇರಬಹುದು. ನಾನು ಇಲ್ಲ ಎಂದುಹೇಳಲಿಲ್ಲ. I don't dispute it.

ಗೊಂದಲ

ಶ್ರೀ ಜೀ ವಿಜಯ : ಎಲ್ಲಾ ಕಾಫಿ ಬೆಳೆಗಾರರನ್ನು ಸೇರಿಸಿ ಕೇಂದ್ರ ಮಂತ್ರಿಗಳನ್ನು ಕರೆಸಿ ಮನ್ನಾ ಮಾಡುತ್ತೇವೆಂದು ಹೇಳಿ ಮಾತು ಕೊಟ್ಟಿದ್ದರು. ಮನ್ನಾ ಮಾಡುವುದಕ್ಕೆ ಆಗಲಿಲ್ಲ. ಸುಮ್ಮನೇ ಮಾತನಾಡುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಕಾಫಿ ಬೆಳೆಗಾರರನ್ನು ಸೇರಿಸಿ ಇವರು ಕೇಂದ್ರ ಸರ್ಕಾರದ ಮಂತ್ರಿ ಇದ್ದಾಗ ಮನ್ನಾ ಮಾಡಿಸುತ್ತೇವೆಂದು ಹೇಳಿದ್ದರು. ಕೇಳಿ ಏನಾಯಿತು ಎಂದು?

ಅಧ್ಯಕ್ಷರು : ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ ದಯಮಾಡಿ.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೆ, ನಿಮ್ಮ ಕಡೆಗೇ ನಾನು ನೋಡುವುದಕ್ಕೆ ಶುರು ಮಾಡುತ್ತೇನೆ. ಆ ಕಡೆಗೆ ನೋಡುವುದೇ ಇಲ್ಲ. ನಾವು ಕೇಂದ್ರ ಸರ್ಕಾರ ಏನು ಮಾಡುತ್ತದೆ ಎಂದು ನೋಡಿಕೊಂಡು ರೈತರಿಗೆ ಈ ಸರ್ಕಾರ ಮೊದಲನೇ ಬಾರಿಗೆ ಕೃಷಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ನನಗೇನೂ ಅರ್ಥ ಆಗುತ್ತಿಲ್ಲ. ನಿಮ್ಮ ಬಜೆಟ್ ಭಾಷಣದಲ್ಲೇ ಇದೆ. ನಾನು ಓದುತ್ತಿಲ್ಲ. ಮೂರು ವರ್ಷಗಳ ಸತತ ಬರಗಾಲದಿಂದಾಗಿ ಸಾಲದ ಹೊರೆಯಿಂದ ಬಳಲುತ್ತಿರುವ ರೈತರ ಸಹಕಾರಿ ಬ್ಯಾಂಕುಗಳ ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲು ಪರಿಗಣಿಸಲಿದ್ದೇವೆ. ನೀವೇ ಹೇಳಿರುವ ಮಾತು. ನಿಮ್ಮ ಬಜೆಟ್‌ನಲ್ಲಿ ನೀವೇ ಹೇಳಿರುವಂತಹ ಮಾತು.

ಶ್ರೀ ಸಿದ್ಧರಾಮಯ್ಯ : ಏನಂತ ಹೇಳಿದ್ದೇನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : "ಮೂರು ವರ್ಷಗಳ ಸತತ ಬರಗಾಲದಿಂದಾಗಿ ಸಾಲದ ಹೊರೆಯಿಂದ ಬಳಲುತ್ತಿರುವ ರೈತರ ಸಹಕಾರಿ ಬ್ಯಾಂಕುಗಳ ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲು ಪರಿಗಣಿಸಲಿದ್ದೇವೆ".

ಶ್ರೀ ಸಿದ್ಧರಾಮಯ್ಯ : 'ಪರಿಗಣಿಸುತ್ತೇನೆ' ಎಂದು ಈಗಲೂ ಹೇಳುತ್ತಿದ್ದೇನೆ. ಈಗಲೂ ಅದೇ ಪದ ಉಪಯೋಗಿಸುತ್ತಿದ್ದೇನೆ.

ನಗು

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ನಗುವುದರಿಂದ ನನಗೇನೂ ದುಃಖವಿಲ್ಲ. ಇದನ್ನು ನೀವು ತಮಾಷೆಯಿಂದ ತೆಗೆದುಕೊಳ್ಳುವುದಾದರೆ.....

Sri Siddaramaiah : I stand by that word.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವಾಗ?

ಶ್ರೀ ಸಿದ್ಧರಾಮಯ್ಯ : ಈಗ ಹೇಳುತ್ತಿದ್ದೇನಲ್ಲಾ 'ಪರಿಗಣಿಸುತ್ತಿದ್ದೇನೆ' ಎಂದರೆ, ಈಗ ಕೊಡುತ್ತೇವೆಂದು ಹೇಳಿದ್ದೇವೆಯೇ? ಅದು consideration ನಲ್ಲಿದೆಯೆಂದು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆಯಿಂದ ರೈತ ಏನು ಮಾಡಬೇಕು? ಹೊಸ ಸಾಲ ತೆಗೆದುಕೊಳ್ಳಬೇಕು. ಆತ ಹಳೆಯ ಸಾಲ ಕಟ್ಟುವ ಸ್ಥಿತಿಯಲ್ಲಿಲ್ಲ. ಬಡ್ಡಿ ಕಟ್ಟುವ ಸ್ಥಿತಿಯಲ್ಲೂ ಇಲ್ಲ. ಇದರಿಂದಾಗಿ ಆತ ವಿಷ ತೆಗೆದುಕೊಳ್ಳಬೇಕಾಗುತ್ತದೆ! ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ 18–19 ಜನರು ಆತ್ಮಹತ್ಯೆ ಮಾಡಿಕೊಂಡಾಯಿತು. ನಿಮ್ಮ ಕಾಲದಲ್ಲಿ ಅದು ನಿಲ್ಲುತ್ತದೆಂದು ತಿಳಿದುಕೊಂಡಿದ್ದೆ. ಅದು ಮುಂದುವರೆಯಬೇಕೆಂಬ ಆಸೆ ನಿಮಗಿದ್ದರೆ ಪರವಾಗಿಲ್ಲ.

ಶ್ರೀ ಸಿದ್ಧರಾಮಯ್ಯ : ನಿಮ್ಮದೇ ಸರ್ಕಾರ ಕೇಂದ್ರದಲ್ಲಿದ್ದಾಗಲೂ ಅಷ್ಟೊಂದು ರೈತರು ಸತ್ತರಲ್ಲಾ, ಆಂಧ್ರಪ್ರದೇಶ, ಕರ್ನಾಟಕ ಮುಂತಾಗಿ ಎಲ್ಲಾ ಕಡೆಗಳಲ್ಲೂ ಸತ್ತರಲ್ಲಾ....

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು wrong signal ಕೊಡುತ್ತಿದ್ದೀರಿ. ನೀವು 'ಪರಿಗಣೀಸುತ್ತೇವೆ' ಎಂದರೆ, he will wait. 'ಬಡ್ಡಿ ಮನ್ನಾ ಆಗಬಹುದೆಂದು ಸರ್ಕಾರವೇ ಹೇಳಿದೆ' ಎಂದು ಸಾಲ ಪಡೆದುಕೊಂಡಿರುವ ಯಾವುದೇ ರೈತರು ಹಣ ವಾಪಸ್ಸು ಕಟ್ಟಲು ಇಷ್ಟಪಡುವುದಿಲ್ಲ. ತಾವು ಸ್ಪಷ್ಟವಾಗಿ ಹೇಳಬೇಕಾಗಿತ್ತು. It sends a wrong signal.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ಶೇಕಡ 6ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಸಿಗುವಂತಹ ವ್ಯವಸ್ಥೆ ಮಾಡಿರುವುದರಿಂದ, co-operative institutions ಗಳಲ್ಲಿ nationalised banksಗೆ ಸಂಬಂಧಿಸಿದಂತೆ ಅವೆಲ್ಲವನ್ನೂ ನಾವು ಮಾಡುವುದಕ್ಕಾಗುವುದಿಲ್ಲ. ಕಾರಣ, ಇದಕ್ಕೆಲ್ಲಾ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಸಂಸ್ಥೆ ಒಪ್ಪಿಕೊಳ್ಳಬೇಕಾಗುತ್ತದೆ. ನಮಗೆ ಅದನ್ನು ಮಾಡುವುದಕ್ಕಾಗುವುದಿಲ್ಲ. ನಮ್ಮ ಇತಿಮಿತಿಯೊಳಗೆ ಮಾಡಲು ಪ್ರಯತ್ನಿಸಿದ್ದೇವೆ. ಹೆಚ್ಚು ಸಂಖ್ಯೆಯಲ್ಲಿ ರೈತರು co-operative institutionsನಲ್ಲಿ ಬರುತ್ತಾರೆ. ಈಗ ಒಂದೂವರೆ ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದೇವೆ. ಅದಕ್ಕೆ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಾಗಬಹುದು ಇಲ್ಲವೇ ಅದಕ್ಕಿಂತ ಇನ್ನೂ ಹೆಚ್ಚಾಗಬಹುದಾದ ಸಾಧ್ಯತೆಯಿದೆ. ಇಲ್ಲಿ ಕಮರ್ಷಿಯಲ್ ಬ್ಯಾಂಕ್‌ಗೆ ಹೋಗುವ ಬದಲು ಹೆಚ್ಚಾಗಿ co-operative institutionsಗೆ ರೈತರು ಬಂದು ಸಾಲ ತೆಗೆದುಕೊಳ್ಳಲು ಪ್ರಯತ್ನಿಸಬಹುದು. ಆಗ ಹೆಚ್ಚು ಜನರನ್ನು ಕವರ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರು : ಬಹುತೇಕ ಸೊಸೈಟಿಗಳು ಈಗಾಗಲೇ wind up ಆಗಿವೆ, ಸುಸ್ತಿಯಾಗಿವೆ. ಇದರ ಬಗ್ಗೆ ತಾವು ಗಮನಹರಿಸಬೇಕು.

ಶ್ರೀ ಸಿದ್ಧರಾಮಯ್ಯ : ನಾನು ಅದನ್ನು 'ಪರಿಗಣಿಸುತ್ತಿದ್ದೇನೆ' ಎಂದು ಏಕೆ ಹೇಳುತ್ತಿದ್ದೇನೆಂದರೆ, task force ಏನು ರಿಪೋರ್ಟ್ ಕೊಡುತ್ತದೆಂಬುದನ್ನು ಗಮನಿಸಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದವರೂ ಕೂಡ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, 'credit flow ದುಪ್ಪಟ್ಟು ಮಾಡುತ್ತೇವೆ, co-operative institutions, banks ಇತ್ಯಾದಿ ಎಲ್ಲಾ ಕಡೆಗಳಲ್ಲಿ ಬೇರೆ ರೀತಿ ಏನೇನಿವೆ, ಅವುಗಳ ಬಗ್ಗೆಯೂ ಅಧ್ಯಯನ ಮಾಡಿ ರಿಪೋರ್ಟ್ ಕೊಡುವುದಕ್ಕೆ ನಾನು ಒಂದು task force committee ರಚಿಸುತ್ತೇನೆ' ಎಂದು ಕೇಂದ್ರದ ಹಣಕಾಸು ಸಚಿವರಾದ ಪಿ. ಚಿದಂಬರಂ ಹೇಳಿದ್ದಾರೆ. ಅವರು ಏನು ರಿಪೋರ್ಟ್ ಕೊಡುತ್ತಾರೆಂದು ನೋಡೋಣ. ಹಾಗೆಯೇ ನಾವೂ ಕೂಡ ದೆಹಲಿಗೆ ಹೋದಾಗ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ರಾಜ್ಯದ ಲೋಕಸಭಾ ಸದಸ್ಯರುಗಳನ್ನೂ ಕೂಡ ಕರೆದುಕೊಂಡು ಹೋಗಿ ಅವರನ್ನು ಭೇಟಿ ಮಾಡಿ 'ರಾಜ್ಯದಲ್ಲಿ ರೈತರೆಲ್ಲರೂ ಕಷ್ಟದಲ್ಲಿ ಸಿಲುಕಿದ್ದಾರೆ, ಮೂರು ವರ್ಷಗಳ ಕಾಲ ಸತತ ಬರಗಾಲವಿತ್ತು. ಕರ್ನಾಟಕದಲ್ಲಿ ಇದು ಆಗಲೇಬೇಕು.' ಎಂದು ಹೇಳೋಣ. ಕೇಂದ್ರದಲ್ಲಿ ನಾಲ್ಕೂವರೆ ಲಕ್ಷ ಕೋಟಿ ರೂ.ಗಳಷ್ಟು ಬಜೆಟ್ ಇದೆ. (ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡಲು ಎದ್ದು ನಿಂತರು).

ನಾನು ಮಾತನಾಡುವಾಗ ಪದೇ ಪದೇ ಈ ರೀತಿ disturb ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು clarification ಕೇಳುವುದಿಲ್ಲ. ಸನ್ಮಾನ್ಯ ಮಾಜಿ ಪ್ರಧಾನಿಗಳಾದ ದೇವೇಗೌಡರು ರೈತರ ಬಗ್ಗೆ ಸಾಕಷ್ಟು ಕಳಕಳಿ ಇದ್ದು, ಇಡೀ ದೇಶದ ರೈತರ ಸಾಲ ಮನ್ನಾ ಆಗಬೇಕೆಂದು ಲೋಕಸಭೆಯಲ್ಲಿ ಹೋರಾಟ ಮಾಡಿದಂತಹ ವ್ಯಕ್ತಿಯ ಬೆಂಬಲದಿಂದ ನೀವು ಉಪ ಮುಖ್ಯಮಂತ್ರಿಯಾಗಿ ಇಲ್ಲಿ ಕುಳಿತಿರುವಾಗ, ರಾಜ್ಯದ ರೈತರ ಬಡ್ಡಿ ಹಾಗೂ ಸುಸ್ತಿ ಬಡ್ಡಿ ಮನ್ನಾ ಮಾಡಲು ಮೀನ-ಮೇಷ ಎಣಿಸುತ್ತಿರುವುದನ್ನು ನೋಡಿದರೆ, ಈಗಾಗಲೇ ಧರಣಿ

ಹೂಡಿರುವ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರೊಂದಿಗೆ ನಾನೂ ಕೂಡ ಧರಣಿ ಕುಳಿತುಕೊಳ್ಳದೆ ಬೇರೆ ದಾರಿ ಇಲ್ಲ. ಇದನ್ನು ಕೊನೆಯಲ್ಲಿ ಮಾಡುತ್ತೇನೆ. ನೀವು ಹೀಗೆ ಮಾಡುತ್ತಿರುವುದನ್ನು ನೋಡಿದರೆ, ರೈತ ಸಮಾಜಕ್ಕೆ ಮಾಡುತ್ತಿರುವ ದ್ರೋಹವಾಗಿದೆ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿ, ಈಗ ನೀವು ಹಿಂದೆ ಸರಿಯುತ್ತಿರುವುದು ಶೋಭೆ ತರುವಂಥಾದ್ದಲ್ಲವೆಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಮಗೆ, ರೈತರಿಗೆ ದ್ರೋಹ ಮಾಡಿ ಗೊತ್ತಿಲ್ಲ, ರೈತರಿಗೆ ದ್ರೋಹ ಮಾಡುವುದೂ ಇಲ್ಲ, ಯಾರಿಗೂ ಮಾಡುವುದಿಲ್ಲ. ಅಧಿಕಾರದಲ್ಲಿದ್ದಾಗ ಯಾರ್ಯಾರು ಎಷ್ಟೆಷ್ಟು ದ್ರೋಹವೆಸಗಿದ್ದಾರೆಂಬುದು ಜಗಜ್ಜಾಹೀರಾಗಿದೆ. ಚುನಾವಣಾ ಸಂದರ್ಭದಲ್ಲಿ ಯಾರ್ಯಾರು ಏನೇನು ಹೇಳಿದ್ದಾರೆ, ಮತ್ತು ಅಧಿಕಾರಕ್ಕೆ ಬಂದಾಗ ಏನೇನು ಮಾಡಿದ್ದಾರೆ, ಯಾವ್ಯಾವ ವರ್ಗಗಳಿಗೆ ದ್ರೋಹವಾಗಿದೆಯೆಂದು ಎಲ್ಲವನ್ನೂ ನಾನು ಇಲ್ಲಿ ಹೇಳಲು ಹೋಗುವುದಿಲ್ಲ. ನಾವು ಹೇಳಿದ್ದೇವೆ, ನಿಜ. ನಾವು ಹಾಗೆ ಹೇಳಿಲ್ಲವೆಂದು I don't run away. ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದೆವು, ನೀವೂ ಹೇಳಿದ್ದಿರಿ. ರೈತರ ಸಭೆ ಸೇರಿದಾಗಲೆಲ್ಲಾ ಅನೇಕ ಸಲ ಹೇಳಿದ್ದೀರಿ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಅಧಿಕಾರದಲ್ಲಿದ್ದಾಗ ಏಕೆ ಬಡ್ಡಿ ಮನ್ನಾ ಮಾಡಿಸಲಿಲ್ಲ? ಅದನ್ನು ದ್ರೋಹವೆಂದು ಕರೆಯಬೇಕೇ? ಅದನ್ನು ರೈತರ ಪರವಾದ ನಿಲುವೆಂದು ಕರೆಯಬೇಕೇ? ಆದುದರಿಂದ, ನಾನು ಆ ಪದಗಳನ್ನು ಬಳಸುವುದಕ್ಕೆ ಹೋಗುವುದಿಲ್ಲ. I don't want to use such a word. ಏಕೆಂದರೆ, ಈಗ ಅವರ್ಯಾರೂ ಅಧಿಕಾರದಲ್ಲಿಲ್ಲ. ಅಧಿಕಾರದಲ್ಲಿದ್ದಾಗ ಹೇಳಿದ್ದೆಲ್ಲವನ್ನೂ ಮಾಡಿದ್ದರೆ ಈ ದೇಶ ಸುಭಿಕ್ಷವಾಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಒಂದು ದಿನ separate ಆಗಿ ಚರ್ಚೆ ಮಾಡೋಣ. ಕೇಂದ್ರದಲ್ಲಿ ನಾಲ್ಕೂವರೆ ವರ್ಷಗಳ ಕಾಲ ಅಧಿಕಾರದಲ್ಲಿದ್ದ ಎನ್‌ಡಿಎ ಸರ್ಕಾರ ರೈತರಿಗೆ, ಜನರಿಗೆ ಏನು ಮಾಡದೆ, ನೀವೇನು ಮಾಡಿದ್ದೀರಿ ಎಂಬುದನ್ನು ಚರ್ಚಿಸೋಣ. ಆದರೆ, ಇವೊತ್ತು ಈ ಸದನದಲ್ಲಿ ನೀವು ಕೊಟ್ಟ ಭರವಸೆ....

ಶ್ರೀ ಸಿದ್ಧರಾಮಯ್ಯ : ಅದನ್ನೂ ಚರ್ಚೆ ಮಾಡೋಣ. ನಾವು ಯಾವುದಕ್ಕೂ ಹೆದರುವುದಿಲ್ಲ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಬಜೆಟ್ ಮೇಲೆ ಚರ್ಚೆಯಾಗಬೇಕೇ ವಿನಾ ಹೀಗೆ ಎಲ್ಲರೂ ನಿಂತುಕೊಂಡು ಗಲಾಟೆ ಮಾಡುವುದು ಸರಿಯಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರಾಜ್ಯದ ಜನರು ನಿಮ್ಮನ್ನು ನಂಬಿ ಅವಕಾಶ ಕೊಟ್ಟರು. ನೀವು ಅವರ ನಂಬಿಕೆಗೆ ದ್ರೋಹವೆಸಗುತ್ತಿದ್ದೀರೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ನಾನೂ ಅದನ್ನೇ ಹೇಳುತ್ತಿದ್ದೇನೆ, ನಾನೇನು ಬೇರೆ ಹೇಳುತ್ತಿದ್ದೇನೆಯೇ? ಆಕಾಶದಲ್ಲಿದ್ದವರಿಗೆ, ಅಮೆರಿಕಾದವರಿಗೆ ನಾನು ಹೇಳುತ್ತಿದ್ದೇನೆಯೇ? ನಾನು ಹೇಳುತ್ತಿರುವುದು, ಈ ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಅಧಿಕಾರ ನಡೆಸಿರುವವರಿಗೇ ನಾನು ಹೇಳುತ್ತಿರುವುದು. ಅಮೆರಿಕದವರಿಗೆ, ರಷ್ಯಾದವರಗೆ, ಯೂರೋಪ್‌ನಲ್ಲಿರುವವರಿಗೆ ನಾನು ಕೂಡ

ಹೇಳುತ್ತಿಲ್ಲ. 'ನೀವು ದ್ರೋಹ ಮಾಡಿದ್ದೀರಿ' ಎಂದು ನೀವು ಹೇಳಿರುವುದನ್ನು ನಾನು sportive ಆಗಿ ತೆಗೆದುಕೊಂಡಿದ್ದೇನೆ. ನಾವು ದ್ರೋಹ ಮಾಡಿಲ್ಲ. ನಾವು ರೈತರಿಗೆ, ಯಾರಿಗೂ ದ್ರೋಹ ಮಾಡುವುದಕ್ಕೆ ಹೋಗುವುದಿಲ್ಲ. ರೈತರ ಪರವಾದ ನಿಲುವಿನಲ್ಲಿ ಯಾವುದೇ ಕಾರಣಕ್ಕೂ ಕೂಡ ಬದಲಾವಣೆಯಾಗುವುದಿಲ್ಲ. ಅದರಲ್ಲಿ ಯಾವುದೇ ರಾಜಿ ಇಲ್ಲ. ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವ ಶಕ್ತಿ ಬಂದ ತಕ್ಷಣ ಮಾಡುತ್ತೇವೆ, ಮಾಡುವುದಿಲ್ಲವೆಂದು ಹೇಳುವುದಿಲ್ಲ. ಆದರೆ, ನಾನು ಈಗಾಗಲೇ ಪ್ರಸ್ತಾಪಿಸಿದಂತೆ ಕೇಂದ್ರ ಸರ್ಕಾರದಿಂದ ಏನು ವರದಿ ಬರುತ್ತದೆ, ಅದನ್ನು ಕಾದು, ಅದರ ಮೇಲೆ ಏನು ತೀರ್ಮಾನ ಕೈಗೊಳ್ಳಬಹುದೆಂದು ತೀರ್ಮಾನಿಸುತ್ತೇವೆ. ರೈತರಿಗೆ ಸಂಬಂಧಿಸಿದಂತೆ ನಾನು ಆಗಲೇ ಹೇಳಿದಂತೆ ಸುಮಾರು 20 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳನ್ನು ಸಾಲ ಇದೆ. ಬೆಳೆ ಸಾಲ, short term, medium term, long term ಮತ್ತು crop loan ಇವೆಲ್ಲವೂ ಸೇರಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟಾಗಿದೆಯೆಂದು ಕೇಳಿದ್ದೇನೆ. Whatever information I got from the Co-operative Department, ನಾನು ಅದನ್ನು ಹೇಳಿದ್ದೇನೆ. 15 ಸಾವಿರ ಕೋಟಿ ರೂ. ಎಂದು ನೀವು ಹೇಳಿದ್ದಷ್ಟನ್ನೇ ಒಪ್ಪಿಕೊಳ್ಳೋಣ. ಎಷ್ಟೋ ಇದೆ. ಅದರ ಮೇಲೆ ಬಡ್ಡಿ ಸುಮಾರು 900 ಕೋಟಿ ರೂಪಾಯಿ, ಇಲ್ಲವೇ ಅದಕ್ಕಿಂತ ಸ್ವಲ್ಪ ಕಡಿಮೆ ಇರಬಹುದು, ಹೆಚ್ಚಿರಬಹುದು, ಅದಕ್ಕೋಸ್ಕರವೇ ನಾನು ಶೇಕಡ 60ರಷ್ಟು ರಿಕವರಿಯಾದರೆ ಎಷ್ಟು? 70ರಷ್ಟು ರಿಕವರಿಯಾದರೆ, 50ರಷ್ಟು ರಿಕವರಿಯಾದರೆ ಎಷ್ಟಾಗುತ್ತದೆಂಬುದನ್ನು exercise ಮಾಡಿ ನೋಡಿದ್ದೇನೆ. ಈ ವರ್ಷದ ಕೇಂದ್ರ ಸರ್ಕಾರದ ಬಜೆಟ್ ಬಂದ ನಂತರ ಅದನ್ನೂ ಕೂಡ ಕಾದು, ರೈತರು ಮೂರು ವರ್ಷಗಳ ಕಾಲ ಸತತವಾಗಿ ಬರಗಾಲದಿಂದ ಏನು ನೊಂದಿದ್ದರು, ಅವರಿಗೆ ಸಹಾಯ ಮಾಡುವ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆ ಮಾಡುವ ಮೂಲಕ ಅದಕ್ಕೆ ಬದ್ಧವಾಗಿರುತದೆಂಬ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಇನ್ನೊಂದು ಪರಿಹಾರವನ್ನು ರೈತರಿಗೆ ಏನು ಕೊಟ್ಟಿದ್ದೇವೆಂದರೆ ಅಸಲು ಮತ್ತು ಬಡ್ಡಿ ಇವೆಲ್ಲಾ ಕೊಟ್ಟುಬಿಟ್ಟಿದ್ದಾರೆ. ಅವರ ಅಸಲು ಮತ್ತು ಬಡ್ಡಿಯೆಲ್ಲಾ ಈಗಾಗಲೇ ಮುಗಿದೆ ಹೋಗಿರುತ್ತದೆ. ಆದರೂ ಕೆಲವರ ಅಸಲು ಹಾಗೆಯೇ ಉಳಿದುಕೊಂಡಿರುತ್ತದೆ. ಡ್ಯಾಮಲಿಪಟ್ ಎಂದು ಸಿವಿಲ್ ಕೋರ್ಟ್‌ನಲ್ಲಿ ಒಂದು ಪ್ರಿನ್ಸಿಪಲ್ ಇದೆಯಲ್ಲಾ ಇದರ ಪ್ರಕಾರ interest shall not exceed principal amount ಎಂದು ಇದೆ. ಆ principle, co-operative institutions ಗಳಲ್ಲಿ ಅಷ್ಟಾಗಿ ಆಗಿರಲಿಲ್ಲ. ಆದ್ದರಿಂದ ಇನ್ನು ಮೇಲೆ ಯಾರ್ಯಾರು ಕಟ್ಟಿದ್ದಾರೆ ಸುಮಾರು 49 ಕೋಟಿ ರೂ. ಬರುತ್ತದೆಂದು ಒಂದು ಅಂದಾಜುಮಾಡಿ ಇಟ್ಟಿದ್ದಾರೆ, ಆದ್ದರಿಂದ ಬಜೆಟ್‌ನಲ್ಲಿ 49 ಕೋಟಿ ರೂಪಾಯಿಗಳನ್ನು ನಾನು ಇಟ್ಟಿದ್ದೇನೆ. ಇದರಿಂದ ಸುಮಾರು 20 ಸಾವಿರ ಕುಟುಂಬಗಳಿಗೆ ಆ ರೀತಿ ಇರತಕ್ಕವರಿಗೆ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇನ್ನೂ ಲೇಟ್ ಆಗುವುದಾದರೆ ಊಟಕ್ಕೆ ಬಿಟ್ಟಿದ್ದರೆ ಆಮೇಲೆ ಬಂದು ಸೇರಬಹುದಿತ್ತು.

ಶ್ರೀ ಸಿದ್ಧರಾಮಯ್ಯ : ಇನ್ನು ಅರ್ಧ ಗಂಟೆಯೊಳಗೆ ಮುಗಿಸಿಬಿಡುತ್ತೇನೆ, ಮೂರು ಗಂಟೆಗೆ ಮುಗಿಸಿಬಿಡೋಣ. ನಾನು ಜಾಸ್ತಿ ಎಲ್ಲವನ್ನೂ ಹೇಳಿಬಿಟ್ಟಿದ್ದೇನೆ ಯಡಿಯೂರಪ್ಪನವರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ರೈತರ ಬಗ್ಗೆ ಮಾತ್ರ ಕೇಳಿಸಿಕೊಂಡು ಉಪಯೋಗ ಇಲ್ಲವೆಂದು ಇನ್ನೇನಾದರೂ ಹೇಳಿಕೊಳ್ಳಲಿ ಎಂದು ಸುಮ್ಮನೆ ಕುಳಿತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಇಷ್ಟೂ ಕ್ರೂರವಾಗಬಾರದು. ಇಷ್ಟೊಂದು ಕ್ರುಯಲ್ ಆದರ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತರಿಗೆ ಇನ್ನೇನಾದರೂ ಕೊಡುತ್ತೀರಾ? ಇನ್ನೆಲ್ಲವನ್ನೂ ನಾವು ಟಾಲರೇಟ್ ಮಾಡುತ್ತೇವೆ. ರೈತರಿಗೆ ಅನ್ಯಾಯ ಮಾಡಿದ್ದಿರಾ, ಹಾಗಾದಮೇಲೆ ಎಲ್ಲಾ ಮುಗಿಯಿತು ಎಂದು ಅರ್ಥ.

ಶ್ರೀ ಸಿದ್ಧರಾಮಯ್ಯ : very good. ಆಯಿತು ಬಿಡಿ ಬಿಡಿ.

ಶ್ರೀ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಯಡಿಯೂರಪ್ಪನವರೆ, ಈಗ ಇಷ್ಟೆಲ್ಲಾ ಕೊಟ್ಟಿರುವುದು ರೈತರಿಗೆ ತಾನೇ.

ಗೊಂದಲ

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸರ್ಕಾರ ರೈತರಿಗೆ ಬಹಳ ದೊಡ್ಡ ದ್ರೋಹ ಮಾಡಿದೆ.

ಮಾನ್ಯ ಸದಸ್ಯರು : ಕರ್ನಾಟಕ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಿಲ್ಲ ಎಂದು ಎನ್‌ಡಿಎ ಸರ್ಕಾರದವರು ಹೇಳಿದ್ದರು.

ಗೊಂದಲ

ಶ್ರೀ ಅರಗ ಜ್ಞಾನೇಂದ್ರ : ಈಗ ಬ್ಯಾಂಕ್‌ನವರು ಒಂಭತ್ತೂವರೆ ಪರ್‌ಸೆಂಟ್‌ಗೆ ಕೊಡುತ್ತಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ವೆಂಕಯ್ಯನಾಯ್ಡುರವರನ್ನು ರಾಜ್ಯ ಸಭೆಗೆ ಕಳುಹಿಸುವುದರ ಬದಲಾಗಿ ಯಡಿಯೂರಪ್ಪನವರನ್ನು ಕಳುಹಿಸಿದ್ದರೆ ರಾಜ್ಯದ ರೈತರಿಗೆ ಅನುಕೂಲವಾದರೂ ಆಗುತ್ತಿತ್ತು.

ಶ್ರೀ ಅರಗ ಜ್ಞಾನೇಂದ್ರ : ಇಲ್ಲಿ ನಿಮ್ಮಿಬ್ಬರನ್ನೂ ಕೂರಿಸಿದ್ದಾರಲ್ಲಾ ಅದನ್ನೂ ಹೇಳಿ.

ಶ್ರೀ ಸಿದ್ಧರಾಮಯ್ಯ : ಜನರು ಕೂರಿಸಿರುವುದು. ನೀವು ಕೂರಿಸಿದ್ದೀರೋ? ಜನರು ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆ, ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಏನು ಮಾಡಲು ಆಗುತ್ತದೆ?

ಶ್ರೀ ಅರಗ ಜ್ಞಾನೇಂದ್ರ : ಜನರಿಗೆ ನುಡಿದಂತೆ ತಾವು ನಡೆದುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ನುಡಿದಂತೆ ನಡೆಯಲು ಪ್ರಯತ್ನ ಮಾಡಿದ್ದೇವೆ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇವೆ. ಒಂಬತ್ತೂವರೆ ಪರ್‌ಸೆಂಟ್‌ಗೆ ಬಡ್ಡಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರಲ್ಲಾ. ಈಗ ಡಿಪಾಜಿಟ್‌ಗಳಿಗೆ ಎಷ್ಟು ಪರ್‌ಸೆಂಟ್ ಬಡ್ಡಿಯನ್ನು ಬ್ಯಾಂಕ್‌ನವರು ಕೊಡುತ್ತಿದ್ದಾರೆ? ಆರೂವರೆ ಪರ್‌ಸೆಂಟ್ ಕೊಡುತ್ತಿದ್ದಾರೆ. ಇಲ್ಲಿ ಕಡಿಮೆಯಾಯಿತು ಆದ್ದರಿಂದ ಅಲ್ಲಿ ಕಡಿಮೆ ಮಾಡಿದ್ದಾರೆ. ಅದೇನೂ ದೊಡ್ಡ ವಿಚಾರವಲ್ಲ. ಅಲ್ಲಿ ಡಿಪಾಸಿಟ್‌ಗಳಿಗೆ ಕೊಡುವ ಬಡ್ಡಿ ಕಡಿಮೆಯಾಯಿತು ಆದ್ದರಿಂದ ಒಂಭತ್ತೂವರೆ ಪರ್‌ಸೆಂಟ್‌ಗೆ ಅನಿವಾರ್ಯವಾಗಿ ಇಳಿಸಲೇ ಬೇಕಾಯಿತು. ಅದರ ಮೇಲೂ ಮೋಸ ಮಾಡಲು ಆಗುತ್ತದೆಯೇ? ಮಾಡಲು ಆಗುವುದಿಲ್ಲ. ಆದ್ದರಿಂದ ನಾನು ಇಷ್ಟು ಮಾತ್ರ ಸ್ಪಷ್ಟಪಡಿಸುತ್ತಿದ್ದೇನೆ. ಈ ಸರ್ಕಾರ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿರುವುದರಲ್ಲಿ, ರೈತರ ಬಗ್ಗೆ ಇರತಕ್ಕ ಬದ್ಧತೆಯಲ್ಲಿ ಅವರಿಗಿಂತ ಹೆಚ್ಚು ಇಲ್ಲದಿರಬಹುದು ಆದರೆ ಅವರಿಗಿಂತ ಕಡಿಮೆ ಇಲ್ಲ

ಎನ್ನತಕ್ಕದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಬೆಳೆ ವಿಮೆಯ ಬಗ್ಗೆ ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಬೆಳೆ ವಿಮೆ ಕೊಟ್ಟಿಲ್ಲ, ಸುಮಾರು ಸಾವಿರ ಕೋಟಿ ರೂ. ಯಾಗಿದೆ ಎಂದು ಹೇಳಿದ್ದಾರೆ. ಇದನ್ನು ಇಂಪ್ಲಿಮೆಂಟ್ ಮಾಡುವವರು ಜನರಲ್ ಇನ್‌ಶ್ಯುರೆನ್ಸ್ ನವರು. It is under the Government of India. ಅವರು ಬೆಳೆ ನಷ್ಟ ಎಷ್ಟು ಆಗುತ್ತದೆ ಎಂಬ ಬಗ್ಗೆ ವರದಿಯನ್ನು ಕೊಡುತ್ತಾರೆ. ಆ ವರದಿ ಮೇಲೆ ಕೇಂದ್ರ ಸರ್ಕಾರ ಎಷ್ಟು ಕೊಡಬೇಕು ನಾವು ಎಷ್ಟು ಕೊಡಬೇಕು ಎಂಬುದರ ಮೇಲೆ ಅವಲಂಬಿಸಿರುತ್ತದೆ. ನೀವು ಅದರಲ್ಲಿ ತಿದ್ದುಪಡಿಗಳಾಗಬೇಕೆಂದು ಹೇಳಿದ್ದೀರಿ. ಅದರಿಂದ ಎಲ್ಲರಿಗೂ ಅನುಕೂಲವಾಗುತ್ತಿಲ್ಲವೆಂದು ಹೇಳಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೋಬಳಿ ಮಟ್ಟದಲ್ಲಿ ಕ್ರಾಪ್ ಕಟ್ಟಿಂಗ್ ಲೆವೆಲ್‌ನ್ನು ಇಟ್ಟುಕೊಂಡಿದ್ದಾರೆ, threshold ಅವೆಲ್ಲಾ ಕನಿಷ್ಟ ಗ್ರಾಮಪಂಚಾಯಿತಿ ಮಟ್ಟಕ್ಕೆ ಹೋಗಬೇಕು ಎಂದು ತಾವೇನು ಸಲಹೆ ಕೊಟ್ಟಿದ್ದೀರಿ ಅದರ ಬಗ್ಗೆ ನಾವು ನೀವೆಲ್ಲಾ ಕುಳಿತು ಚರ್ಚೆ ಮಾಡಿ ಯಾವ ರೀತಿ ಮಾಡಬೇಕು, ಹೆಚ್ಚು ರೈತರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಬೆಳೆನಷ್ಟಕ್ಕೆ ಪರಿಹಾರ ಸರಿಯಾಗಿ ಸಿಗಲು ಏನು ಮಾಡಬೇಕು ಎಂಬ ಬಗ್ಗೆ ನಿಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡಿ ಅದರ ಬಗ್ಗೆ ಚರ್ಚೆ ಮಾಡಿ ಆ ಕಾರ್ಯಕ್ರಮದಲ್ಲಿ ಏನು ಬದಲಾವಣೆ ಮಾಡಲು ಸಾಧ್ಯವಿದೆ ಅದನ್ನು ಮಾಡಲು ಪ್ರಯತ್ನವನ್ನು ಮಾಡೋಣ ಎಂದು ತಮಗೆ ತಿಳಿಸಬಯಸುತ್ತೇನೆ. ಅದಕ್ಕೋಸ್ಕರ ಬಾಕಿ 241 ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿ ಇಟ್ಟಿದ್ದೇನೆ. ಅವರು ಏನು ವರದಿಯನ್ನು ಕೊಟ್ಟು ರಾಜ್ಯ ಸರ್ಕಾರ ಎಷ್ಟು ಕೊಡಬೇಕೆಂದು ಹೇಳುತ್ತಾರೋ ಅದನ್ನು ನಾವು ಕಟ್ಟಿಕೊಡಲು..

ಶ್ರೀ ಜಗದೀಶ್ ಶೆಟ್ಟರ್ : ಆ ವರದಿ ಇದುವರೆಗೆ ಬಂದಿಲ್ಲ, ಮೂರು ವರ್ಷದ್ದು ಬಾಕಿ ಇದೆ.

ಶ್ರೀ ಸಿದ್ಧರಾಮಯ್ಯ : ಅದು ಬಂದಿದೆ. 200 ಕೋಟಿ ರೂ. ಯಷ್ಟು ಬರಬೇಕೆಂದು ಬಂದಿದೆ, ಅದಕ್ಕಾಗಿ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ಬೇಗ ಬಿಡುಗಡೆ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಾಡುತ್ತೇವೆ. ನೀವು ಇದನ್ನು ಪಾಸ್ ಮಾಡಿ ಕೊಟ್ಟ ತಕ್ಷಣವೇ ಕೊಡುತ್ತೇವೆ. ಈಗ ಪಾಸ್ ಆದ ತಕ್ಷಣವೇ ತಾನೆ ಕೊಡಬೇಕಾಗಿರುವುದು?

ಶ್ರೀ ಸಿ.ಎಂ. ಉದಾಸಿ : ಬೆಳೆ ವಿಮೆ ಪರಿಹಾರದ ಬಗ್ಗೆ ಮಾರ್ಚ್ 31ಕ್ಕೆ ಮುಂಗಾರು ಬೆಳೆಯ ಪರಿಹಾರ ದೊರೆಯಬೇಕಾಗಿತ್ತು. ಹಿಂಗಾರು ಬೆಳೆಯ ಪರಿಹಾರ ಜೂನ್ 30ರ ಒಳಗಾಗಿ ದೊರೆಯಬೇಕಾಗಿತ್ತು. ಇದರಲ್ಲಿ ವಿಳಂಬವಾಗುತ್ತಿದೆ, ಈಗಾಗಲೇ ಐದು ತಿಂಗಳುಗಳಾಯಿತು, ಹಣ ಬಿಡುಗಡೆಯಾಗುವುದು ವಿಳಂಬವಾಗಿದೆ. ರೈತರು ಕಳೆದ ಮೂರು ವರ್ಷಗಳಿಂದ ಬರಗಾಲದ ಪರಿಸ್ಥಿತಿಯಲ್ಲಿ ದಿಕ್ಕೆಟ್ಟುಹೋಗಿದ್ದಾರೆ. ಹಣವನ್ನು ಬಿಡುಗಡೆ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಚರ್ಚೆಗೆ ಬಹಳ ತೆಗೆದುಕೊಳ್ಳುತ್ತದೆ. ನಾವು ನಿಮಗಿಂತ ಅದರ ಮೇಲೆ ಹೆಚ್ಚು ಗಮನಹರಿಸಿದ್ದೇವೆ. ಬಜೆಟ್ ಆದಮೇಲೆ ಇದರ ಬಗ್ಗೆ ಚರ್ಚೆ ಮಾಡೋಣವೆಂದು ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಲೋಪದೋಷಗಳಿದ್ದರೆ ಸರಿಪಡಿಸಲು ಆಗ ಚರ್ಚೆ ಮಾಡೋಣ.

ಶ್ರೀ ಸಿದ್ಧರಾಮಯ್ಯ : ಒಟ್ಟು 223 ಕೋಟಿ ರೂ. ಕೊಡಬೇಕೆಂದು ಕೃಷಿಸಚಿವರು ಹೇಳುತ್ತಿದ್ದಾರೆ. ನಾವು ಲೆಕ್ಕ ಹಾಕಿರುವ ಪ್ರಕಾರ 200 ಕೋಟಿ ರೂ. ಎಂದು ಇದ್ದೆವು. ಮತ್ತೆ 223 ಕೋಟಿ ರೂ. ಆಗಬೇಕೆಂದು ಹೇಳಿದ್ದಾರೆ. ನಾವು 241 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದೇವೆ. ಈ ಬಜೆಟ್ ಪಾಸ್ ಆದಮೇಲೆ ಕೂಡಲೇ ರೈತರಿಗೆ ಅದನ್ನು ತಲುಪಿಸತಕ್ಕ ಕೆಲಸವನ್ನು ಮಾಡುತ್ತೇವೆ, ನಿಮ್ಮಷ್ಟೇ ಕಳಕಳಿ ನಷ್ಟವಾಗಿರುವ ರೈತರಿಗೆ ತಲುಪಿಸಬೇಕು ಎಂಬ ಉದ್ದೇಶದಿಂದಲೇ 241 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಒಮ್ಮೆಲೇ ಇಟ್ಟಿರತಕ್ಕದ್ದು.

ಶ್ರೀ ಜಗದೀಶ್ ಶೆಟ್ಟರ್ : 241 ಕೋಟಿ ರೂ. ಸಾಕಾಗುವುದಿಲ್ಲ. ನೀವು ಬಡ್ಡಿ ಮನ್ನಾ ಸುಸ್ತಿ ಬಡ್ಡಿ ಮನ್ನಾ ಸಹ ಮಾಡಲಿಲ್ಲ, ಕೊನೆಗೆ ಬೆಳೆ ವಿಮೆ ಹಣವನ್ನಾದರೂ ಬಿಡುಗಡೆ ಮಾಡಿ.

ಶ್ರೀ ಸಿದ್ಧರಾಮಯ್ಯ : ಸಾಲದೇ ಇದ್ದರೆ ಹೆಚ್ಚಾಗಿ ಕೊಡುತ್ತೇವೆ.

ಗೊಂದಲ

ಅಧ್ಯಕ್ಷರು : ಕ್ಲಾರಿಫಿಕೇಷನ್‌ಗೆ ಅವಕಾಶ ಇದೆಯಲ್ಲಾ ಏಕೆ ಹೀಗೆ ಮಾಡುತ್ತಿದ್ದೀರಿ? I can't understand ನೀವು ದಯಮಾಡಿ ಈಲ್ಡ್ ಆಗಬೇಡಿ, ತಾವು ಹೇಳಿ.

ಶ್ರೀ ಸಿದ್ಧರಾಮಯ್ಯ : ಈಲ್ಡ್ ಆಗಿಲ್ಲ ಅಧ್ಯಕ್ಷರೆ, ಅಧ್ಯಕ್ಷರು ಪೇಶನ್ಸ್ ಕಳೆದುಕೊಂಡು ಬಿಟ್ಟರೆ ಕಷ್ಟ ನೀವೇನೂ ಪೇಶನ್ಸ್‌ನ್ನು ಕಳೆದುಕೊಳ್ಳಬೇಡಿ. ತಾವು ಬಹಳ ಸೌಮ್ಯ ಮೂರ್ತಿಯೆಂದು ನಾವು ತಿಳಿದುಕೊಂಡಿದ್ದೆವು. ತಾವು ಹೀಗಾದರೆ ಹೇಗೆ? ಆದ್ದರಿಂದ ನಾನು ಈಲ್ಡ್ ಆಗಲು ಹೋಗುವುದಿಲ್ಲ. ನಾನು ಹೇಳುವುದೇನೆಂದರೆ 241 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ಇನ್ನೂ ಬಾಕಿ ಬರಬೇಕೆಂದು ಜನರಲ್ ಇನ್ಶ್ಯುರೆನ್ಸ್ ಕಂಪನಿಯವರು ಹೇಳಿದರೆ ನಮ್ಮ ಪಾಲು ಎಷ್ಟು ಕೊಡಬೇಕೆಂದು ಹೇಳಿದರೆ ಅದನ್ನು ಕೊಡುತ್ತೇವೆ. ಇನ್ನೇನಾಗಬೇಕು? ಆದ್ದರಿಂದ ಅದರ ಬಗ್ಗೆ ಯಾರೂ ಕೂಡ ಈ ಸರ್ಕಾರದ ಬಗ್ಗೆ ದುಡ್ಡು ಬಿಡುಗಡೆಯಾಗುವುದಿಲ್ಲ ಎಂಬ ಬಗ್ಗೆ ಯಾರೂ ಕೂಡ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಅನಂತರ ಕ್ರಾಪ್ ಲೋನ್ ಮನ್ನಾ ಮಾಡುವ ಬಗ್ಗೆ ಅದಕ್ಕೆ ಕೂಡ 83 ಕೋಟಿ ರೂ. ಇಟ್ಟಿದ್ದೇವೆ, ಏಕೆಂದರೆ ಅಪೆಕ್ಸ್ ಬ್ಯಾಂಕ್ ಮತ್ತು ಕಾಸ್‌ಕಾರ್ಡ್ ಬ್ಯಾಂಕ್ ಈ ಎರಡೂ ಬ್ಯಾಂಕುಗಳಿಗೆ ನಬಾರ್ಡ್‌ನವರು re-finance ಮಾಡುವುದಿಲ್ಲ ಎಂಬ ಕಾರಣಕ್ಕಾಗಿ ಕೂಡಲೇ ಅದನ್ನು ನಾವು ಕೊಡಬೇಕೆಂದು ಸುಮಾರು 83 ಕೋಟಿ ರೂಪಾಯಿಗಳನ್ನು ಇದರಲ್ಲಿ ಇಟ್ಟಿದ್ದೇವೆ.

2.40 ಪಿ ಎಂ

ಅದಕ್ಕೆ ಈ ಸಾರಿ ಕೃಷಿಗೆ, ಒಣ ಭೂಮಿ ಬೇಸಾಯಕ್ಕೆ ಮೊದಲನೇ ಬಾರಿಗೆ 100 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಬಹಳ ಜನ ಒಣ ಭೂಮಿಗೆ ಹೆಚ್ಚು ಹಣ ಬೇಕೆಂದು ಕೇಳಿದ್ದರು....

ಶ್ರೀ ಎಸ್.ಎಸ್. ಪಾಟೀಲ್ : ಬಯಲು ಸೀಮೆಗೆ ನೀವು ಏನೂ ಕೊಟ್ಟಿಲ್ಲ?

ಅಧ್ಯಕ್ಷರು : ಆಡಳಿತ ಪಕ್ಷದವರಾದ ನೀವೇ ಹೀಗೆ ಮಾನ್ಯ ಸಚಿವರ ಉತ್ತರಕ್ಕೆ ಅಡ್ಡಿ ಪಡಿಸಿದರೆ ವಿರೋಧಪಕ್ಷದವರು ಅಡ್ಡಿ ಮಾಡದಿರುತ್ತಾರೇನು?

ಶ್ರೀ ಸಿದ್ಧರಾಮಯ್ಯ : ಪಾಟೀಲರೇ, ಒಣ ಭೂಮಿ ಮತ್ತು ಬಯಲು ಸೀಮೆ ಎಲ್ಲಾ ಒಂದೇ. ಅದಕ್ಕೆ ಈಗ ಒಣ ಭೂಮಿಗೆ ಪ್ರಾಯೋಗಿಕವಾಗಿ ಮೊದಲನೇ ವರ್ಷ 100 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಗೊತ್ತಾಯಿತಲ್ಲಾ? ಮಳೆ ನೀರಿನ ಸಂಗ್ರಹಣೆ ಮಾಡುವುದು, ಭೂಮಿ

ಸಾಂದ್ರತೆ ಹೆಚ್ಚು ಮಾಡುವುದು, ಅದರ ಫಲವತ್ತತೆ ಉಳಿಸಿಕೊಳ್ಳುವುದು, ಜಲವನ್ನು ಉಳಿಸಿಕೊಳ್ಳುವುದು, ವಾಟರ್ ಲೆವೆಲ್ ಹೆಚ್ಚು ಆಗುವುದು, ಹೀಗೆ ಒಣ ಭೂಮಿ ಅಭಿವೃದ್ಧಿಪಡಿಸುವುದಕ್ಕೋಸ್ಕರ 100 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಈ ಮೊತ್ತವನ್ನು ಮುಂದೆ ಇನ್ನೂ ಹೆಚ್ಚು ಮಾಡಬೇಕೆನ್ನುವ ಉದ್ದೇಶ ಕೂಡ ಇದೆ. ಇದನ್ನು ನೋಡಿಕೊಂಡು, ಇದರ evaluation ಮೇಲೆ ನಾವು ಇದರಲ್ಲಿ ಹೆಚ್ಚು ಹಣವನ್ನು ತೊಡಗಿಸಲಿಕ್ಕೆ ಪ್ರಯತ್ನ ಮಾಡಬೇಕೆನ್ನುವುದು ಈ ಸರ್ಕಾರದ ಉದ್ದೇಶ. ಮುಂದಕ್ಕೆ ಅದಕ್ಕೆ ಹೆಚ್ಚು ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. 2003–04ಕ್ಕೆ ಹೋಲಿಕೆ ಮಾಡಿದರೆ ಈ ಸಾರಿ ಕೃಷಿಗೆ ಮೊದಲನೇ ಬಾರಿಗೆ ಪ್ಲಾನ್‌ನಲ್ಲಿ 412 ಕೋಟಿ ರೂ.ಗಳಿಂದ ಈ ಸಾರಿ 840 ಕೋಟಿ ರೂ.ಗಳಿಗೆ ಪ್ಲಾನ್‌ನಲ್ಲಿ ಹೆಚ್ಚು ಮಾಡಿದ್ದೇವೆ. It is a very big jump. 412 ಕೋಟಿ ರೂ.ಗಳಿಂದ ಪ್ಲಾನ್‌ನಲ್ಲಿ 840 ಕೋಟಿ ರೂ.ಗಳಿಗೆ ಏರಿಸಲಾಗಿದೆ, ಅಂದರೆ ಸುಮಾರು 107% growth. ಇದು ಈ ಸರ್ಕಾರಕ್ಕೆ ಕೃಷಿಗೆ, ಗ್ರಾಮೀಣ ಜನರ ಬಗ್ಗೆ, ಹಳ್ಳಿ ಜನರ ಬಗ್ಗೆ ಬದ್ಧತೆ ಇದೆ ಎನ್ನುವುದನ್ನು ತೋರಿಸುವುದಿಲ್ಲವೇ? ಇದು ಬಹಳ ಸ್ಪಷ್ಟವಾಗಿ ತೋರಿಸುತ್ತದೆ. ಈ ಸಮ್ಮಿಶ್ರ ಸರ್ಕಾರಕ್ಕೆ ರೈತರ ಬಗ್ಗೆ ಬದ್ಧತೆ ಇದೆ, ಕಾಳಜಿ ಇದೆ ಎನ್ನತಕ್ಕಂಥದ್ದನ್ನು ಇದು ತೋರಿಸುತ್ತದೆ. ಇದರಲ್ಲೇ ನಮ್ಮ ಪ್ರಮಾಣಿಕತೆ ವ್ಯಕ್ತವಾಗುತ್ತದೆ. ಇದು ನಾವು ಕೃಷಿ ಬಗ್ಗೆ ಮಾಡಿರತಕ್ಕಂಥದ್ದು. ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಜನರಿಗೆ ಒಂದು ಕೆ.ಜಿ.ಗೆ 3 ರೂ.ಗಳಂತೆ ಅಕ್ಕಿಯನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಅದರಲ್ಲಿ 78 ಲಕ್ಷ ಹಳದಿ ಕಾರ್ಡ್‌ಗಳಿವೆ. 7 ಲಕ್ಷ ಕಾರ್ಡ್‌ಗಳಿಗೆ ಅಂತ್ಯೋದಯ ಕಾರ್ಯಕ್ರಮದಿಂದ ದುಡ್ಡು ಬರುತ್ತದೆ. ಇನ್ನುಳಿದ 71 ಲಕ್ಷ ಕಾರ್ಡ್‌ಗಳಲ್ಲಿ ineligible cards ಕೂಡ ಇವೆ, ಅದನ್ನು ತೆಗೆಯಬೇಕೆಂದು ಮಾಡಿದ್ದೇವೆ, ಆಗಸ್ಟ್ 31ರೊಳಗೆ ಯಾರ್‍ಯಾರು ineligible ಇದ್ದಾರೋ, ಅನರ್ಹರೋ ಇದ್ದಾರೋ, ಅರ್ಹರನ್ನು ಬಿಟ್ಟು ಬೇರೆಯವರು ಯಾರ್‍ಯಾರು ಇದ್ದಾರೋ, ಅವರನ್ನು eliminate ಮಾಡತಕ್ಕಂಥದ್ದರ ಬಗ್ಗೆ ಕೂಡ ನಾನು ಈಗಾಗಲೇ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ. ಹಿಂದೆ ನಾವು ಒಂದು ಕೆ.ಜಿ.ಗೆ 3.40 ರೂ.ಗಳಂತೆ ಕೊಟ್ಟಿದ್ದೆವು, ಈಗ ಅರ್ಹರ್‍ಯಾರು ಇದ್ದಾರೋ ಅವರಿಗೆ ಅದಕ್ಕಿಂತ ಕಡಿಮೆ ರೇಟಿಗೆ ಅಂದರೆ ಒಂದು ಕೆ.ಜಿ.ಗೆ 3.00 ರೂ.ಗಳಿಗೆ ಇದೇ ಮೊದಲನೇ ಬಾರಿಗೆ 20 ಕೆ.ಜಿ. ಅಕ್ಕಿಯನ್ನು ಒಂದು ಕಾರ್ಡ್‌ಗೆ, ಯಾರು ಬಡತನ ರೇಖೆಗಿಂತ ಕೆಳಗಡೆ ಇದ್ದಾರೋ ಅವರಿಗೆ ಕೊಡುತ್ತಿದ್ದೇವೆ. ಸುಮಾರು 24 ಲಕ್ಷ ಕಾರ್ಡ್‌ಗಳಿಗೆ ಮಾತ್ರ ಕೇಂದ್ರ ಸರ್ಕಾರದಿಂದ ಬಡತನ ರೇಖೆಗಿಂತ ಕೆಳಗಡೆ ಇದ್ದಾರೆಂದು ಕೆ.ಜಿ.ಗೆ 5 ರೂ. 65 ಪೈಸೆಯಂತೆ ಅಕ್ಕಿ ಬರುತ್ತದೆ. ಇಲ್ಲಿ ಅದರ ಮೇಲೆ 50 ಪೈಸೆ ಜಾಸ್ತಿಯಾಗುತ್ತದೆ. ಇದು ಸೇರಿ ಅದು ಒಟ್ಟು 6 ರೂ. 15 ಪೈಸೆ ಆಗುತ್ತದೆ. ಈ 24 ಲಕ್ಷ ಕಾರ್ಡ್‌ಗಳಿಗೆ 3 ರೂ. 15 ಪೈಸೆ ಕಡಿಮೆಯಾಗುತ್ತದೆ. ಇನ್ನುಳಿದ 47 ಲಕ್ಷ ಕಾರ್ಡ್‌ಗಳಿಗೆ issue price is Rs. 8.30 Paise. ನಾವು ಅದನ್ನು ಇಲ್ಲಿ 3 ರೂ.ಗಳಿಗೆ ಮಾರಾಟ ಮಾಡುವುದರಿಂದ 5 ರೂ. 30 ಪೈಸೆ ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ. ಒಂದು ಕಡೆ 3 ರೂ. 15 ಪೈಸೆ 24 ಲಕ್ಷ ಕಾರ್ಡ್‌ಗಳಿಗೆ, ಇನ್ನು 47 ಲಕ್ಷ ಕಾರ್ಡ್‌ಗಳಿಗೆ 5 ರೂ. 30 ಪೈಸೆ, ಒಟ್ಟು ಈ ಎಂಟು ತಿಂಗಳಿಗೆ 300 ಕೋಟಿ ರೂ.ಗಳು ಆಗಬಹುದು ಎಂದು ನಾವು ಅಂದಾಜು ಮಾಡಿದ್ದೇವೆ, ಇದು ಇನ್ನೂ ಜಾಸ್ತಿಯಾಗುವ ಸಾಧ್ಯತೆ ಇದೆ. ನಾವು eligible ಇರುವವರನ್ನು ಮಾತ್ರ ಇಟ್ಟುಕೊಂಡು, ಉಳಿದವರನ್ನು eliminate ಮಾಡಿದಾಗ ಎಷ್ಟು ಕಾರ್ಡ್‌ಗಳು ಬರುತ್ತವೋ ಎಂಬುದನ್ನು ನೋಡಬೇಕು. ಇದಕ್ಕೆ ಈ ಎಂಟು ತಿಂಗಳಿಗೆ 300 ಕೋಟಿ ರೂ.ಗಳು ಖರ್ಚಾಗುತ್ತದೆ ಎಂದು

ಅಂದಾಜಿಸಿ ಅದನ್ನು ನಾವು ಈ ಬಜೆಟಿನಲ್ಲಿ ತೆಗೆದಿರಿಸಿದ್ದೇವೆ. ಇದು ಬಡತನ ರೇಖೆಯಿಂದ ಕೆಳಗಡೆ ಇರತಕ್ಕಂಥ ಜನರಿಗೆ, ಯಾರಿಗೆ ಕೊಂಡುಕೊಳ್ಳಲಿಕ್ಕೆ ಶಕ್ತಿಯಿಲ್ಲವೋ, ಅಂತಹವರಿಗೆ ಅನುಕೂಲವಾಗುತ್ತದೆ. ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಸದನದಲ್ಲಿಲ್ಲ ಮತ್ತು ಮಾನ್ಯ ಅಂಜನೇಯರವರೂ ಸಹ ಸದನದಲ್ಲಿಲ್ಲ. ಬಹುಶಃ ಅವರು ಹೊರಗಡೆ ಹೋಗಿರಬೇಕು. ಅವರೆಲ್ಲಾ SC/ST ಗಳಿಗೆಲ್ಲಾ ಬಜೆಟ್‌ನಲ್ಲಿ ದುಡ್ಡು ಕಡಿಮೆ ಇಟ್ಟಿದ್ದಾರೆಂದು ಹೇಳುತ್ತಿದ್ದರು. ಇದೂ ಕೂಡ ಅಲ್ಲಿಗೇ ಸೇರುತ್ತದೆ. ಬರೀ SC/STಗೆ ಎಂದಲ್ಲ, ಎಲ್ಲಾ ಬಡವರಿಗೂ ಇದು ಸೇರುತ್ತದೆ. ಇದರಲ್ಲಿ ಎಲ್ಲಾ ಬಡವರೂ ಸೇರುತ್ತಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಗ್ರಾಮೀಣಾಭಿವೃದ್ಧಿಗೆ ನೀವು 2% ಮಾತ್ರ ಇಟ್ಟಿರುವುದು ಎಂದು ಹೇಳಿದರು. ಕುಡಿಯುವ ನೀರು ಮತ್ತು ನೀರಾವರಿಗಾಗಿ ಮಾಡುವ ಖರ್ಚು ಗ್ರಾಮೀಣಾಭಿವೃದ್ಧಿಗೆ ಬರುವುದಿಲ್ಲವೇ? ಸಣ್ಣ ನೀರಾವರಿಗೆ ಮಾಡುವ ವೆಚ್ಚ ಗ್ರಾಮೀಣಾಭಿವೃದ್ಧಿಗೆ ಬರುವುದಿಲ್ಲವೇ? ಕೆ.ಜಿ.ಗೆ 3 ರೂ. ನಂತೆ ಅಕ್ಕಿ ಕೊಡುವುದೂ ಸಹ ಗ್ರಾಮೀಣಾಭಿವೃದ್ಧಿಗೆ ಬರುವುದಿಲ್ಲವೇ? Educationಗೆ ಕೊಡುವಂತಾದ್ದು ಗ್ರಾಮೀಣಾಭಿವೃದ್ಧಿಗೆ ಬರುವುದಿಲ್ಲವೇ? Agricultureಗೆ ಕೊಡುವುದು ಗ್ರಾಮೀಣಾಭಿವೃದ್ಧಿಗೆ ಬರುವುದಿಲ್ಲವೇ? ಇವೆಲ್ಲವನ್ನೂ ಸೇರಿಸಿ ನಾವು ಅಲ್ಲಿ ನಮೂದಿಸಿಲ್ಲ. Techinicial ಆಗಿ ಎಷ್ಟು ನೇರವಾಗಿ ಇಲಾಖೆಗೆ ಹೋಗುತ್ತದೆ ಎಂಬುದನ್ನು ಅಲ್ಲಿ ತೋರಿಸಿದ್ದೇವೆ. ನೇರವಾಗಿ ಇಲಾಖೆಗೆ ಹೋಗುವುದು ಬೇರೆ, ಅಪರೋಕ್ಷವಾಗಿ ಹೋಗುವುದು ಬೇರೆ. ಅಪರೋಕ್ಷವಾಗಿ ಗ್ರಾಮೀಣಾಭಿವೃದ್ಧಿಗೆ ಹೋಗತಕ್ಕಂಥದ್ದು ಹೋಗುತ್ತದೆ. ಅದರಲ್ಲಿ ಇದೆಲ್ಲವೂ ಕೂಡ ಸೇರಿಕೊಂಡಿರುತ್ತದೆ. 3 ರೂ.ಗೆ ಅಕ್ಕಿ ಕೊಡತಕ್ಕಂಥದ್ದು ಇನ್ನೊಂದು ಕಾರ್ಯಕ್ರಮ. Common Minimum Programmeನಲ್ಲಿ ಮಧ್ಯಾಹ್ನದ ಊಟದ ಬಗ್ಗೆ ನಾವು ಹೇಳಿದ್ದೇವೆ. ಮಧ್ಯಾಹ್ನದ ಊಟವನ್ನು SSLCವರೆಗೆ ವಿಸ್ತರಣೆ ಮಾಡಬೇಕು ಅನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಇಲ್ಲಿಯವರೆಗೆ 5ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳಿಗೆ ಬಿಸಿಯೂಟ ಕೊಡತಕ್ಕಂಥದ್ದು ಇತ್ತು. ಈಗ ಅದನ್ನು ಈ ವರ್ಷಕ್ಕೆ ಅಂದರೆ, ಇನ್ನು ಎಂಟು ತಿಂಗಳ ಅವಧಿಯವರೆಗೆ, ಈ ಶೈಕ್ಷಣಿಕ ವರ್ಷದಲ್ಲಿ, ಒಂದು 5ನೇ ತರಗತಿಯಿಂದ 7ನೇ ತರಗತಿಯವರೆಗೆ ವಿಸ್ತರಣೆ ಮಾಡುವುದು, 7ನೇ ತರಗತಿಯವರೆಗೆ ಓದತಕ್ಕಂಥ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳುವುದು, ಇನ್ನೊಂದು, ಸರ್ಕಾರದಿಂದ ಅನುದಾನ ಪಡೆಯತಕ್ಕಂಥ institutionsಗಳೇನಿವೆ, ಅದಕ್ಕೆ ಈ ಕಾರ್ಯಕ್ರಮ ಇರಲಿಲ್ಲ, ಅಲ್ಲಿ ಓದತಕ್ಕಂಥ ಮಕ್ಕಳನ್ನೂ ಕೂಡ ಸೇರಿಸಬೇಕು ಎಂದು ಯೋಜಿಸಿ, ಈಗ ಅಲ್ಲಿರತಕ್ಕಂಥ ಮಕ್ಕಳಿಗೂ ಕೂಡ ವಿಸ್ತರಣೆ ಮಾಡಿದೆ. ಒಟ್ಟು ಈ ವರ್ಷ ಈಗಾಗಲೇ ಇದ್ದಂತಹ ವಿದ್ಯಾರ್ಥಿಗಳ ಸಂಖ್ಯೆಗೆ 25 ಲಕ್ಷ ಹೊಸ ಮಕ್ಕಳಿಗೆ ಬಿಸಿಯೂಟ ಒದಗಿಸುವ ಕಾರ್ಯಕ್ರಮ ಈ ವರ್ಷದಿಂದ ಜಾರಿಗೆ ಬರುತ್ತಿದೆ. ಮುಂದಿನ 3–4 ವರ್ಷಗಳಲ್ಲಿ ಇದನ್ನು 10ನೇ ತರಗತಿಯವರೆಗೂ ಕೂಡ ವಿಸ್ತರಣೆ ಮಾಡಬೇಕು ಅನ್ನತಕ್ಕಂಥ ಉದ್ದೇಶ, ಮಕ್ಕಳು drop-out ಆಗಬಾರದೆಂಬುದೇ ಆಗಿದೆ. ಮಕ್ಕಳು ವಿದ್ಯಾಭ್ಯಾಸದಿಂದ drop-out ಆಗಬಾರದು. ಅದರಲ್ಲಿ ಕೆಲವು ಮಕ್ಕಳಿಗೆ ಊಟ ಬೇಕಾಗದಿರಬಹುದು, It is a different thing. ಊಟ ಬೇಕಾಗಿರುವವರು, ಬೇಕಾಗದಿರುವವರು ಎಂದು differentiate ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸುಮಾರು 25 ಲಕ್ಷ ಹೊಸ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಇದು ಅನ್ವಯವಾಗುತ್ತದೆ. ಇದರಿಂದ drop-out ಕಡಮೆಯಾಗುತ್ತದೆ, ನಮ್ಮ literacy

percentage ಹೆಚ್ಚಾಗುತ್ತದೆ, hygienic conditions, health ಕೂಡ improve ಆಗುತ್ತದೆ ಪೌಷ್ಟಿಕ ಆಹಾರ ಅಂದರೆ, nutritious food ಸಿಗುವುದರಿಂದ ಮಕ್ಕಳ ಆರೋಗ್ಯ ಚೆನ್ನಾಗಿರುತ್ತದೆ ಮತ್ತು ಇದರಿಂದಾಗಿ ಇತರ ಎಲ್ಲಾ ಪರಿಣಾಮಗಳೂ ಕೂಡ ಆಗುತ್ತದೆ. ಆ ದೃಷ್ಟಿಯಿಂದ ಈ ಸಾರಿ ಈ ಕಾರ್ಯಕ್ರಮವನ್ನು ಇಲ್ಲಿಗೆ ವಿಸ್ತರಣೆ ಮಾಡಿದ್ದೇವೆ. ಮುಂದಿನ ವರ್ಷ ಅದನ್ನು SSLCವರೆಗೂ ಕೂಡ ವಿಸ್ತರಿಸುತ್ತೇವೆ. 500 ರೂ. ನಿರುದ್ಯೋಗಿ ಭತ್ಯೆ ಕೊಡಬೇಕೆಂಬ ವಿಚಾರದ ಬಗ್ಗೆ ಅನೇಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಜನರು ಅಧಿಕಾರ ನಡೆಸಲು ನಮಗೂ mandate ಕೊಡಲಿಲ್ಲ, ಅವರಿಗೂ mandate ಕೊಡಲಿಲ್ಲ ನಿಮಗೂ mandate ಕೊಡಲಿಲ್ಲ.

ಶ್ರೀ ಆರ್. ಅಶೋಕ್ : ನಮಗೆ ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಿಮಗೆ ಕೊಟ್ಟಿದ್ದಾರಾ? ಎಲ್ಲಿ ಕೊಟ್ಟಿದ್ದಾರೆ? ಹಾಗಿದ್ದರೆ ನೀವು ಸರ್ಕಾರ ರಚಿಸಬಹುದಾಗಿತ್ತಲ್ಲವೇ? ಅದೇಕೆ ಅಲ್ಲಿ ಹೋಗಿ ಕುಳಿತುಕೊಂಡಿರಿ? ನೀವು ಇಲ್ಲೇ ಬಂದು ಕುಳಿತುಕೊಳ್ಳಬಹುದಾಗಿತ್ತಲ್ಲವೇ? ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾವು ಅದನ್ನು ಬೇರೆ ರೂಪದಲ್ಲಿ ಆ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಗ್ರಾಮೀಣ ಪ್ರದೇಶ ಮತ್ತು urbanನಲ್ಲಿ ಇರತಕ್ಕಂಥ ಉದ್ಯೋಗ ಇಲ್ಲದಿರುವಂತಹ, ನಿರುದ್ಯೋಗಿ ಯುವಕರು ಮತ್ತು ಯುವತಿಯರು ಯಾರು ಇರುತ್ತಾರೋ, ಅವರಿಗೆಲ್ಲರಿಗೂ ITI ತರಹದ ಒಂದು ರೀತಿಯ ತಾಂತ್ರಿಕ training ಕೊಡಬೇಕು, ಆ training ಅನ್ನು ಅವರಿಗೆ ಕೊಟ್ಟು ಸ್ವಂತ ಶಕ್ತಿ ಮೇಲೆ, ಸ್ವಯಂ-ಉದ್ಯೋಗ ಮಾಡಿಕೊಳ್ಳಲಿಕ್ಕೆ ಅವರಿಗೆ ಶಕ್ತಿ ಬರಬೇಕು, ಆ ಶಕ್ತಿಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. Mainfestoನಲ್ಲಿ ಅವರು ಹೇಳಿರುವುದು, ನಾವು ಹೇಳಿರುವುದು, ಇವುಗಳನ್ನೆಲ್ಲಾ ನಾವು ಮಾಡುತ್ತೇವೆ ಎಂದು ನಮ್ಮ Common Minimum Programmeನಲ್ಲಿ ನಾವು ಹೇಳಿಲ್ಲ ಒಂದು ಪಕ್ಷಕ್ಕಿಂತ ಹೆಚ್ಚಾಗಿ ಸೇರಿ ಸರ್ಕಾರ ರಚಿಸಿಕೊಂಡಿರುವಂತಹ ಯಾವ ಸರ್ಕಾರವೂ ಕೂಡ ದೇಶದಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ, ಮಾಡಿಯೂ ಕೂಡ ಇಲ್ಲ. ಹಾಗೆಂದು ನಾವೇನೂ ಮಾಡುವುದೇ ಇಲ್ಲವೆಂದು ಹೇಳಿ, ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಅದೇ ರೀತಿ ಮೊದಲನೇ ವರ್ಷವೇ ಎಲ್ಲವನ್ನೂ ಜಾರಿ ಮಾಡಬೇಕೆಂದೇನೂ ಇಲ್ಲ. ಆದ್ದರಿಂದ, ಆ ಟೀಕೆಯ ಮಾತೇನು ಇದೆ. ಅದಕ್ಕೆ ಈ ಉತ್ತರವನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಹಣ ಕಡಿಮೆ ಮಾಡಲಾಗಿದೆ ಎಂದು ಅನೇಕರು ಹೇಳಿದರು. ನಾವು ಕಡಿಮೆ ಏನೂ ಮಾಡಿಲ್ಲ. ಹೋದ ವರ್ಷಕ್ಕಿಂತ ಸ್ವಲ್ಪ ಜಾಸ್ತಿ ಮಾಡಿದ್ದೇವೆ.

ಇನ್ನೂ ಹೆಚ್ಚು ಮಾಡುವುದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಆಂಜನೇಯ ಅವರೆಲ್ಲಾ ಹೆಚ್ಚಿಗೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಆಂಜನೇಯ ಮತ್ತು ಬೇರೆ ಮಾನ್ಯ ಸದಸ್ಯರು ಏನು ಗುರುತು ಮಾಡಿ ಹೇಳಿದ್ದಾರೆ, ಹಾಗೂ ವಿರೋಧಪಕ್ಷದ ಉಪ ನಾಯಕರಾದ ಮಾನ್ಯ ಕಾಜೋರ್ಳರವರೂ ಕೂಡ ಏನು ಹೇಳಿದ್ದಾರೆಂದರೆ, ಫೂಲ್ಡ್ ಫಂಡ್ ಬರೀ 37 ಕೋಟಿ ರೂ. ಎಂದು ಹೇಳಿದ್ದೀರಿ, ಅದು 100 ಕೋಟಿ ರೂ. ಗಿಂತ ಹೆಚ್ಚಿಗೆ ಆಗುತ್ತದೆ. ಇನ್ನೂ ಎಲ್ಲವೂ ಪೂಲ್ ಮಾಡಿಲ್ಲ. ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅವರು ಎಷ್ಟು ಪೂಲ್ ಮಾಡುವುದಕ್ಕೆ ಸಾಧ್ಯ ಇದೆ ಅಷ್ಟನ್ನು ಪೂಲ್ ಮಾಡಿ ಇಟ್ಟಿದ್ದಾರೆ. ಈ

ವರ್ಷಕ್ಕೆ ಎಷ್ಟು ಆಗುತ್ತದೆ ಎಂದು ಪೂಲ್ ಮಾಡುವಾಗ 100 ಕೋಟಿ ರೂ. ಗಿಂತ ಹೆಚ್ಚಿಗೆ ಆಗುತ್ತದೆ. ಯಾವುದೇ ಕಾರಣಕ್ಕೆ ಕಳೆದ ವರ್ಷಕ್ಕಿಂತ ಕಡಿಮೆಯಾಗುವುದಿಲ್ಲವೆಂದು ನಾನು ನಿಮಗೆ ತಿಳಿಸುತ್ತೇನೆ. ಅದನ್ನೇ ಸರಿ ಎಂದು ಹೇಳುವ ಅಗತ್ಯವಿಲ್ಲ. ಇವೆಲ್ಲಾ ಆದ ಮೇಲೆ ಪೂಲ್ ಮಾಡಬೇಕಾಗುತ್ತದೆ. ಪೂಲ್ಡ್ ಫಂಡ್‌ನ್ನು ಒಂದು ಪ್ರಾಧಿಕಾರ ಅಥವಾ ಒಂದು ಕಮಿಟಿ ಮಾಡಿ ಅರ್ಥ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲರೂ ಒಟ್ಟಿಗೆ ಕೂತು ಮಾಡಬೇಕೆಂದು ಇದೆ. ನಿಮ್ಮ ಜೊತೆ ಕೂತು ಏನು ಮಾಡಬೇಕೆಂದು ಚರ್ಚೆ ಮಾಡಿ ಅದನ್ನು ಪರಿಶೀಲನೆ ಮಾಡುತ್ತೇವೆ. ಮಹಾರಾಷ್ಟ್ರದಲ್ಲಿ ಮಾಡಿದ್ದಾರೆಂದು ಹೇಳುತ್ತೀರಿ, ಅಲ್ಲಿಂದ ಮಾಹಿತಿ ತರಿಸಿಕೊಂಡು ಯಾವ ತರಹ ಮಾಡಿದ್ದಾರೆಂದು ನೋಡಿ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನೊಂದು ಮಾತನ್ನು ಮಾನ್ಯ ಆಂಜನೇಯರವರು ಬಹಳ ನೊಂದುಕೊಂಡು ಹೇಳಿದರು. ಒಬಿಸಿಗೆ ಕೂಡ ಹಿಂದಿನ ಸರ್ಕಾರದವರು ಹೊಸದಾಗಿ ಒಂದು ಕಾರ್ಯಕ್ರಮವನ್ನು ಮಾನ್ಯ ಎಸ್.ಎಂ ಕೃಷ್ಣರವರು ಇರುವಾಗ 10 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ಶ್ರಮ ಶಕ್ತಿ ಎಂದು ಮಾಡಿದ್ದರು. ಅದು 10 ಕೋಟಿ ರೂ. ಇತ್ತು, ಈಗ ಅದನ್ನು 20 ಕೋಟಿ ರೂ. ಗೆ ಹೆಚ್ಚಿಗೆ ಮಾಡಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಯಾರ್‍ಯಾರು ಅವರ ಕುಲಕಸುಬುಗಳನ್ನು ಮಾಡಿಕೊಂಡು ಬಂದಿದ್ದಾರೆ ಅದು ಉಳಿಯಬೇಕು ಮತ್ತು ಬೆಳೆಯಬೇಕು. ಮತ್ತು ಅವರಿಗೆ ಜೀವನ ಆಗಬೇಕು ಮತ್ತು ಮಾರುಕಟ್ಟೆ ಸಿಗಬೇಕು. ಈ ಎಲ್ಲಾ ಕಾರಣಗಳಿಗೋಸ್ಕರವಾಗಿ ಅವರಿಗೆ ಶ್ರಮ ಶಕ್ತಿ ಎನ್ನುವ ಕಾರ್ಯಕ್ರಮ ಇದೆ, ಅದಕ್ಕೆ ಇನ್ನು 10 ಕೋಟಿ ರೂಪಾಯಿಗಳನ್ನು ಕೊಡುವ ಕಾರ್ಯಕ್ರಮವನ್ನು ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಿದ್ಧರಾಮಯ್ಯನವರೇ, ರೆಕಾರ್ಡ್ ಸರಿ ಇರಲಿ ಎಂದು ಹೇಳುತ್ತಿದ್ದೇನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಿಂದಿನ ವರ್ಷ 247 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ವರ್ಷ 168 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ : ರಿಲೀಸ್ ಮಾಡಿದ್ದು ಲೆಕ್ಕ ಅಲ್ಲ, ಖರ್ಚು ಎಷ್ಟಾಗಿದೆ ಎನ್ನುವುದು ಯಾವಾಗಲೂ ಲೆಕ್ಕ ನೋಡುವುದು.

ಶ್ರೀ ಅರಗ ಜ್ಞಾನೇಂದ್ರ : ಪರಿಷ್ಕೃತ ಅಂದಾಜು ಇದು. ಇದು ತಪ್ಪು ಎಂದು ಹೇಳಿದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಸಿದ್ಧರಾಮಯ್ಯ : 565 ಕೋಟಿ ರೂ. ಹಣ ಇದೆ. ಬೇರೆ ಬೇರೆ ಕಡೆ ಎಲ್ಲಾ ಇದೆ, ಅದನ್ನೆಲ್ಲಾ ಲೆಕ್ಕ ಹಾಕಿ ಹೇಳಬೇಕು. ಪ್ಲ್ಯಾನ್ ಬೇರೆ ಇರುತ್ತದೆ, ನಾನ್ ಪ್ಲ್ಯಾನ್ ಬೇರೆ ಇರುತ್ತದೆ. ಹೋದ ಸಾರಿ 535 ಕೋಟಿ ರೂ. ಖರ್ಚಾಗಿತ್ತು, 565 ಕೋಟಿ ರೂಪಾಯಿ ಹೆಚ್ಚಿಗೆ ಖರ್ಚಾಗಿದೆ. ಕಡಿಮೆಯಾಗಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಇನ್ನೂ ಹೆಚ್ಚಿಗೆ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಪೂಲ್ಡ್ ಅಮೌಂಟ್ ಜೊತೆಗೆ 13 ಕೋಟಿ ರೂಪಾಯಿ ಗಂಗಾ ಕಲ್ಯಾಣ ಕಾರ್ಯಕ್ರಮಕ್ಕೆ ಅಡಿಷನಲ್ಲಾಗಿ ಇಟ್ಟುಕೊಂಡಿದ್ದೇವೆ. In addition to pooled amount ಅದಕ್ಕೆ ಕೂಡ 13 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಮಾಡತಕ್ಕಂಥದ್ದು ಮಾಡಿದ್ದೇವೆ. ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ ಈ ಸರ್ಕಾರ ಹಣ ಕಡಿಮೆ ಮಾಡಿದೆ ಎನ್ನತಕ್ಕಂತಹ ಮಾತುಗಳು ಏನಿವೆ, ಅದರಲ್ಲಿ ಹುರುಳಿಲ್ಲ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರಾದ ಆಂಜನೇಯರವರು ಬಹಳ ನೊಂದುಕೊಂಡು ಹೇಳಿದರು.

ಬಳ್ಳಾರಿಯಲ್ಲಿ ಪೈಪ್‌ನಲ್ಲಿ ಕೆಲಸ ಮಾಡುವಾಗ ಮೂರು ಜನ ಸತ್ತು ಹೋಗಿದ್ದಾರೆಂದು ಹೇಳಿದರು. ನಾನು ಅದರ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ಬಳ್ಳಾರಿ ಜಿಲ್ಲೆಯವರೇ ಆದ ನಮ್ಮ ಕಂದಾಯ ಮಂತ್ರಿಗಳಾದ ಪ್ರಕಾಶ್‌ರವರಿಗೆ ಕೂಡ ಹೇಳಿದ್ದೇನೆ, ವರದಿ ತರಿಸಿಕೊಂಡು ಅವರಿಗೆ ಪರಿಹಾರ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಎರಡನೆಯದು ಅವರು ಕಾಂಟ್ರ್ಯಾಕ್ಟ್ ಬೇಸಿಸ್ ಎಂಪ್ಲಾಯಿಯೋ ಅಥವಾ ಪರ್ಮನೆಂಟ್ ಎಂಪ್ಲಾಯಿ ಎಂದು ನೋಡಿಕೊಂಡು ಪರ್ಮನೆಂಟ್ ಎಂಪ್ಲಾಯಿ ಆದರೆ ಅವರ ವಾರಸುದಾರರಿಗೆ ನಾವು ಅನುಕಂಪದ ಆಧಾರದ ಮೇಲೆ ಕೆಲಸ ಕೊಡುತ್ತೇವೆ. ಇಲ್ಲದೆ ಇದ್ದರೆ ಅವರು ಕಾಂಟ್ರ್ಯಾಕ್ಟ್ ಮೇಲೆ ಇದ್ದರೆ, ಕಾಂಟ್ರ್ಯಾಕ್ಟ್ ಮೇಲೆ ಮತ್ತೆ ಅವರಿಗೆ ಕೆಲಸ ಕೊಡಿ ಎನ್ನುವ ಸೂಚನೆ ಕೊಡುತ್ತೇನೆ. ಏಕೆಂದರೆ ಕಾನೂನು ಅಡ್ಡ ಬರುತ್ತದೆ. ನಾವು ಈಗ ಏನು ಯೋಚನೆ ಮಾಡುತ್ತಿದ್ದೇವೆ, 30 ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ನಾವು ಈ ಸಾರಿ ಘೋಷಣೆ ಮಾಡಿದ್ದೇವೆ. 10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ. 10 ಹಿಂದುಳಿದ ಜಾತಿಯವರಿಗೆ, ಐದು ಮೈನಾರಿಟೀಸ್‌ಗೆ, ಐದು ಆದಿವಾಸಿಗಳಿಗೆ, ಮಾನ್ಯ ರಾಜೇಂದ್ರನ್‌ರವರು ಮೈನಾರಿಟೀಸ್‌ಗೆ ಏನೂ ಇಟ್ಟಿಲ್ಲವೆಂದು ರಾಜೇಂದ್ರನ್‌ರವರು ಹೇಳಿದರು.

ಶ್ರೀ ಎಸ್. ರಾಜೇಂದ್ರನ್ : ಮೈನಾರಿಟಿ ಕ್ರಿಶ್ಚಿಯನ್ಸ್‌ಗೆ ಏನೂ ಇಟ್ಟಿಲ್ಲ. ಮೈನಾರಿಟಿಯವರಿಗೆ ವಕ್ಫ್ ಬೋರ್ಡ್, ಹಜ್ ಸಮಿತಿ ಇದೆ, ಇವರಿಗೆ ಇಲ್ಲವೇ.

Sri Siddaramaiah : Christians are also coming under minority. ಯಾರ್‍ಯಾರು ಇದರಲ್ಲಿ ಬರುತ್ತಾರೆ, ಅವರೆಲ್ಲಾ ಮೈನಾರಿಟಿಯಲ್ಲಿ ಬರುತ್ತಾರೆ. ಮೈನಾರಿಟೀಸ್‌ಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಡೈರೆಕ್ಟರೇಟ್ ಇತ್ತು. ಈಗ ಮೊದಲನೇ ಬಾರಿಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಬ್ಬರು ಪ್ರಧಾನ ಕಾರ್ಯದರ್ಶಿ ಇದ್ದಾರೆ, ಅದರ ಕೆಳಗಡೆ ಒಬ್ಬ ಸೆಕ್ರೆಟರಿ ಇದ್ದಾರೆ. ಈ ಮೈನಾರಿಟಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳನ್ನೇ ಮಾನಿಟರ್ ಮಾಡಲಿಕ್ಕೆ ಒಬ್ಬ ಸೆಕ್ರೆಟರಿ ಪೋಸ್ಟನ್ನು ಕ್ರಿಯೇಟ್ ಮಾಡುತ್ತಿದ್ದೇವೆ. ಬಹಳ ದಿವಸಗಳಿಂದ ಮೈನಾರಿಟೀಸ್ ಇದಕ್ಕೆ ಡಿಮಾಂಡ್ ಮಾಡುತ್ತಿದ್ದರು. ಮೈನಾರಿಟೀಸ್‌ಗೆ 9 ರೆಸಿಡೆನ್‌ಷಿಯಲ್ ಸ್ಕೂಲ್‌ಗಳಿದ್ದವು, ಈಗ ಅಡಿಷನಲ್ಲಾಗಿ ಐದು ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಕೊಡುತ್ತಿದ್ದೇವೆ. ಪ್ರತಿ ಜಿಲ್ಲೆಗೊಂದರಂತೆ ಮೈನಾರಿಟಿ ಸ್ಕೂಲ್ ಇರಬೇಕೆನ್ನುವುದು ಈ ಸರ್ಕಾರದ ಉದ್ದೇಶ. ನಾವು ಈ ದಿಕ್ಕಿನಲ್ಲಿ ಈಗ ಐದು ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ತೆಗೆಯುತ್ತಿದ್ದೇವೆ. ಟ್ರೈಬಲ್ ಪೀಪಲ್ ಕಾಡಿನಲ್ಲಿ ವಾಸ ಮಾಡತಕ್ಕಂತಹ ಜನ, ಆದಿವಾಸಿಗಳು, ಬುಡಕಟ್ಟು ಜನ, ಕಾಡು ಕುರುಬರು, ಜೇನು ಕುರುಬರು, ಹಕ್ಕಿಪಿಕ್ಕಿಯವರು, ಸೋಲಿಗರು, ಆ ವರ್ಗದ ಜನರಿಗೆ ಕೂಡ ವಿಶೇಷವಾಗಿ ಐದು ರೆಸಿಡೆನ್‌ಷಿಯಲ್ ಶಾಲೆಗಳನ್ನು ತೆಗೆಯಬೇಕೆಂದು ಮಾಡಿದ್ದೇವೆ, ಹೀಗೆ ಕೆಳ ವರ್ಗದ ಮಕ್ಕಳು ಯಾರಿಗೆ ಉತ್ತಮವಾದ ವಿದ್ಯೆಯನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ ಆರ್ಥಿಕ ದುರ್ಬಲರಿದ್ದಾರೆ, ಅಶಕ್ತರಾಗಿದ್ದಾರೆ, ಅವರಿಗೂ ಕೂಡ ಒಳ್ಳೆಯ ಗುಣಮಟ್ಟದ ವಿದ್ಯೆ ಸಿಗಬೇಕೆನ್ನುವ ಕಾರಣಕ್ಕೋಸ್ಕರ ನಾವು ಈ ರೆಸಿಡೆನ್‌ಷಿಯಲ್ ಶಾಲೆಗಳನ್ನು ತೆಗೆಯುತ್ತಿದ್ದೇವೆ. ಐದನೇ ತರಗತಿಯಿಂದ 10ನೇ ತರಗತಿಯವರಿಗೆ ಎಲ್ಲಾ ಖರ್ಚನ್ನೂ ಕೂಡ ಸರ್ಕಾರವೇ ಭರಿಸತಕ್ಕಂಥದ್ದು ಮತ್ತು ಉತ್ತಮ ಗುಣಮಟ್ಟದ ವಿದ್ಯೆಯನ್ನು ಕೊಡತಕ್ಕಂಥದ್ದು ಈ ಮಕ್ಕಳಿಗೂ ಸಿಗಬೇಕು. ಯಾರೋ ದುಡ್ಡು ಇರುವ ಕೆಲವರಿಗೆ ಉತ್ತಮ ಗುಣಮಟ್ಟದ ವಿದ್ಯೆ ಸಿಗುವುದಿಲ್ಲ, ಇದನ್ನೇ ಸೋಷಿಯಲ್ ಜಸ್ಟೀಸ್ ಎಂದು ಹೇಳುವುದು.

ಸೋಷಿಯಲ್ ಜಸ್ಟೀಸ್ ಬಗ್ಗೆ ಹೇಳುತ್ತಿದ್ದಿರಿ, ಏನೂ ಮಾಡಿಲ್ಲವೆಂದು ಹೇಳುತ್ತಿದ್ದೀರಿ, ಕಾರಜೋಳ್‌ರವರೇ, ಇದಕ್ಕೆ ಏನಂತ ಕರೆಯಬೇಕು? ಇದನ್ನೇ ಸೋಷಿಯಲ್ ಜಸ್ಟೀಸ್ ಎಂದು ಹೇಳುವುದು. ಈ ಕೆಳ ವರ್ಗದ ಜನರಿಗೆ ಈ ವಿಶೇಷ ಸವಲತ್ತುಗಳನ್ನು ಕೊಟ್ಟು, ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ಕೊಡುವುದೇ ಸೋಷಿಯಲ್ ಜಸ್ಟೀಸ್. ಇದನ್ನೂ ಕೂಡ ಮಾಡತಕ್ಕಂತಹ ಕೆಲಸವನ್ನು ನಾವು ಮಾಡಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕಾರಜೋಳ್‌ರವರು ಇನ್ನೊಂದು ಮಾತನ್ನು ಹೇಳಿದರು, ದೇವದಾಸಿಯರು ನಾಲ್ಕು ಲಕ್ಷ ಚಿಲ್ಲರೆ ಇದ್ದಾರೆಂದು ಹೇಳಿದರು, ನಾಲ್ಕು ಲಕ್ಷ ಚಿಲ್ಲರೆ ಎಲ್ಲಿ ಸಿಗುತ್ತಾರೆ? ಅದರ ಮೂಲ ಎಲ್ಲಿದೆ ಎಂದು ಹೇಳುತ್ತೀರಾ?

ಶ್ರೀ ಗೋವಿಂದ ಎಂ. ಕಾರಜೋಳ : ಭಾರತ ಸರ್ಕಾರದ 2001ನೇ ಸಾಲಿನ ಜನಗಣತಿ ಏನಿದೆ, ಆ ಜನಗಣತಿ ಆಧಾರದ ಮೇಲೆ ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ : ದೇವದಾಸಿಯರ ಪುನರ್ವಸತಿಗೋಸ್ಕರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಪುನರ್ವಸತಿ ಕಾರ್ಯಕ್ರಮ ಇದೆ. ಅದಕ್ಕೋಸ್ಕರ 80 ಲಕ್ಷ ರೂಪಾಯಿಗಳು ಇವೆ.

ಶ್ರೀ ಜಗದೀಶ್ ಶೆಟ್ಟರ್ : ದೇವದಾಸಿ ಮಕ್ಕಳು ಸಲುವಾಗಿ ಅಥಣಿಯಲ್ಲಿ ಒಂದು ಸ್ಕೂಲ್ ನಡೆಸುತ್ತಿದ್ದಾರೆ. ಇದಕ್ಕೆ ಸರ್ಕಾರದ ವತಿಯಿಂದ ಒಂದು ಪೈಸೆ ಅನುದಾನ ಇಲ್ಲ. ಅಂತಹ ಶಾಲೆಗಳಿಗಾದರೂ ಸಹಾಯ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಾಡೋಣ. ಎನ್‌ಜಿಓಸ್ ಸಹಯೋಗದಲ್ಲಿ ದೇವದಾಸಿಯರಿಗೆ, ಅನುಕೂಲ ಮಾಡೋಣ. ನನಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸಿಕ್ಕಿರತಕ್ಕಂತಹ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ಸುಮಾರು 23,000 ದೇವದಾಸಿಯರಿದ್ದಾರೆಂದು ಇದೆ. ನೀವು ಹೇಳುವುದನ್ನು ನಾನು ಇನ್ನೊಂದು ಸಾರಿ ವೆರಿಫೈ ಮಾಡಿಸುತ್ತೇನೆ. 2001ರ ಸೆನ್ಸಸ್ ಬಂದಿದೆ ಅದರಲ್ಲಿ ಏನಾದರೂ ಇದೆಯಾ ಎಂದು ನೋಡೋಣ. ನನಗೆ ನಮ್ಮ ಸಹಕಾರ ಇಲಾಖೆಯವರು ಕೊಟ್ಟಿರುವ ಮಾಹಿತಿ ಪ್ರಕಾರ ಸುಮಾರು 23,800 ಏನೋ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ದೇವದಾಸಿಯರು ಒಟ್ಟು 23 ಸಾವಿರ ಕರ್ನಾಟಕದಲ್ಲಿ ಇದ್ದಾರೆ ಎಂದು ನೀವು ಹೇಳಿರುವುದು ಖರೆ ಇದೆ, 5 ಲಕ್ಷ ಎಂದು ಕಾರಜೋಳ್‌ರವರು ಏನು ಹೇಳಿದರೋ ಅದೂ ಖರೆ ಇದೆ. ಆದರೆ ದೇವದಾಸಿ ಪದ್ಧತಿಯನ್ನು ನಿಲ್ಲಿಸಲೇಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಯಾವುದಾದರೂ ಒಂದು ಖರೆ ಇರುವುದಕ್ಕೆ ಸಾಧ್ಯವಿರುತ್ತದೆಯೇ ಹೊರತು ಎರಡೂ ಖರೆ ಇರುವುದಕ್ಕೆ ಸಾಧ್ಯವಿಲ್ಲ. ನಾನು ಹೇಳಿರುವುದು ಖರೆ ಇರಬೇಕು ಅಥವಾ ಅವರು ಹೇಳಿದ್ದು ಖರೆ ಇರಬೇಕು. ಒಟ್ಟಿನಲ್ಲಿ ಎರಡೂ ಖರೆ ಇರುವುದಕ್ಕೆ ಸಾಧ್ಯವಿಲ್ಲ. ನನಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಒದಗಿಸಿರುವ ಪ್ರಕಾರ 23 ಸಾವಿರ ಚಿಲ್ಲರೆ ಇದೆ. ಈಗ ಅವರು 5 ಲಕ್ಷ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ವೆರಿಫಿಕೇಶನ್ ಮಾಡೋಣ ಬಿಡಿ. ನೀವು ಏನು ಕೊಡುತ್ತೀರೋ ಅದನ್ನು ಕೊಡಿ ನೋಡೋಣ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅರ್ಥ ಸಚಿವರೆ, ಈಗ ವಸತಿ ಶಾಲೆಯ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳು ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿನಿಲಯಗಳನ್ನೂ ಸಹ ತರಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗ ಏನು ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳು, ಶೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟೆಲ್‌ಗಳು ಏನಿವೆಯೋ ಅದಕ್ಕೆ ಮೇನ್‌ಟೆನೆನ್ಸ್‌ಗೆ ಹಣ ಕೊಟ್ಟಿಲ್ಲ, ಸ್ಕಾಲರ್ ಶಿಪ್ ಕೊಟ್ಟಿಲ್ಲ, ಹೀಗೆ ಬೇರೆ ಬೇರೆ ಏನೋ ಕೊಟ್ಟಿಲ್ಲವೆಂದು ಸದಸ್ಯರುಗಳು ಹೇಳಿದ್ದಾರೆ. ಈ ಏಪ್ರಿಲ್ ಒಂದನೇ ತಾರೀಖಿನಿಂದ ಅವುಗಳಿಗೆ ಯಾವ ತೊಂದರೆಯೂ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ. ಅದನ್ನು ಕೊಡಲೇಬೇಕು. ಏಕೆಂದರೆ ಮಕ್ಕಳಿಗೆ...

ಶ್ರೀ ಸಿ.ಟಿ. ರವಿ : ಮಾನ್ಯ ಅರ್ಥ ಸಚಿವರೆ, ಹಾಸ್ಟೆಲ್‌ನಲ್ಲಿ ಹತ್ತು ವರ್ಷದ ಹಿಂದೆ ಸರ್ಕಾರ ಒಬ್ಬ ವಿದ್ಯಾರ್ಥಿಗೆ 75 ರೂಪಾಯಿ ಎಂದು ನಿಗದಿಪಡಿಸಿರುವುದು. ಆದರೆ ಈಗ ದುಬಾರಿ ಕಾಲದಲ್ಲೂ ಇಷ್ಟೇ ನಿಗದಿಪಡಿಸಿದರೆ ಹೇಗೆ ಸಾಧ್ಯ ಹೇಳಿ. ಆದುದರಿಂದ ಇದನ್ನು ಹೆಚ್ಚು ನಿಗದಿ ಮಾಡಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅವರ ಸಲಹೆಯನ್ನೂ ಕೂಡ ನಾನು ಪರಿಶೀಲನೆ ಮಾಡುತೇನೆ. ನಾನು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್‌ಗಳು ಇರಬಹುದು, ಮೈನಾರಿಟಿಸ್ ಹಾಸ್ಟೆಲ್‌ಗಳಿರಬಹುದು, ಶೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟೆಲ್‌ಗಳಿರಬಹುದು. ಬಡವರ ಮಕ್ಕಳಿಗಾಗಿ ನಡೆಸುತ್ತಿರುವ ಯಾವುದೇ ಹಾಸ್ಟೆಲ್‌ಗಳಿರಬಹುದು, ಇವುಗಳಿಗೆ ಕೊಡುತ್ತಿರುವ ಮೇನ್‌ಟೆನೆನ್ಸ್ ಹಣ ಕಡಿಮೆ ಇದೆ, ಅದೇ ರೀತಿ ಬೇರೆ ಯಾವ್ಯಾವುಗಳಿಗೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೋ ಅವುಗಳಿಗೆಲ್ಲಾ ಹಣ ಬಿಡುಗಡೆ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇನೆ. ಆದುದರಿಂದ ಅದನ್ನು ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇನೆ ಎಂದು ಹೇಳಬಯಸುತ್ತೇನೆ. ಸಾಮಾಜಿಕ ನ್ಯಾಯದಿಂದ ವಂಚಿತರಾಗಿರತಕ್ಕಂಥ ಜನಗಳು ಏನಿದ್ದಾರೆ ಇವರಿಗೆ ಸಾಧ್ಯವಾದ ಮಟ್ಟಿಗೆ ನ್ಯಾಯ ಒದಗಿಸಿಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ದೇವದಾಸಿಯವರಿಗೆ ಪುನರ್ವಸತಿ ಕಾರ್ಯಕ್ರಮ ಕೂಡ ಇದೆ. ನಾನೇಕೆ ಇಲ್ಲಿ ಈಗ ಬಜೆಟ್‌ನಲ್ಲಿ ಹೇಳಲಿಲ್ಲವೆಂದರೆ ಇವೆಲ್ಲವುಗಳೂ ಆನ್ ಗೋಯಿಂಗ್ ವರ್ಕ್ಸ್‌ಗಳೇ ಆಗಿವೆ. ಈ ಆನ್ ಗೋಯಿಂಗ್ ವರ್ಕ್ಸ್‌ಗಳ ಬಗ್ಗೆ ಬಜೆಟ್‌ನಲ್ಲಿ ಏನು ಕಾರ್ಯಕ್ರಮಗಳು ಎಂಬುದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗಿಲ್ಲ. ಇವುಗಳು ನಡೆದುಕೊಂಡು ಹೋಗತಕ್ಕಂಥವುಗಳೇ ಆಗಿರುವುದರಿಂದ ಇವ್ಯಾವುವನ್ನು ನಾನು ಹೇಳುವುದಕ್ಕೆ ಹೋಗಿಲ್ಲ.

ಶ್ರೀ ಸಿದ್ದು ಸವದಿ : ನೇಕಾರರ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಈಗ ನೇಕಾರರ ಬಗ್ಗೆಯೇ ಹೇಳುವುದಕ್ಕೆ ಹೊರಟಿದ್ದೆ. ಮಾನ್ಯ ಅಧ್ಯಕ್ಷರೆ, ಬಹಳ ದಿನಗಳಿಂದ ನೇಕಾರರ ಬೇಡಿಕೆ ಇದೆ. ಅದನ್ನು ಬಗೆಹರಿಸಲೇಬೇಕು. ನಾವು ಅನೇಕ ಕಡೆಗಳಿಗೆ ಹೋದಾಗ ಅವರುಗಳು ನಮ್ಮನ್ನು ಕರೆದುಕೊಂಡು ಹೋಗಿ ತಮ್ಮ ಸ್ಥಿತಿ ಯಾವ ರೀತಿ ಇದೆ, ಕಷ್ಟಗಳು ಏನು ಎಂಬುದನ್ನೆಲ್ಲಾ ನಮಗೆ ಹೇಳಿದ್ದಾರೆ. ಆದಕಾರಣ ಅವರಿಗಾಗಿ ಇನ್ನು ಉಳಿದ ಎಂಟು ತಿಂಗಳ ಅವಧಿಗಾಗಿ 20 ಕೋಟಿ ರೂಪಾಯಿಗಳನ್ನು ನಾನು ಇಟ್ಟಿದ್ದೇನೆ. ನಾನು ಏನೇನು ಮಾಡುತ್ತೇನೆ ಎಂಬುದನ್ನು ಕೂಡ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ. ಒಂದು ವಿಷಯ ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆಂದರೆ ಆಂಧ್ರಪ್ರದೇಶದಲ್ಲಿ ನೇಕಾರರ ಪವರ್ ಲೂಮ್‌ಗಳಿಗೆ ಕೊಡತಕ್ಕಂಥ ಪವರ್ ಬೆಲೆ ಬಹಳ ಕಡಿಮೆ ಇದೆ, ಗುಜರಾತ್‌ನಲ್ಲಿ ಕಡಿಮೆ ಇದೆ, ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಕಡಿಮೆ ಇದೆ ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ.

ನಾನು ಆ ಎಲ್ಲಾ ರಾಜ್ಯಗಳ ಕಡೆಯಿಂದ ವರದಿಗಳನ್ನು ತರಿಸಿ ಅದಕ್ಕೆ ಅನುಗುಣವಾಗಿ ಪ್ಯಾರಿಟಿ ಬರುವ ರೀತಿಯಲ್ಲಿ ನೋಡಿ ಕ್ರಮ ತೆಗೆದುಕೊಳ್ಳೋಣ. ಈಗ ನಾಲ್ಕು ಮಗ್ಗಗಳಿಗೆ ಸೀಮಿತವಾಗಿ ಕೊಡುತ್ತೇವೆ ಎಂದು ನಾವು ಹೇಳಿದ್ದೇವೆ.

ಶ್ರೀ ಸಿದ್ದು ಸವದಿ (ಜಮಖಂಡಿ) : ಮಾನ್ಯ ಅರ್ಥ ಸಚಿವರೆ, ಹತ್ತು ಮಗ್ಗಗಳಿಗೆ ಕೊಡಬೇಕು. ನೇಕಾರರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ನೀವು ಈಗಲೇ ಹತ್ತು ಮಗ್ಗಗಳಿಗೆ ಕೊಡುತ್ತೇವೆ ಎಂದು ಉತ್ತರದಲ್ಲಿ ಹೇಳಲೇಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮುಂದೆ ಮಾಡೋಣ. ಮುಂದೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡೋಣ. ಈಗ ನಾಲ್ಕು ಮಗ್ಗಗಳಿಗೆ, ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹಿಂದಿನ ಕಾಂಗ್ರೆಸ್ ಸರ್ಕಾರ 105 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿತ್ತು. ಹಿಂದಿನ ಜವಳಿ ಸಚಿವರಾದ ಮಾನ್ಯ ರೇವಣ್ಣನವರ ಪ್ರಕಟಣೆ ಇಲ್ಲಿ ಇದೆ. ನೋಡಿ ನೀವು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಅದನ್ನು ಬಿಡಿ. ಈಗಿನದನ್ನು ಕೇಳಿ. ಈಗ 20 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ. ಇದಕ್ಕಿಂತಲೂ ಹೆಚ್ಚು ಹಣ ಖರ್ಚಾಗುವುದಾದರೆ ನಾನು ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಅವರಿಗೆ ಹೇಳುತ್ತೇನೆ. ಈಗ ಪ್ರಾರಂಭ ಮಾಡಿದ್ದೇನೆ. ಮುಂದಿನ ಬಾರಿ ನೇಕಾರರ ಇನ್ನುಳಿದ ಸಮಸ್ಯೆಗಳು ಮತ್ತು ನೇಕಾರರಿಗೋಸ್ಕರ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಂತ ಏನು ಇದೆ ಅದಕ್ಕೂ ಶಕ್ತಿ ತುಂಬುವ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಈ ಕಾರ್ಪೊರೇಷನ್ ಶಕ್ತಿಯುತವಾಗಿದ್ದರೆ ಮಾತ್ರ ನೇಕಾರರಿಗೂ ಅನುಕೂಲವಾಗುತ್ತದೆ. ಒಳ್ಳೆಯ ರಾ ಮೆಟೀರಿಯಲ್‌ನ್ನು ಕೊಡಬೇಕಾದರೆ, ಬೇರೆ ಬೇರೆ ಕಾರ್ಯಕ್ರಮಗಳನ್ನು ನೇಕಾರರಿಗೆ ರೂಪಿಸಿಕೊಡಬೇಕಾದರೆ ಈ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೂಡ ಶಕ್ತಿಯುತವಾಗಿರಬೇಕಾಗುತ್ತದೆ. ಅದಕ್ಕೆ ಶಕ್ತಿ ತುಂಬತಕ್ಕಂಥ ಕಾರ್ಯಕ್ರಮ ಹಾಕಬೇಕು. ಸರ್ಕಾರದಿಂದ ಬಟ್ಟೆಯನ್ನು ಖರೀದಿ ಮಾಡುತ್ತಾರೆ. ಶಿಕ್ಷಣ ಇಲಾಖೆ ಇರಬಹುದು, ಗೃಹ ಇಲಾಖೆ ಇರಬಹುದು, ಅಬ್ಕಾರಿ ಇಲಾಖೆ ಇರಬಹುದು ಹಾಗೂ ಇನ್ನಿತರ ಬೇರೆ ಇಲಾಖೆಗಳು ಸಮವಸ್ತ್ರಗಳನ್ನು ಖರೀದಿ ಮಾಡುವುದು ಇದೆ.

ಶ್ರೀ ಜಗದೀಶ್ ಶೆಟ್ಟರ್ : ಸಮವಸ್ತ್ರಗಳನ್ನು ಇಲ್ಲಿಂದಲೇ ಖರೀದಿ ಮಾಡಬೇಕೆಂದು ಆ ಎಲ್ಲಾ ಇಲಾಖೆಗಳಿಗೂ ನೀವು ಡೈರಕ್ಷನ್ ಕೊಡಿ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈ ರೀತಿ ಮಾಡಿದರೆ ಹೇಗೆ? ಮುಂದೆ ಕ್ಲಾರಿಫಿಕೇಶನ್ ಕೇಳಲು ಅವಕಾಶವಿದೆ. ಆಗ ಕೇಳುವಿರಂತೆ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಅರ್ಥ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಈ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಹೆಚ್ಚು ಶಕ್ತಿ ಕೊಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವ ಮಾತನ್ನೂ ಕೂಡ ಹೇಳಿ ನಾವು ನೇಕಾರರಿಗೆ ಈ ಸಹಾಯಗಳನ್ನು ಮುಂದುವರೆಸುತ್ತೇವೆ. ಮುಂದಿನ ಸಾಲಿನಲ್ಲಿ ಇನ್ನೂ ಹೆಚ್ಚು ಮಾಡುತ್ತೇವೆ. ಮಾನ್ಯ ಸದಸ್ಯರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಮಾಡತಕ್ಕಂಥ ಕೆಲಸವನ್ನು ಮುಂದಿನ ಸಾಲಿನಿಂದ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅರ್ಥ ಸಚಿವರೆ, ತಾವು ಈಲ್ಡ್ ಆಗುವುದಾದರೆ ಒಂದು ವಿಷಯ ಹೇಳಬಯಸುತ್ತೇನೆ. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮೂರು ಮುಖ್ಯವಾದ ವಿಚಾರಗಳ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. I don't want to place any demand. Infracture vs. quality of the education ಬಗ್ಗೆ ಒಂದು ಆಜ್ಞೆಯನ್ನು ಮಾಡಿ ಮೊದಲ ಕಂತಾಗಿ 10 ಕೋಟಿ ರೂಪಾಯಿಗಳನ್ನು ನಾನು ಕಳೆದ ಬಾರಿ ಒದಗಿಸಿಕೊಟ್ಟಿದ್ದೇನೆ. ಕಂಪ್ಯೂಟರ್, ರೀಡಿಂಗ್ ರೂಂ, ಲೈಬ್ರರಿಗಳಿಗೆ ಎಂದು. ಆ ಎಲಿಮೆಂಟ್ ಇಲ್ಲಿ ಇಲ್ಲವಾಗಿದೆ. ಇದರ ಜೊತೆಗೆ ಈ ಬ್ಯಾಕ್‌ವರ್ಡ್‌ಕ್ಲಾಸ್ ಸರ್ವೆ ವಿಚಾರದಲ್ಲಿ 5 ಕೋಟಿ ರೂಪಾಯಿಗಳನ್ನು ಪ್ರಪೋಸ್ ಮಾಡಿದ್ದೆವು. ಆ ಬಗ್ಗೆ at least per year Rs. 2 crore ಎನ್ನುವ ಲಾಂಗ್ವೇಜ್‌ನ್ನು ಸೇರಿಸಿದರೆ ಅದು ಸರಿಹೋಗುತ್ತದೆ. ಇನ್ನು ಮೂರನೇ ವಿಚಾರವೆಂದರೆ ಹಾಸ್ಟೆಲ್‌ಗಳಿಗೆ ನಾವೇನು ಔಟ್‌ಸೈಡ್ಸ್ ಲೋನ್ ಫೆಸಿಲಿಟೀಸ್, ಮಾಡಿಕೊಂಡು ಕನ್‌ಸ್ಟ್ರಕ್ಷನ್ ಮಾಡಿ ಅಲ್ಲಿ ಎಲ್ಲಾ ಬೇಸಿಕ್ ಫೆಸಿಲಿಟಿಸ್ ಕೊಟ್ಟು ಮಾಡುವುದಕ್ಕೆ 150 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೆವೋ ಅದರ ಬಗ್ಗೆ ಏನೂ ಇಲ್ಲಿ ಪ್ರಸ್ತಾಪ ಆಗಲಿಲ್ಲ. ಈ ಮೂರು ವಿಚಾರಕ್ಕೆ we draw your kind attention.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಪ್ಪನವರು ಹೇಳಿದರು. ನಾನು ಎಲ್ಲಾ ಆನ್‌ಗೋಯಿಂಗ್ ಬಗ್ಗೆ, ಅವರು ಏನು ಹಿಂದೆ ಮಾಡಿದ್ದರೋ ಅವುಗಳನ್ಯಾವುದನ್ನೂ ನಿಲ್ಲಿಸಿದ್ದೇವೆ ಎನ್ನುವ ಅರ್ಥ ಇಲ್ಲ. ಅವುಗಳೆಲ್ಲವೂ ಮುಂದುವರೆಯತಕ್ಕಂಥ ಕೆಲಸಗಳೇ ಆಗುತ್ತವೆ. ಈಗ ಹಿಂದುಳಿದ ಜಾತಿಯವರು ಮತ್ತು ಬೇರೆ ಜಾತಿಯವರು ಜನಗಣತಿ ಆಗಬೇಕು ಎಂದು ಹೇಳಿದ್ದಾರೆ. ಬೇರೆ ಏಜೆನ್ಸಿ ಮೂಲಕ ಕೂಡ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ಸಧ್ಯಕ್ಕೆ ಎರಡೂ ಕೋಟಿ ರೂಪಾಯಿಗಳು ಎಂದು ಹೇಳಿದ್ದೇವೆ. ಇನ್ನೂ ಹೆಚ್ಚು ಬೇಕಾದರೆ ಕೊಡೋಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿದ್ದು ಸವದಿ : ಮಾನ್ಯ ಅರ್ಥ ಸಚಿವರೆ, ನೇಕಾರರಿಗೆ ಹತ್ತು ಮಗ್ಗಗಳಿಗೆ ಕೊಡಲೇಬೇಕು. ಅವರಿಗೂ ಶೇಕಡ 6ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಬೇಕು. ಇವೆರಡನ್ನೂ ಅವರಿಗೆ ತಾವು ನಡೆಸಿಕೊಡಬೇಕು.

ಅಧ್ಯಕ್ಷರು : ಈಗ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ : ನಾನು ಇದಕ್ಕಾಗಿ ಧರಣಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಒಂದು ವಿಷಯ ತಿಳಿದುಕೊಳ್ಳಬೇಕು. ಮಾನ್ಯ ಅರ್ಥ ಸಚಿವರು ಉತ್ತರ ಕೊಡುತ್ತಿರುವಾಗಲೇ ಧರಣಿ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ. ಅವರು ಈಗ ಉತ್ತರ ಕೊಡುತ್ತಿದ್ದಾರೆ. ಅದಾದ ಮೇಲೆ ಕ್ಲಾರಿಫಿಕೇಶನ್‌ಗೆ ಅವಕಾಶ ಇದೆ. ಆನಂತರ ಬೇಕಾದರೆ ತಾವು ಪ್ರತಿಭಟನೆಯನ್ನು ಮಾಡಿ. ಅದನ್ನು ಬಿಟ್ಟು ಏನಿದು ಈ ರೀತಿ.

ಶ್ರೀ ಸಿದ್ದು ಸವದಿ : ಅವರು ಅಲ್ಲಿ ಸಾಯುತ್ತಿದ್ದಾರೆ. ಅವರನ್ನು ಬದುಕಿಸುವುದು ಬೇಡವೆ?

ಅಧ್ಯಕ್ಷರು : ಈಗ ಮನೊದಲು ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ : ಆಗೋದಿಲ್ಲ ಸಾರ್. ಕನಿಷ್ಟ ಹತ್ತು ಮಗ್ಗಗಳಿಗೆ ತಾವು ದಯಮಾಡಿ ಮಾಡಿಬಿಡಿ.

(ಮಾನ್ಯ ಸದಸ್ಯರಾದ ಶ್ರೀ ಸಿದ್ದು ಸವದಿ ಮತ್ತು ಶ್ರೀ ಯಾದ್‌ವಾಡ್ ಮಹದೇವಪ್ಪರವರುಗಳು ಬಂದು ಧರಣಿ ನಿರತರಾದರು)

ಅಧ್ಯಕ್ಷರು : ಈಗ ಸದನದ ಬಾವಿಗೆ ಬಂದು ಕುಳಿತಿದ್ದೀರಿ. ಇಲ್ಲಿ ಇನ್ನು ಮಾತನಾಡುವುದಕ್ಕೆ ಅವಕಾಶ ಇಲ್ಲ. ನೀವು ಅಲ್ಲಿಯೇ ಕುಳಿತುಕೊಳ್ಳಿ. ಹೇಗಿದ್ದರೂ ಬಾವಿಗೆ ಬಂದುಬಿಟ್ಟಿದ್ದೀರಿ ಆದ್ದರಿಂದ ಅಲ್ಲಿಯೇ ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ಅದನ್ನು ಮುಂದೆ ಹೆಚ್ಚು ಮಾಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ. ಇನ್ನು ಮಾನ್ಯ ಜಗದೀಶ್ ಶೆಟ್ಟರ್ ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಕಳಸಾ ಬಂಡೋರಿ ನಾಲಾ ವಿಚಾರ ಮಾಡಿ ಅದಕ್ಕೆ ಮೋಷನ್ ಕೊಡುತ್ತಿದ್ದೇವೆ ಎಂದಿದ್ದಾರೆ. ಮೋಶನ್ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅದಕ್ಕೆ ಅವಕಾಶ ಇಲ್ಲ. ಅದೇನೇ ಇರಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲೀನಾಗಿದೆಯೆಂದರೆ ಗೋವಾ ಮತ್ತು ನಮ್ಮ ರಾಜ್ಯಕ್ಕೆ ಡೈವರ್ಟ್ ಮಾಡಿ ಮಲಪ್ರಭಾ ನದಿಗೆ ಬರತಕ್ಕಂಥದ್ದು. ಹಿಂದೆ 2002ನೇ ಇಸವಿಯಲ್ಲಿ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿತ್ತು. ಇದಕ್ಕೆ ಸೆಂಟರ್ ವಾಟರ್ ಕಮಿಶನ್ ನವರು ಒಪ್ಪಿಗೆ ಕೊಟ್ಟಿದ್ದರು. ಅದಕ್ಕೆ ದುಡ್ಡನ್ನೂ ಕೂಡ ಇಟ್ಟಿದ್ದರು. ಗೋವಾದವರು ಇದಕ್ಕೆ ಅಬ್ಜೆಕ್ಷನ್ ಮಾಡಿದರು. ಅಬ್ಜೆಕ್ಷನ್ ಮಾಡಿದ ಮೇಲೆ ಅದೇ ಸೆಂಟರ್ ವಾಟರ್ ಕಮಿಶನರ್‌ವರು ಅದನ್ನು ಈಗ ಅಬಿಯನ್ಸ್‌ನಲ್ಲಿ ಇಟ್ಟುಬಿಟ್ಟಿದ್ದಾರೆ. ಯಾವುದಕ್ಕೆ ಪರ್ಮಿಶನ್‌ನ್ನು ಕೊಟ್ಟಿತ್ತೋ ಅದನ್ನು ವಾಪಸ್ಸು ತೆಗೆದುಕೊಂಡು ಬಿಟ್ಟರು. ಈಗ ಮತ್ತೆ ಈ ಮಧ್ಯೆದಲ್ಲಿ ಈ ಅರಣ್ಯ ಇಲಾಖೆ ಏನಿದೆ ಇವರ ಜೊತೆ ಎರಡು ಬಾರಿ ಮೀಟಿಂಗ್‌ಗಳು ಆಗಿವೆ. 2003ರ ಡಿಸೆಂಬರ್ ತಿಂಗಳಿನಲ್ಲಿ ಮೀಟಿಂಗ್ ಆಗಿದೆ. ಅಲ್ಲೂ ಕೂಡ ಕ್ಲಿಯರ್ ಆಗಬೇಕು. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಫಾರೆಸ್ಟ್ ಅಡ್ವೈಸರಿ ಕಮಿಟಿ ಏನಿದೆ ಅವರಿಂದಲೂ ಕ್ಲಿಯರ್ ಆಗಬೇಕು. ಇದಲ್ಲದೇ ಸೆಂಟರ್ ವಾಟರ್ ಕಮಿಶನ್‌ನಿಂದಲೂ ಕ್ಲಿಯರ್ ಆಗಬೇಕು. ಈಗ ನೀವು 100 ಕೋಟಿ ರೂ. ಇಟ್ಟುಬಿಡಿ ಎಂದು ಹೇಳಿದ್ದೀರಿ. ಈಗ 100 ಕೋಟಿ ರೂ. ಇಡುವುದರಿಂದ ಭಾವನಾತ್ಮಕವಾಗಿ ಸಮಾಧಾನವಾಗುತ್ತದೆ ಎನ್ನುವುದು ಒಂದು ಭಾಗ. ಅದನ್ನು ಕ್ಲಿಯರ್ ಮಾಡಿಸುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಏಕೆಂದರೆ 7.56 ಟಿ.ಎಂ.ಸಿ. ನೀರು ನಮಗೆ ಸಿಗಬೇಕು. ಅದು ಮಹದಾಯಿ ನದಿಯಿಂದ ಡೈವರ್ಟ್ ಮಾಡಿ ಮಲಪ್ರಭಾ ನದಿಗೆ ತೆಗೆದುಕೊಂಡು ಬಂದು ನಮಗೆ ಬಳಸಿಕೊಳ್ಳತಕ್ಕಂಥ ನೀರಾಗಿದೆ. ಆದುದರಿಂದ ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಮಾಡಿಸಬೇಕು. ಡೆಲಿಗೇಶನ್ ಹೋಗಬೇಕಾದರೆ ಹೋಗೋಣ.

3.10 ಪಿ ಎಂ

ಸೆಂಟ್ರಲ್ ವಾಟರ್ ರಿಸೋರ್ಸಸ್ ಮಿನಿಸ್ಟರ್ ಇದ್ದಾರೆ ಅವರನ್ನು ಹಾಗೂ ಪ್ರೈಂ ಮಿನಿಸ್ಟರ್ ಅವರನ್ನು ಭೇಟಿ ಮಾಡಿ ಇದನ್ನು ಅಬೆಯೆನ್ಸ್‌ನಲ್ಲಿ ಏನು ಇಟ್ಟಿದ್ದೀರಿ ಅದನ್ನು ಕ್ಲಿಯರ್ ಮಾಡಿ ಎಂದು ಏನು ಹೇಳಿದ್ದಾರೆ, ಅದು ಕ್ಲಿಯರ್ ಆದ ತಕ್ಷಣ ಅದಕ್ಕೆ ದುಡ್ಡು ಬೇಕಾದರೆ ಸಪ್ಲಿಮೆಂಟರಿ ಬಿಲ್ ಮಾಡಿಕೊಳ್ಳೋಣ. ಆದುದರಿಂದ ಅದರ ಬಗ್ಗೆ..

ಗೊಂದಲ

ಅಧ್ಯಕ್ಷರು : ನಂತರ ಕ್ಲಾರಿಫಿಕೇಷನ್ ಕೇಳುವಾಗ ಕೇಳಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ನೀರಾವರಿ ಬಗ್ಗೆ ಗುಲಾಬಿಯವರು 40 ಪರ್ಸೆಂಟ್ ಸೋರಿ ಹೋಗುತ್ತಿದೆ ಎಂದು ಹೇಳಿದರು. ಅದನ್ನು ನಾನೇನೂ ಡಿಸ್ಪೂಟ್ ಮಾಡುವುದಿಲ್ಲ. ಸೋರಿ ಹೋಗುವುದಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇರಿಗೇಷನ್‌ನಲ್ಲಿ 40 ಪರ್ಸೆಂಟ್ ನೀರು ಸೋರಿ ಹೋಗುತ್ತಿದೆ ಎನ್ನುವ ಮಾತನ್ನೂ ಕೂಡ ನಾನು ಒಪ್ಪೊಕೊಳ್ಳುತ್ತೇನೆ. ಸೋರಿ ಹೋಗುತ್ತಿರುವುದು ನಿಜ. ಅದನ್ನು ನಿಲ್ಲಿಸಬೇಕು, ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಮತ್ತು ನೀರನ್ನು ಕೆರೆಗಳಿಗೆ ಹರಿಸುವುದರ ಜೊತೆಗೆ ನಾಲೆ ತೋಡಿಬಿಟ್ಟರೆ ಆಗುವುದಿಲ್ಲ. ಕೆರೆಗಳಿಗೆ ನೀರನ್ನು ಹರಿಸುವುದರ ಜೊತೆಗೆ ತಮ್ಮ ಸಲಹೆಗಳನ್ನೆಲ್ಲಾ ಕೂಡ ಬಹಳ ಗಂಭೀರವಾಗಿ ಪರಿಗಣಿಸಿ ಅದನ್ನು ಮಾಡುತ್ತೇವೆಂದು ಹೇಳುತ್ತಾ, ಕೆರೆಗಳಲ್ಲಿ ನೀರನ್ನು ನಿಲ್ಲಿಸಬೇಕಾಗುತ್ತದೆ. ಆದುದರಿಂದ ಅಂಡರ್‌ಗ್ರೌಂಡ್ ವಾಟರ್ ಹೆಚ್ಚಾಗುತ್ತದೆ ಮತ್ತು ಆ ನೀರನ್ನು ಬಳಸಿಕೊಳ್ಳುವುದಕ್ಕೆ ಆಗುತ್ತದೆ. ಎಲ್ಲಾ ನಾವು ಒಂದೇ ಸೋರ್ಸ್ ಮೇಲೆ ಡಿಪೆಂಡ್ ಆಗುವುದರ ಬದಲು ಬೇರೆ ಬೇರೆ ಸೋರ್ಸ್‌ನಲ್ಲಿ ನೀರು ಸಿಕ್ಕರೆ ಅದರ ಒತ್ತಡ ಆಗ ಕಡಿಮೆಯಾಗುತ್ತದೆ. ಅದನ್ನು ಮಾಡತಕ್ಕಂಥ ಪ್ರಯತ್ನ ಕೂಡ ನಾವು ಮಾಡುತ್ತೇವೆ. ಮತ್ತು ಅಪ್ಪರ್ ಕೃಷ್ಣ ಫಸ್ಟ್ ಸ್ಟೇಜ್ ಮುಗಿಸಲೇಬೇಕು. ಅದಕ್ಕೆ ನಾವೇನು ಹೇಳಿದ್ದೇವೆ ಎಂದರೆ ಈ ಆರ್ಥಿಕ ವರ್ಷ ಮತ್ತು ಮುಂದಿನ ಆರ್ಥಿಕ ವರ್ಷದೊಳಗೆ ಈ ಫಸ್ಟ್ ಸ್ಟೇಜ್‌ನಲ್ಲಿ ನಮಗೆ 729 ಟಿಎಂಸಿ ನೀರು ಬೇಕು. ಐದು ಟಿಎಂಸಿ ನೀರು ಕುಡಿಯುವ ನೀರು ಬಿಟ್ಟರೆ ನಾವೇನು ನೀರು ಬಳಸಿಕೊಳ್ಳಬೇಕು ಅದು ನಮ್ಮ ಹಕ್ಕು. ಆ ಹಕ್ಕನ್ನು ಉಳಿಸಿಕೊಳ್ಳತಕ್ಕಂಥ ಮತ್ತು ಆ ನೀರನ್ನು ರೈತರಿಗೆ ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಇನ್ನೂ ಈಗ ಐದು ಮೀಟರ್ ಎತ್ತರ ಆಗಬೇಕಲ್ಲಾ. ಅಲ್ಲಿ ಉತ್ಪಾದನೆಯನ್ನು ಮಾಡುವುದರಿಂದ, ಪವರ್ ಕೂಡ ನಮಗೆ ಜಾಸ್ತಿಯಾಗುತ್ತದೆ. ಇನ್ನು ಕ್ರೆಸ್ಟ್ ಗೇಟ್ 524 ಕ್ಕೆ ಹಾಕಬೇಕೆಂದು ಇದ್ದು, ಅದಕ್ಕೂ ಕೂಡ ನಾವೆಲ್ಲಾ ಪ್ರಯತ್ನಗಳನ್ನು ಮಾಡಬೇಕು. ಮೊದಲು ನೀರು ನಾವು ರೈತರಿಗೆ ಕೊಡತಕ್ಕಂಥಾದ್ದು ಮತ್ತು ಹೈಡಲ್ ಪವರ್ ಕಂಪೇರಿಟಿವ್ಲಿ ಚೀಪ್ ರೇಟ್ ಆಗುತ್ತದೆ. ಹೈಡಲ್ ಪವರ್ ಹೆಚ್ಚು ಮಾಡಿದರೆ ರೈತರಿಗೆ ಕಡಿಮೆ ದರದಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ ಅದನ್ನೂ ಕೂಡ ಬಳಸಿಕೊಳ್ಳುವುದಕ್ಕೆ ಮತ್ತು ಇದನ್ನು ಎರಡು ವರ್ಷಗಳಲ್ಲಿ ಮಾಡಬೇಕು. ಮತ್ತು ಈಗಾಗಲೇ 'ಬಿ' ಸ್ಕೀಮ್ ಬಗ್ಗೆ ತೀರ್ಮಾನ ಮಾಡುವುದಕ್ಕೆ ಒಂದು ಆಯೋಗವಾಗಿದೆ. ಬಚಾವತ್ ತೀರ್ಪಿನಲ್ಲಿ ಹೇಳಿದ ಹಾಗೆ (ಎ) ಮತ್ತು (ಬಿ) ಸ್ಕೀಮ್ ಎಂದೇ ಪದಗಳನ್ನು ನಾವು ಹೇಳೋಣ. (ಬಿ) ಸ್ಕೀಮ್‌ನಲ್ಲಿ 25 ಪರ್ಸೆಂಟ್ ಮಹಾರಾಷ್ಟ್ರ 25 ಪರ್ಸೆಂಟ್ ಆಂಧ್ರಕ್ಕೆ ಹಾಗೂ ಉಳಿದಂತಹ 50 ಪರ್ಸೆಂಟ್ ಸರ್‌ಪ್ಲಸ್ ವಾಟರ್‌ನಲ್ಲಿ, ಆ ನೀರನ್ನು ಬಳಸಿಕೊಳ್ಳುವುದಕ್ಕೆ ಕೂಡ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಿ ಆಯೋಗ ಆದಷ್ಟು ಜಾಗ್ರತೆ ವರದಿ ಕೊಡುವುದಕ್ಕೆ ಎಲ್ಲಾ ಪ್ರಯತ್ನ ಮಾಡೋಣ. ಒಟ್ಟಿಗೆ ನಮಗೆ ಈ ನೀರು ಸಿಗಬೇಕು. ಇದೆಲ್ಲಾ ನಮ್ಮ ರಾಜ್ಯದಲ್ಲಿ ಲಭಿಸತಕ್ಕಂಥ ನೀರು. ನೀರಾವರಿ ಹೆಚ್ಚಾಗಬೇಕು. ಈಗ ನಾವು ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಕೂಡ 21 ರಿಂದ 22 ಪರ್ಸೆಂಟ್ ಮಾತ್ರ ನೀರಾವರಿಯಾಗಿದೆ. ಇನ್ನೂ ಹೆಚ್ಚು ಮಾಡತಕ್ಕಂಥ ಪ್ರಯತ್ನವನ್ನು ಕೂಡ ಮಾಡೋಣ ಎಂದು ಹೇಳಿ, ಈಗ ನೀರಾವರಿ ನಿಗಮಗಳಿಗೂ ಕೂಡ ಬಜೆಟರಿ ಸಪೋರ್ಟ್ ಕೊಡುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕೆ ಕೃಷ್ಣ ಜಲ ಭಾಗ್ಯ ನಿಗಮ ಮಾಡಿದ್ದು. ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಎಂದು ಮಾಡಿರುವುದು.

ಮಾನ್ಯ ಸದಸ್ಯರು : ತುಂಗಾಭದ್ರಾ ಬಗ್ಗೆ ಹೇಳಿ.

ಶ್ರೀ ಸಿದ್ಧರಾಮಯ್ಯ : ತುಂಗಾಭದ್ರಾ ಈಗಾಗಲೇ ಎಷ್ಟೋ ವರ್ಷದಿಂದ ಆಗಿ ನೀರು ಹರಿಯುತ್ತಿದೆ. ಅದಕ್ಕೆ ಎಡದಂಡೆ ನಾಲೆಯ ವಿಚಾರವಾಗಿ ರಾಯಚೂರು, ಕೊಪ್ಪಳ ಹಾಗೂ ಸಿಂಧನೂರಿನವರು ಎಲ್ಲಾ ಆಗಾಗ ಇದು ಒಡೆದು ಹೋಗುತ್ತದೆ, ಆದುದರಿಂದ ಅದನ್ನು ಶಾಶ್ವತವಾಗಿ ರಿಪೇರಿ ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಶಾಶ್ವತವಾಗಿ ರಿಪೇರಿ ಮಾಡಲೇಬೇಕು. ತುಂಗಭದ್ರಾ ಎಡದಂಡೆ ನಾಲೆ, ಅಪ್ಪರ್ ಕೃಷ್ಣ ಬಲದಂಡೆ ನಾಲೆ ಕಾವೇರಿಗೂ ಎಲ್ಲಾದಕ್ಕೂ ಮಾಡೋಣ. ಕಾವೇರಿ ಜಲಾನಯನ ಪ್ರದೇಶದಲ್ಲಿ ಕೂಡ ಆದಷ್ಟು ಜಾಗ್ರತೆ ಮುಗಿಸಬೇಕು. ಕಾವೇರಿ ಜಲಾನಯನ ಪ್ರದೇಶದಲ್ಲಿ ನಮ್ಮದು ವ್ಯಾಜ್ಯ ಇದೆ, ಅದನ್ನು ಮುಗಿಸಬಾರದು ಎಂದು. ಅದೂ ಕೂಡ ಉಳಿಕೆ ಕೆಲಸ ಇದೆ ಅದನ್ನು ಮುಗಿಸಬೇಕು. ಕಬಿನಿ ಸೇರಿಕೊಂಡು ಕೂಡ ಎಲ್ಲಾ ಮುಗಿಸತಕ್ಕಂಥ ಕೆಲಸ ಮಾಡಬೇಕಾಗುತ್ತದೆ. ಮತ್ತು ಈ ಬಲದಂಡೆ ನಾಲೆ ಇದೆಯಲ್ಲಾ ಅದು 95 ಕಿಲೋಮೀಟರ್‌ಗೆ ನಿಂತು ಬಿಟ್ಟಿದೆ. ಅದನ್ನೂ ಕೂಡ ಮುಂದುವರೆಸಿ, ಅದು 152 ರಿಂದ 153 ಕಿಲೋಮೀಟರ್‌ವರೆಗೆ ನೀರು ಹೋಗಬೇಕು. ಅದನ್ನು ತೋಡಿಸಬೇಕು ಮತ್ತು ನಾರಾಯಣಪುರ ಬಲದಂಡೆ ನಾಲೆ ಅದನ್ನು ತೋಡಿಸಿ ಮುಂದಿನ ವರ್ಷಗಳಲ್ಲಿ ಆದಷ್ಟು ಜಾಗ್ರತೆ ನೀರನ್ನು ರೈತರಿಗೆ ತಲುಪಿಸತಕ್ಕಂಥ ಕೆಲಸವನ್ನು ಮಾಡೋಣ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ವರಾಹಿ ಯೋಜನೆ ಬಗ್ಗೆ ಏನಾದರೂ ಸ್ವಲ್ಪ ಕಾರ್ಯಕ್ರಮ ಇದೆಯಾ?

ಶ್ರೀ ಸಿದ್ಧರಾಮಯ್ಯ : ನಾನು ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. There are so many on-going projects. They will continue. ಅದಕ್ಕೆ ಏನು ಹಣ ಕೊಡಬೇಕು ಏನು ಬಜೆಟರಿ ಸಪೋರ್ಟ್ ಕೊಡಬೇಕು ಅದನ್ನೆಲ್ಲಾ ಕೊಡುತ್ತಿದ್ದೇವೆ. On-going projects, I have not mentioned in this Budget speech. ಬೀದರ್‌ನಲ್ಲಿ ಇರುವುದು ಮುಂದುವರೆಯುತ್ತವೆ.

ಅಧ್ಯಕ್ಷರು : ಮೊದಲು ಉತ್ತರ ಕೊಡುವುದಕ್ಕೆ ಅವಕಾಶ ಕೊಡೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಗೋದಾವರಿ ಬೇಸಿನ್ ಬಗ್ಗೆ ಎಲ್ಲೂ ಕೇಳಿ ಬರುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ಅವನ್ನೆಲ್ಲಾ ಮಾಡೋಣ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಬಹಳ ಜನ ಮಾತನಾಡಿದ್ದಾರೆ.

ಶ್ರೀ ಹೆಚ್. ಆಂಜನೇಯ : ಭದ್ರಾ ಮೇಲ್ದಂಡೆ...

ಶ್ರೀ ಸಿದ್ಧರಾಮಯ್ಯ : ಅದಕ್ಕೆಲ್ಲಾ ಕರ್ನಾಟಕ ನೀರಾವರಿ ನಿಗಮ ಇದೆ. ಅದರ ಬಗ್ಗೆ ಮಾತನಾಡೋಣ. ಅದು ಅಲ್ಲಿ ಇರುತ್ತದೆ. ಕರ್ನಾಟಕ ನೀರಾವರಿ ನಿಗಮ ಇದೆ, ಕಾವೇರಿ ನಿಗಮ ಇದೆ. ಕೃಷ್ಣ ಜಲ ಭಾಗ್ಯ ನಿಗಮ ಇದೆ ಅದೆಲ್ಲಾ ಔಟ್‌ಸೈಡ್ ಬಜೆಟ್. ಅಲ್ಲಿ ಬಜೆಟ್ ಇಲ್ಲದೆ ಸಾಲ ಎತ್ತುವಳಿ ಮಾಡಿ ಮಾಡತಕ್ಕಂಥ ಕೆಲಸ ಮಾಡುತ್ತಾರೆ.

ಗೊಂದಲ

ಮಾನ್ಯ ಸದಸ್ಯರು : ಬರೀ 200 ಕೋಟಿ ರೂ. ಇದ್ದರೆ ಸಾಧ್ಯವಾಗುವುದಿಲ್ಲ; ಕಾವೇರಿ ನಿಗಮಕ್ಕೆ ದಯಮಾಡಿ ಜಾಸ್ತಿ ಹಣ ಕೊಡಬೇಕು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಆನಂತರ ಕ್ಲಾರಿಫಿಕೇಷನ್ ಕೇಳುವಂತಿರಿ.

ಶ್ರೀ ಸಿದ್ಧರಾಮಯ್ಯ : ನಾನು ಯೀಲ್ಡ್ ಆಗಿಲ್ಲ, ಮಧ್ಯೆ ಮಧ್ಯೆ ಮಾತನಾಡಬೇಡಿ. ರೈತರಾವರಿಗೆ ಆದ್ಯತೆಯನ್ನು ನಾವು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಾ, ಇನ್ನು ವಿದ್ಯುಚ್ಛಕ್ತಿ ಬಗ್ಗೆ ನಾನೀಗಾಗಲೇ ನನ್ನ ಬಜೆಟ್ ಭಾಷಣದಲ್ಲಿ ಏನೇನು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸವಿಸ್ತಾರವಾಗಿ ಹೇಳಿದ್ದೇನೆ. ಅದರ ಬಗ್ಗೆ ಹೆಚ್ಚು ಗಮನ ಕೊಡುತ್ತೇನೆ ಎಂದು ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಏಕೆಂದರೆ ಸಬ್ಸಿಡಿ ಕಡಿಮೆ ಆಗಬೇಕು. ರೈತರಿಗೆ ಒಳ್ಳೆಯ ಗುಣಮಟ್ಟದ ವಿದ್ಯುತ್ ಕೊಡಬೇಕು. ಇನ್ನು ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್ ಕಡಿಮೆ ಮಾಡಬೇಕು. ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ 30 ಪರ್ಸೆಂಟ್ ಇದೆಯೆಂದು ಹೇಳುತ್ತಾರೆ. ಅದರಲ್ಲಿ ಥೆಫ್ಟ್ ಎಲ್ಲಾ ಸೇರುತ್ತದೆ. ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಲ್ಲಿ ಒಂದು ಪರ್ಸೆಂಟ್ ಕಡಿಮೆ ಮಾಡಿದರೆ ಒಂದು ವರ್ಷಕ್ಕೆ ಕನಿಷ್ಟ 60 ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಮತ್ತೆ ಈಗ ಕೆಇಬಿ ಇಲ್ಲ. ಕೆಪಿಟಿಸಿಎಲ್ ನಾಲ್ಕು ಕಂಪನಿಗಳನ್ನು ಮಾಡಿದ್ದಾರೆ. ಅದು ಒಂದು ರೀತಿ ಅಟಾನಮಸ್ ಬಾಡಿ, ಇವು ಸ್ವತಂತ್ರವಾಗಿ ಕಾರ್ಯನಿರ್ವಹಿಸಿ ಬದುಕಬೇಕು ಎಂಬುದರ ಉದ್ದೇಶ. ಆ ದಿಕ್ಕಿಗೆ ತೆಗೆದುಕೊಂಡು ಹೋಗಬೇಕೆಂದು ಹೇಳಿ ಸರ್ಕಾರ ನಾವೇನೂ ಸಹಾಯ ಮಾಡುವುದಿಲ್ಲ–ವೆಂದು ಹೇಳುವುದಕ್ಕಾಗುವುದಿಲ್ಲ. ಈ ವರ್ಷ ಎಂದರೆ ಎಂಟು ತಿಂಗಳಿಗೆ 1400 ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕೆಂದು ಇಟ್ಟಿದ್ದೇವೆ. ಆದರೆ ಇದನ್ನೇ ಮುಂದುವರೆಸಬೇಕು ಎಂದು ನಾನು ವಾದ ಮಾಡುವುದಿಲ್ಲ. ಇದು ಕಡಿಮೆ ಆಗಬೇಕು. ರೈತರಿಗೆ ಕ್ವಾಲಿಟಿ ಪವರ್ ಸಿಗಬೇಕು.

ಮಾನ್ಯ ಸದಸ್ಯರು : ಓಟಿ ರದ್ದು ಮಾಡಬೇಕು.

ಶ್ರೀ ಸಿದ್ಧರಾಮಯ್ಯ : ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್‌ನಲ್ಲಿ ಲಾಸ್ ಕಡಿಮೆ–ಯಾಗಬೇಕು. ಯಾರ್‍ಯಾರಿಗೆ ಎಷ್ಟೆಷ್ಟು ಪವರ್ ಹೋಗುತ್ತದೆ ಎನ್ನುವುದು ಇನ್ನೂ ಲೆಕ್ಕವಾಗಿಲ್ಲ. ಹಿಂದೆ ನಾವು ಎನರ್ಜಿ ಆಡಿಟ್ ಎಂದು ಪ್ರಾರಂಭ ಮಾಡಿದ್ದೆವು. ಅದು ಕುಂಟುತ್ತಾ ನಡೆಯುತ್ತಿದೆ. Right from the inception of the KEB. ಪಂಪುಸೆಟ್ಟುಗಳಿಗೆ ಎಷ್ಟು ಪವರ್ ಹೋಗುತ್ತಿದೆ, ಡೊಮೆಸ್ಟಿಕ್ ಪರ್ಪಸ್‌ಗೆ ಎಷ್ಟು ಹೋಗುತ್ತಿದೆ, ಇಂಡಸ್ಟ್ರಿಗಳಿಗೆ ಎಷ್ಟು ಹೋಗುತ್ತಿದೆ, ಬೇರೆಬೇರೆಯದಕ್ಕೆ ಎಷ್ಟು ಹೋಗುತ್ತಿದೆ ಮತ್ತು ಆ್ಯಕ್ಚುಯಲ್ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಎಷ್ಟು ಎನ್ನುವುದು ತಿಳಿಯುತ್ತದೆ. ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಕಡಿಮೆಯಾಗಬೇಕಾದರೆ, ಸೈಮಲ್ಟೇನಿಯಸಲಿ ಸಿಸ್ಟಂ ಇಂಪ್ರೂವ್‌ಮೆಂಟ್ ಆಗಬೇಕು. ಸಿಸ್ಟಂ ಇಂಪ್ರೂವ್‌ಮೆಂಟ್ ಜೊತೆ ಜೊತೆಯಲ್ಲಿ ಆದಾಗ ಮಾತ್ರ ನಾವು ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸನ್ನು ಕಡಿಮೆ ಮಾಡಬಹುದು. ಒಂದು ಸಲ ನಾನು ಮಲೇಶಿಯಾಗೆ ಹೋಗಿದ್ದೆ. ಅಲ್ಲೆಲ್ಲಾ ಪ್ರೈವಟೈಸ್ ಮಾಡಿಬಿಟ್ಟಿದ್ದಾರೆ, ಸರ್ಕಾರದವರು ನಡೆಸುತ್ತಿಲ್ಲ. ಅಲ್ಲಿ ನಾನು ಅವರನ್ನು, ನಿಮ್ಮ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಎಷ್ಟು ಎಂದು ಕೇಳಿದೆ. Around 9%- ಎಂದು ಹೇಳಿದರು. ಎಂದರೆ, the efficiency is so high. ಅವರು ಅದನ್ನು ನೈನ್ ಪರ್ಸೆಂಟ್‌ಗೆ ಮಾಡಲು ಸಾಧ್ಯವಾದರೆ ನಾವು ಅದನ್ನು ಕನಿಷ್ಟ ಶೇಕಡಾ 19 ಕ್ಕಾದರೂ ತಂದು ನಿಲ್ಲಿಸಲು ಸಾಧ್ಯವಾಗಬೇಕು. ಆ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂಥ ಏನೇನು ಕಠಿಣ ಕ್ರಮಗಳನ್ನು ಮಾಡಲು ಸಾಧ್ಯವಾಗುತ್ತದೆ, ಅದೆಲ್ಲವನ್ನೂ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ

ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಬೇರೆ ಕಾರ್ಯಕ್ರಮಗಳಾದ, ಮನೆ ಕಟ್ಟುವುದು, ಕುಡಿಯುವ ನೀರಿನ ಯೋಜನೆಗಳು, ಬೆಂಗಳೂರಿನ ಕಾರ್ಯಕ್ರಮಗಳು ಇವೆಲ್ಲಾ ಆನ್-ಗೋಯಿಂಗ್ ಪ್ರಾಜೆಕ್ಟ್‌ಗಳು. ಇವುಗಳೆಲ್ಲಾ ನಡೆದುಕೊಂಡು ಹೋಗುತ್ತವೆ. ಮೈನರ್ ಇರಿಗೇಷನ್‌ಗೆ ಈ ಸಾರಿ 132 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಕೆರೆ ಹೂಳೆತ್ತುವ ವರ್ಲ್ಡ್ ಬ್ಯಾಂಕ್ ಕಾರ್ಯಕ್ರಮ ನಡೆಯುತ್ತಿದೆ. ಹೆಲ್ತ್‌ನಲ್ಲೊಂದು ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ನಡೆಯುತ್ತಿದೆ. ಇವುಗಳೆಲ್ಲಾ ನಡೆಯುತ್ತಿವೆ. ಇದರ ಜೊತೆಗೆ, ಅಗ್ರಿಕಲ್ಚರ್‌ಗೆ ಇನ್ನೂ ಹೆಚ್ಚಿನ ಇನ್‌ವೆಸ್ಟ್‌ಮೆಂಟ್ ಬೇಕು ಎನ್ನತಕ್ಕಂಥಾದ್ದನ್ನು ನಾವು ಈಗಾಗಲೇ ವರ್ಲ್ಡ್ ಬ್ಯಾಂಕಿನವರ ಜೊತೆ ಮಾಡನಾಡಿದ್ದೇವೆ. ಅಗ್ರಿಕಲ್ಚರ್ ಸೆಕ್ಟಾರ್‌ಗೆ ಹೆಚ್ಚು ಇನ್‌ವೆಸ್ಟ್‌ಮೆಂಟ್ ಆಗಬೇಕು. ಯಾವ ಸೆಕ್ಟಾರ್‌ಗೆ ಇನ್‌ವೆಸ್ಟ್‌ಮೆಂಟ್ ಕಡಿಮೆಯಾಗುತ್ತದೆ, ಅಲ್ಲಿ ಪ್ರೊಡಕ್ಟಿವಿಟಿ ಕಡಿಮೆಯಾಗುತ್ತದೆ. ಇನ್‌ವೆಸ್ಟ್‌ಮೆಂಟ್ ಯಾವ ರೂಪದಿಂದಲಾದರೂ ಬರಲಿ, ಖಾಸಗಿ ರೂಪದಲ್ಲಾದರೂ ಬರಲಿ, ಅಥವಾ ಜಾಯಿಂಟ್ ಸೆಕ್ಟಾರ್‌ನಲ್ಲಾದರೂ ಬರಲಿ ಅಥವಾ ಸರ್ಕಾರದಿಂದಲಾದರೂ ಬರಲಿ, ಇನ್‌ವೆಸ್ಟ್‌ಮೆಂಟ್ ಎಲ್ಲಿ ಕಡಿಮೆಯಾಗುತ್ತದೆ, ಅಲ್ಲಿ ಪ್ರೊಡಕ್ಷನ್ ಹೆಚ್ಚಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆ ಇವತ್ತಿಗೂ ಈ ರೈತರು ಎರಡು ಹೊತ್ತು ನೆಮ್ಮದಿಯಿಂದ ಊಟ ಮಾಡಿಕೊಂಡು ಬದುಕಲು ಸಾಧ್ಯವಾಗಿಲ್ಲ ಎಂದರೆ ಇವತ್ತಿನವರೆಗೆ, ಕೇಂದ್ರ ಸರ್ಕಾರದಲ್ಲಿ ಒಂದು ಸ್ಪಷ್ಟವಾದಂಥ ಕೃಷಿ ನೀತಿಯನ್ನು ಮಾಡಲೇ ಇಲ್ಲ. ಅಗ್ರಿಕಲ್ಚರ್ ಸೆಕ್ಟಾರ್‌ಗೆ ಎಷ್ಟು ಕ್ರೆಡಿಟ್ ಹೋಗಬೇಕು, ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ ಎಷ್ಟು ಕ್ರೆಡಿಟ್ ಹೋಗಬೇಕು, ಯಾವ ರೇಟ್ ಆಫ್ ಇಂಟರ್‌ಸ್ಟ್‌ನಲ್ಲಿ ಹೋಗಬೇಕು, ಏನು ಮಾಡಬೇಕು ಎನ್ನುವುದರ ಬಗ್ಗೆ ಇವತ್ತಿನವರೆಗೆ ಒಂದು ಸ್ಪಷ್ಟವಾದಂಥ ನೀತಿ ಆಗಿಲ್ಲ. ಮತ್ತು ಬೆಳೆಗೆ ಬೆಲೆ ನಿಗದಿ ಮಾಡುವಾಗ, ವೈಜ್ಞಾನಿಕವಾಗಿ ಮಾಡಬೇಕು, ರೈತರು ಅದಕ್ಕೆ ಎಷ್ಟು ಖರ್ಚು ಮಾಡುತ್ತಾರೆ, ಕಾಸ್ಟ್ ಆಫ್ ಪ್ರೊಡಕ್ಷನ್‌ಗೆ ಅನುಗುಣವಾಗಿ, ಎಷ್ಟು ಲಾಭದ ಮಾರ್ಜಿನ್ ಇಟ್ಟುಕೊಳ್ಳಬೇಕು ಎನ್ನುವುದು ಇವತ್ತಿನವರೆಗೆ ಆಗಿಲ್ಲ ಎನ್ನತಕ್ಕಂಥಾದ್ದು ಇದೆ. ಬೆಲೆ ಬಿದ್ದು ಹೋದರೆ ರೈತರಿಗೆ ನೆರವು ನೀಡುವಂಥ ಕಾರ್‍ಯಕ್ರಮ ಮೊದಲಿನಿಂದ ಈಗಾಗಲೇ ಇದೆ, ಅದಕ್ಕೆ ನಾನು ಇನ್ನೊಂದಿಷ್ಟು ಹೆಚ್ಚು ಹಣ ಕೊಟ್ಟಿದ್ದು, ಈ ರಿವಾಲ್ವಿಂಗ್ ಫಂಡ್‌ಗೆ ಸುಮಾರು 100 ಕೋಟಿ ರೂಪಾಯಿಗಳನ್ನು ಈ ಸಾರಿಯ ಬಜೆಟ್‌ನಲ್ಲಿಟ್ಟಿದ್ದೇವೆ. ಅದು ಇನ್ನೂ ಹೆಚ್ಚಾಗಬೇಕು. ರೈತರು ಬೆಳೆದಂಥ ಪದಾರ್ಥಗಳ ಬೆಲೆ ಬಿದ್ದು ಹೋದಾಗ, ಕೂಡಲೇ ರಾಜ್ಯ ಸರ್ಕಾರ ಮಾರ್ಕೆಟ್ ಇಂಟರ್‌ವೆನ್ಷನ್ ಮಾಡಬೇಕು, ಮಾರ್ಕೆಟ್ ಇಂಟರ್‌ವೆನ್ಷನ್ ಮಾಡಿ ಫ್ಲೋರ್ ರೇಟನ್ನು ನಿಗದಿ ಮಾಡಬೇಕು. ಆ ಫ್ಲೋರ್ ರೇಟಿಗಿಂತ ಕಡಿಮೆ ಬಿದ್ದರೆ ಸರ್ಕಾರ ಅದನ್ನು ಪರ್ಚೇಸ್ ಮಾಡತಕ್ಕಂಥಾದ್ದು ಮಾಡಬೇಕು. ಅದಕ್ಕೋಸ್ಕರ ಈಗ ಇರುವ 100 ಕೋಟಿ ರೂಪಾಯಿಗಳನ್ನು ಇನ್ನೂ ಹೆಚ್ಚು ಮಾಡುವ ಪ್ರಯತ್ನ ಮಾಡೋಣ. ರೈತರ ಪದಾರ್ಥಗಳ ಬೆಲೆ ಸ್ಥಿರವಾಗಿ ಕಾಪಾಡಲಿಕ್ಕೆ ಅದು ಸಹಾಯಕವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಎ.ಪಿ ಎಂ ಸಿ ಯವರ ಮೇಲೆ ಹೊರೆ ಹಾಕುತ್ತಿದ್ದೀರಿ. ಆವರ್ತನಿಧಿಯನ್ನು ನೀವು ಎಂ ಪಿ ಎಂ ಸಿ ಯವರ ಕಡೆಯಿಂದ ವಸೂಲು ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಎ ಪಿ ಎಂ ಸಿ ಯವರ ಭಾರವನ್ನು ಕಡಿಮೆ ಮಾಡೋಣ 'ಯಶಸ್ವಿನಿ' ಎನ್ನುವ ಒಂದು ಕಾರ್ಯಕ್ರಮವಿದ್ದು, ಅದರಲ್ಲಿ ಯಾರು ಕೋ-ಅಪರೇಟೀವ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ಮೆಂಬರ್ ಆಗಿದ್ದಾರೆ, ಅವರು ಮಾತ್ರ covered under Yashaswini programme. ಈ ಸೌಲಭ್ಯ ಮೆಂಬರ್ ಆಗದೇ ಇದ್ದವರಿಗೆ ಸಿಗುತ್ತಿಲ್ಲ. 'ಹೆಲ್ತ್ ಇನ್‌ಷೂರೆನ್ಸ್'

ಸೌಲಭ್ಯ 'ಯಶಸ್ವಿನಿ' ಯಲ್ಲಿ ಮೆಂಬರ್ ಆಗಿರುವವರಿಗೆ ಸಿಗುತ್ತದೆ. ಮೆಂಬರ್ ಆಗದೇ ಇರುವವರೂ ಸಾವಿರಾರು ಜನರಿದ್ದಾರೆ. ಅವರನ್ನೂ ಕೂಡ ಕವರ್ ಮಾಡಬೇಕು ಎನ್ನತಕ್ಕಂಥಾದ್ದು ಇದೆ. 'ಸಂಜೀವಿನಿ' ಕಾರ್ಯಕ್ರಮದ ಮೂಲಕ ಮಾಡಿ, ಅದಕ್ಕೋಸ್ಕರ 50 ಕೋಟಿ ರೂಪಾಯಿಗಳ ಹೆಲ್ತ್ ಫಂಡನ್ನು ಇಟ್ಟಿದ್ದೇವೆ. ಈ ವರ್ಗದ ಜನರನ್ನೂ ಅದರಲ್ಲಿ ಕವರ್ ಮಾಡಲು, ಆ ಪ್ರೋಗ್ರಾಮನ್ನು ಹೇಗೆ ಮಾಡಬೇಕು ಎಂದು ಮುಂದೆ ಚಾಕೌಟ್ ಮಾಡುತ್ತೇವೆ.

ಶ್ರೀ ಎ. ಕೃಷ್ಣಪ್ಪ : ನಾನು ಒಂದು ಸಲಹೆ ಕೊಟ್ಟಿದ್ದೆ. ಎಸ್.ಸಿ. ಎಸ್.ಟಿ. ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗಳವರಿಗೆ ಶೇರ್ಸ್ ತುಂಬಲು ಸರ್ಕಾರದಿಂದ ಹಣ ಕೊಟ್ಟರೆ ಆ ಸಮಸ್ಯೆಯೂ ಸಾಲ್ವ್ ಆಗುತ್ತದೆ. Their participation will be more.

ಶ್ರೀ ಸಿದ್ಧರಾಮಯ್ಯ : ಎಸ್.ಸಿ. : ಎಸ್.ಟಿ. ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗಳವರು ಯಾರು ಕೋ–ಆಪರೇಟೀವ್‌ಮೆಂಬರ್ಸ್ ಆಗಿಲ್ಲ, ಅವರಿಗೆ ಸರ್ಕಾರವೇ, ಅವರು ತುಂಬಬೇಕಾದಂಥ ಶೇರ್ ಹಣವನ್ನು ತುಂಬಿ, ಅವರನ್ನು ಮೆಂಬರ್ ಮಾಡಿ, ಅವರನ್ನೂ ಕೂಡ ಕವರ್ ಮಾಡಲು ಪ್ರಯತ್ನ ಮಾಡೋಣ. ಕವರ್ ಆಗದೇ ಉಳಿದುಕೊಂಡವರಿಗೆ 'ಸಂಜೀವಿನಿ' ಕಾರ್ಯಕ್ರಮದ ಮೂಲಕ ಸೌಲಭ್ಯ ಕೊಡೋಣ. ಏಕೆಂದರೆ, ಈಗ ಶ್ರೀಮಂತರಿಗೆ ಮಾತ್ರ ಬಹಳ ಮಾರಕವಾದಂಥ ಕಾಯಿಲೆಗಳು ಬಂದರೆ ವಾಸಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಬಡವರಿಗೆ ವಾಸಿ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಅನೇಕ ಜನರು ಪಾಪ, ಆ ನೋವನ್ನು ಅನುಭವಿಸಿಕೊಂಡೇ ಸತ್ತುಹೋಗಿ ಬಿಡುತ್ತಾರೆ. ಆಸ್ಪತ್ರೆಗೆ ಏಕೆ ಹೋಗುವುದು, ದುಡ್ಡಿಲ್ಲ, ಕಾಸಿಲ್ಲ ಎಂದು ಹೇಳಿ ಅನುಭವಿಸಿ ಕಷ್ಟದಲ್ಲಿ ಸಾಯುತ್ತಾರೆ. ಅದಕ್ಕೋಸ್ಕರ, ಅವರನ್ನು ಕವರ್ ಮಾಡಬೇಕೆಂದು ಈಗ ನಾವು 'ಹೆಲ್ತ್ ಫಂಡ್' ಎಂದು ಕ್ರಿಯೇಟ್ ಮಾಡಿದ್ದೇವೆ. ಅದರಲ್ಲಿ ಹಿಂದಿನ ವರ್ಷದ ಸ್ವಲ್ಪ ದುಡ್ಡು ಉಳಿಕೆಯಿತ್ತು. ಅದಕ್ಕೆ ಇನ್ನೊಂದಷ್ಟು ದುಡ್ಡು ಹಾಕಿ 50 ಕೋಟಿ ರೂಪಾಯಿ ಮಾಡಿದ್ದು, ಈ ಕಾರ್ಯಕ್ರಮವನ್ನು ಮುಂದುವರೆಸುವಂಥಾದ್ದನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ನಿಮಗೆ ಹೇಗೆ ದುಡ್ಡು ಬಂತು? ನೀವು ಮಾಯಾ ಮಂತ್ರ ಮಾಡಿದಿರಾ ಎಂದು ಕೇಳಿದ್ದಾರೆ. 2003–04ರಲ್ಲಿ ಶೇಕಡಾ 18 ರಷ್ಟಿದ್ದ ನಾನ್–ಡೆವೆಲಪ್‌ಮೆಂಟಲ್ ಎಕ್ಸ್‌ಪೆಂಡಿಚರನ್ನು ಹತ್ತು ಪರ್ಸೆಂಟ್‌ಗೆ ಇಳಿಸಬೇಕು ಎನ್ನುವ ಪ್ರಯತ್ನ ಮಾಡಿದ್ದೇವೆ. ಎರಡನೆಯದು, ತೆರಿಗೆಯ ದರಗಳನ್ನು ಕಡಿಮೆ ಮಾಡಿರತಕ್ಕಂಥಾದ್ದು, ಸೋರಿ ಹೋಗುವುದನ್ನು ತಪ್ಪಿಸತಕ್ಕಂಥಾದ್ದು, ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡತಕ್ಕಂಥಾದ್ದನ್ನು ಮಾಡಿದ್ದೇವೆ. ಸಾರಾಯಿ ಪಾಲಿಸಿ ಮಾಡಿದ್ದರಿಂದ, ನಮಗೆ ಇದರಿಂದ ಹೆಚ್ಚು ಆದಾಯ ಬರುತ್ತದೆ. ಈಗ ಮಂತ್ರಿಗಳ ಸಂಖ್ಯೆ ಕಡಿಮೆಯಾಗಿದೆ. 34 ಜನ ಮಂತ್ರಿಗಳಿಗಿಂತ ಜಾಸ್ತಿ ಇರಬಾರದು ಎಂದು ಇದೆ. ಕೆಲವು ಇಲಾಖೆಗಳನ್ನು ಅನಾವಶ್ಯಕವಾಗಿ ಮಾಡಿ ಅವುಗಳಿಗೆ ಒಬ್ಬರು ಸೆಕ್ರೆಟರಿ, ಹೆಡ್–ಆಫ್ ದಿ ಡಿಪಾರ್ಟ್‌ಮೆಂಟ್ ಮಾಡುವುದು ಇವುಗಳೆಲ್ಲಾ ಇದ್ದವು. ಇಂಥವುಗಳನ್ನೆಲ್ಲಾ ಮರ್ಜ್ ಮಾಡಬೇಕೆಂದು ಮಾಡಿದ್ದೇವೆ. ಎಷ್ಟು ಇಲಾಖೆಗಳ ಅಗತ್ಯವಿದೆ, ಅಷ್ಟನ್ನು ಮಾತ್ರ ಇಟ್ಟುಕೊಳ್ಳಬೇಕೆಂದು ಮಾಡಿದ್ದೇವೆ. ಒಂದು, ನಾನ್–ಡೆವೆಲಪ್‌ಮೆಂಟಲ್ ಎಕ್ಸ್‌ಪೆಂಡಿಚರನ್ನು ಕಟ್–ಡೌನ್ ಮಾಡುವುದು, ಇನ್ನೊಂದು ಕಡೆ ರಿಸೋರ್ಸ್‌ಸನ್ನು ಹೆಚ್ಚು ಮಾಡತಕ್ಕಂಥ ಪ್ರಯತ್ನ ಮಾಡುವುದು, ಬಿಗಿ ಕ್ರಮಗಳಿಂದ ಆದಾಯ ಸೋರಿಹೋಗುವುದನ್ನು ತಪ್ಪಿಸುವುದು, ಈ ಎಲ್ಲಾ ಕ್ರಮಗಳಿಂದ ನಾವು ಈ ಸಾರಿ ಸರ್ಪ್ಲಸ್

ಮಾಡಬೇಕೆಂದಿದ್ದೇವೆ. ಈ ಸರ್ಪ್ಲಸ್ ಒಂದು ಕೋಟಿ ರೂ: ಚಿಲ್ಲರೆಯಾದರೂ ಇರಲಿ, ಎಷ್ಟಾದರೂ ಇರಲಿ, ರೆವಿನ್ಯೂ ಡಿಫಿಸಿಟ್ಟಿನಿಂದ ಹೊರಗಡೆ ಬರತಕ್ಕಂಥ ಪ್ರಯತ್ನವನ್ನು ಈ ಸಾರಿ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನೊಂದು ವಿಷಯವೆಂದರೆ, debt swap ಗೆ ಅವಕಾಶವಿದೆ. ಅಂದರೆ, ಹಿಂದೆ ಹೆಚ್ಚು ರೇಟಿನಲ್ಲಿ ಸಾಲ ತೆಗೆದುಕೊಂಡು ಬಿಟ್ಟಿದ್ದೆವು. 15–16 ಪರ್ಸೆಂಟಿನ ಮೇಲೆ ಸಾಲ ತೆಗೆದುಕೊಂಡು ಬಿಟ್ಟಿದ್ದೇವೆ. ಆದರೆ, ಈಗ ಆರೂವರೆ, ಏಳು ಪರ್ಸೆಂಟಿಗೆಲ್ಲಾ ಸಾಲ ಸಿಗುತ್ತದೆ. ಈಗ ಹೊಸದಾಗಿ ಸಾಲ ತೆಗೆದುಕೊಂಡು, ಹೆಚ್ಚು ಬಡ್ಡಿ ಕೊಡತಕ್ಕಂಥ ಸಾಲವನ್ನು ತೀರಿಸಿಬಿಡುವುದು, ಇದರಲ್ಲಿ ನಮಗೆ ಬಡ್ಡಿ ಹಣ ಉಳಿತಾಯವಾಗುತ್ತದೆ. ಹಿಂದೆ 16 ಪರ್ಸೆಂಟ್ ಇದ್ದರೆ ಈಗ 9 ಪರ್ಸೆಂಟ್ ಕಡಿಮೆಯಾಗುತ್ತದೆ. It is not a small amount. ಇದರಲ್ಲಿ ಉಳಿತಾಯ ಮಾಡತಕ್ಕಂಥಾದ್ದಕ್ಕೆ ಕೂಡ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸಿ.ಎಂ. ಉದಾಸಿ : ಸಾಲ ತೀರಿಸುವ ಸಲುವಾಗಿ, ಮತ್ತೊಂದು ಕಡೆ ಸಾಲ ತೆಗೆದುಕೊಳ್ಳುವುದು ಸರಿಯಾಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಉದಾಸಿಯವರೇ, ಸ್ವಲ್ಪ ಹೇಳಿ. ಕರ್ನಾಟಕ ನೀರಾವರಿ ನಿಗಮದಲ್ಲಿ, ಕೃಷ್ಣಾ ಜಲ ಭಾಗ್ಯ ನಿಗಮದಲ್ಲಿ 16 ಪರ್ಸೆಂಟ್‌ನಲ್ಲಿ ಸಾಲ ತೆಗೆದುಕೊಂಡಿದ್ದೇವೆ, ಯೋಜನೆಗೆ ಎಂದು ಇಟ್ಟುಕೊಳ್ಳಿ. ಅದನ್ನು ಇನ್ನೂ ತೀರಿಸಿಲ್ಲ, ಅದು ಉಳಿದುಕೊಂಡಿದೆ. ಅದು ಈಗ ಸುಮಾರು ಏಳು ಸಾವಿರ ಚಿಲ್ಲರೆ ಕೋಟಿ ರೂ. ಬಾಕಿ ಇದೆ. ಈಗಿನ ರೇಖೆಗಿಂತ ಯಾವುದು ಜಾಸ್ತಿ ಇದೆ, ಅದಕ್ಕೆ ಈಗ ಸಾಲವನ್ನು ತೆಗೆದುಕೊಂಡು ತೀರಿಸಿಬಿಟ್ಟರೆ ರೇಟ್ ಆಫ್ ಇಂಟರೆಸ್ಟ್ ಕಡಿಮೆಯಾಗುವುದಿಲ್ಲವೇ? ಇದು ಕಾಮನ್ ಸೆನ್ಸ್ ಎಷ್ಟೊಂದು ಬುದ್ಧಿವಂತರು ನೀವು. ಹೀಗೆ ಮಾತನಾಡಿದರೆ ಹೇಗೆ? ನೀವು ಭತ್ತದ ವ್ಯಾಪಾರವನ್ನು ಎಷ್ಟೊಂದು ಮಾಡಿದ್ದೀರಿ. ನೀವೇ ಹೀಗಾದರೆ ಹೇಗೆ? ಇದನ್ನೇ debt swapping ಎಂದು ಕರೆಯುವುದು. Debt swapping ಎಂದರೆ ಇಂಟರೆಸ್ಟ್ ಬರ್ಡನನ್ನು ಕಡಿಮೆ ಮಾಡಿಕೊಳ್ಳುವುದು. ಸಾಲ ಅಲ್ಲಿಯೇ ಇರುತ್ತದೆ. ಅದು ಹೊಸ ಸಾಲ ಏನೂ ಅಲ್ಲ, debt swapping. ಅದು add ಆಗುವುದಿಲ್ಲ. ಬಡ್ಡಿ ಕಡಿಮೆಯಾಗುತ್ತದೆ. ಈಗ 100 ರೂಪಾಯಿಯನ್ನು 16 ಪರ್ಸೆಂಟ್‌ಗೆ ತೆಗೆದುಕೊಂಡಿದ್ದೇವೆಂದು ಇಟ್ಟುಕೊಳ್ಳೋಣ. ಇನ್ನೊಬ್ಬರಿಂದ 100 ರೂಪಾಯಿಯನ್ನು 6 ಪರ್ಸೆಂಟ್‌ಗೆ ತೆಗೆದುಕೊಳ್ಳುವುದು. 16 ಪರ್ಸೆಂಟ್‌ಗೆ ಯಾರಿಂದ 100 ರೂಪಾಯಿ ತೆಗೆದುಕೊಂಡಿದ್ದೇವೋ ಅದನ್ನು 6 ಪರ್ಸೆಂಟ್ ಬಡ್ಡಿಗೆ ತೆಗೆದುಕೊಂಡ ಹಣವನ್ನು ಕೊಟ್ಟು ತೀರಿಸಿಬಿಡುವುದು. ಆದರೆ 6 ಪರ್ಸೆಂಟ್ ಬಡ್ಡಿಗೆ ಯಾರ ಹತ್ತಿರ 100 ರೂಪಾಯಿಯನ್ನು ತೆಗೆದುಕೊಂಡಿದ್ದೆವೋ ಅದು ಹಾಗೆಯೇ ಉಳಿದುಕೊಳ್ಳುತ್ತದೆ. ಅಂದರೆ ಆ ಹಣ ಹಾಗೆಯೇ ಉಳಿದುಕೊಳ್ಳುತ್ತದೆ. ಹೊಸದಾಗಿ ಸಾಲ ಏನೂ ಇಲ್ಲ. ಒಟ್ಟಿನಲ್ಲಿ debt swapping ಎಂದರೆ ಇದು adjustment. Rate of interest ಕಡಿಮೆ ಮಾಡಿಕೊಳ್ಳತಕ್ಕಂಥದ್ದು. ಇದರಿಂದ ಬಡ್ಡಿಯ ಭಾರ ಕಡಿಮೆ ಆಗುವುದಿಲ್ಲವೇ?

ಶ್ರೀ ಸಿ.ಎಂ. ಉದಾಸಿ : ಅದು ಸರಿ ಇದೆ.

ಶ್ರೀ ಸಿದ್ಧರಾಮಯ್ಯ : ಅದನ್ನೇ ನಾನು ನಿಮಗೆ ಹೇಳುತ್ತಿರುವುದು. ಇದರಲ್ಲಿ ನಿಮಗೆ confusion ಏಕೆ? ಆದ್ದರಿಂದ debt swapping ಮಾಡತಕ್ಕಂಥದ್ದನ್ನೂ ಕೂಡ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಮರದ ದಿಮ್ಮಿಗಳ ಮೇಲೆ ಅವೈಜ್ಞಾನಿಕವಾಗಿ ಹಾಕಿದಂಥ ಟ್ಯಾಕ್ಸ್ ಏನಿದೆ ಅದನ್ನು ಕಡಿಮೆ ಮಾಡಬೇಕು.

ಶ್ರೀ ಸಿದ್ಧರಾಮಯ್ಯ : ಅದನ್ನು ಕಡಿಮೆ ಮಾಡುತ್ತೇವೆ. ಅದರ ಬಗ್ಗೆ ಮೀಟಿಂಗ್ ಕರೆದಿದ್ದೆ. ಈ ಬಜೆಟ್ busy ಇದ್ದುದ್ದರಿಂದ ಅದನ್ನು ಮುಂದಕ್ಕೆ ಹಾಕಿದ್ದೇನೆ. ಆ Forest Department ನವರನ್ನು Finance Department ನವರನ್ನು ಕರೆದು ಏನು ರೇಟ್ ಜಾಸ್ತಿ ಆಗಿದೆ ಅದನ್ನು ಕಡಿಮೆ ಮಾಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಗೋಧಿ ಹಿಟ್ಟು, ರವೆಗೆ ಟ್ಯಾಕ್ಸ್ ಹಾಕಿದ್ದನ್ನು ಕಡಿಮೆ ಮಾಡಬೇಕು. ಬಡವರ ಚಿಂತನೆ ಮಾಡಬೇಕಲ್ಲವೇ?

ಶ್ರೀ ಸಿದ್ಧರಾಮಯ್ಯ : ಅದು ಎರಡು ಪರ್ಸೆಂಟ್ ಇತ್ತು, ಅದು 4 ಪರ್ಸೆಂಟ್ ಆಗಿದೆ. 1 ಪರ್ಸೆಂಟ್‌ಗೆ ಬೇಡ ಎಂದು 4 ಪರ್ಸೆಂಟ್ ಮಾಡಿದ್ದೇನೆ. ಎಲ್ಲರ ಚಿಂತನೆ ಮಾಡುವಾಗ ಏನು ಮಾಡುವುದು ಒಂದೊಂದು ಸಲ ಹೆಚ್ಚುಕಡಿಮೆಯಾಗುತ್ತದೆ. ಇನ್ನು ಮಾನ್ಯ ಸದಸ್ಯರುಗಳೆಲ್ಲಾ ನಮಗೆ ಶಾಸಕರ ನಿಧಿ ಎಂದು ಹಣ ಕೊಡಬೇಕೆಂದು ಹೇಳಿದರು. ನಾನು ಇವತ್ತು ಪ್ರಾಮಾಣಿಕವಾಗಿ ಏನು ಹೇಳುತ್ತೇನೆಂದರೆ, ಈ ಸಾರಿ ಇದನ್ನು ಮಾಡುವುದಕ್ಕಾಗುವುದಿಲ್ಲ. ಮುಂದಿನ ಆಯವ್ಯಯದಲ್ಲಿ ಇದನ್ನು ಪರಿಗಣಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ. ಈ ಸಾರಿ 150 ಕೋಟಿ ರೂಪಾಯಿ...

ಗೊಂದಲ

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಎಲ್ಲಾ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂಥ ಆಕ್ಷೇಪಣೆಗಳೇನಿವೆ, ಅದಕ್ಕೆ ನಾನು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದೇನೆ. ಯಾವುದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಅದನ್ನು ನಾನು ಒಪ್ಪಿಕೊಂಡಿದ್ದೇನೆ, ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಯಾವುದನ್ನು ಮಾಡುವುದಕ್ಕೆ ಆಗುವುದಿಲ್ಲವೋ ಅದನ್ನು ಆಗುವುದಿಲ್ಲ ಎಂದು ಹೇಳಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರುಗಳೆಲ್ಲಾ ಸಹಕಾರ ಕೊಡಬೇಕೆನ್ನತಕ್ಕಂಥ ಮಾತನ್ನು ಹೇಳಿ, ಈ ಆಯವ್ಯಯವನ್ನು ಮಾನ್ಯ ಸದಸ್ಯರು ಮಂಜೂರು ಮಾಡಿಕೊಡಬೇಕೆಂದು ಎಲ್ಲರಲ್ಲಿ ನಾನು ಮನವಿ ಮಾಡಿ, ನಿಮಗೆ ವಂದನೆಗಳನ್ನು ಸಲ್ಲಿಸಿ ಇವರಿಗೆಲ್ಲ ವಂದನೆ ಸಲ್ಲಿಸಿ ನನ್ನ ಉತ್ತರವನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿದ್ದುಕೊಂಡೇ ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಬಜೆಟ್ ಬಗ್ಗೆ ಸುಮಾರು 40 ಜನ ಸದಸ್ಯರು ಮಾನ್ಯ ಹಣಕಾಸಿನ ಸಚಿವರು ಹೇಳಿದಂತೆ ಮಾತನಾಡಿದರು. ನಾವು ಹೇಳಿದಂಥ ವಿಷಯಗಳಿಗೆ ಸರ್ಕಾರದ ಕಡೆಯಿಂದ ಸಮರ್ಪಕವಾದ ಉತ್ತರದ ನಿರೀಕ್ಷೆ ಮಾಡಿದ್ದೆವು. ಇನ್ನೊಂದು ಬಜೆಟ್ ಭಾಷಣವನ್ನೇ ಅವರು ಮಾಡಿದರು. ಅವರು ಮಾಡಲಿ ಅದು ಅವರಿಗೆ ಬಿಟ್ಟದ್ದು. ಇಲ್ಲಿರುವ ಪ್ರಶ್ನೆ ಏನೆಂದರೆ, ಚುನಾವಣೆ ಸಮಯದಲ್ಲಿ ಈ ರಾಜ್ಯದ ಜನತೆಗೆ, ಈ ರಾಜ್ಯದ ನೇಕಾರರಿಗೆ ಈ ರಾಜ್ಯದ ರೈತರ ಮಕ್ಕಳು ನಿರುದ್ಯೋಗಿ ಯುವಕರಿಗೆ ಅನೇಕ ಭರವಸೆಯನ್ನು ಕೊಟ್ಟರು. ಚುನಾವಣೆ ಪ್ರಚಾರದಲ್ಲಿ ಸಾಲದ ಮೇಲಿನ ಸಂಪೂರ್ಣ ಬಡ್ಡಿ ಮನ್ನಾ ಮಾಡುತ್ತೇವೆಂದು ತಾವು ಹೇಳಿದ್ದಿರಿ. ಸಂಪೂರ್ಣ ನೇಕಾರರ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದಿರಿ. ನಿರುದ್ಯೋಗಿ ಯುವಕರಿಗೆ 500 ರೂಪಾಯಿಗಳ ಭತ್ಯೆ ಕೊಡುತ್ತೇವೆಂದು ಹೇಳಿದ್ದಿರಿ. ಇದಕ್ಕೆ ಯಾವುದಕ್ಕೂ ಸಹ ತಾವು ಸಮರ್ಪಕವಾದ ಉತ್ತರವನ್ನು ಕೊಡುವುದರ ಬದಲು ಅದರಿಂದ ನುಣುಚಿಕೊಳ್ಳುವಂಥ ಪ್ರಯತ್ನವನ್ನು ಮಾಡಿದಿರಿ. ಎರಡನೆಯದು ಏನೆಂದರೆ, ಇವತ್ತು ಶ್ರೀ ವಾಟಾಳ್ ನಾಗರಾಜ್‌ರವರು

ಧರಣಿ ಕುಳಿತರು. ಈ ಮನೆಯಲ್ಲಿರುವಂಥ ಎಲ್ಲರ ಮನಸ್ಸಿನಲ್ಲಿರುವಂಥದ್ದನ್ನು ನಾನು ಭಾಷಣ ಪ್ರಾರಂಭ ಮಾಡಿ ಮಾತನಾಡಬೇಕಾದರೆ ಒಂದು ಮಾತನ್ನು ಹೇಳಿದೆ, ಅದೇನೆಂದರೆ – 'ಈ 224 ಶಾಸಕರು ಯಾರೇ ನಮ್ಮ ಕ್ಷೇತ್ರಕ್ಕೆ ಹೋದರೂ ಸಹ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ನಿಧಿ ಎಂದು ಹಣ ತೆಗೆದುಕೊಂಡು ಹೋಗದೇ ಇದ್ದರೆ ನಾವು ಗೌರವದಿಂದ ನಮ್ಮ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಆಗದೇ ಇರುವಂಥ ಉಸಿರು ಕಟ್ಟುವಂಥ ಪರಿಸ್ಥಿತಿ ಇದೆ. ಕಳೆದ ಐದು ತಿಂಗಳಿಂದ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ. ಆ ಐದು ತಿಂಗಳಿನಲ್ಲಿ ಆಗಬೇಕಾಗಿದ್ದಂಥ ಖರ್ಚುವೆಚ್ಚಗಳೆಲ್ಲ ಸರ್ಕಾರದಲ್ಲಿ ಹಾಗೆಯೇ ಉಳಿದುಕೊಂಡಿದೆ. ಈ ನಿಧಿ ಕೊಡುವುದರಿಂದ ನಾವು ನಮ್ಮ ಕ್ಷೇತ್ರದಲ್ಲಿ ಸ್ವಲ್ಪ ಕೆಲಸ ಮಾಡಬಹುದೆನ್ನುವಂಥ ಒತ್ತಾಯವನ್ನು ತಮ್ಮ ಮುಂದೆ ಮಾಡಿದೆವು. ಏಕೋ ಏನೋ ತಾವು ಯಾವುದಕ್ಕೂ ಸಹ ಸಮರ್ಪಕವಾದ ಉತ್ತರವನ್ನು ಕೊಡಲಿಲ್ಲ. ಈ ಬಜೆಟ್‌ಗೆ ಅನುಮೋದನೆ ಮಾಡಿಕೊಡುತ್ತೇವೆಂದು ಇವತ್ತು ಒಂದು ಭರವಸೆಯನ್ನು ನಾವು ನಿಮಗೆ ಕೊಟ್ಟಿದ್ದೆವು. ಕಂಠ ಶೋಷಣೆ ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ತಾವು ಬಹುಮತವಿದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಯಾವುದೇ ರೀತಿ ಉತ್ತರ ಕೊಟ್ಟರೆ ನಡೆಯುತ್ತದೆ ಎನ್ನುವಂಥ ರೀತಿಯಲ್ಲಿ ತಾವು ಉತ್ತರ ಕೊಡುವ ಪ್ರಯತ್ನ ಮಾಡಿ ಯಾವುದೇ ಒಂದು ಸಮೂಹಕ್ಕೆ ತಾವು ನ್ಯಾಯ ಒದಗಿಸಿಕೊಟ್ಟಿಲ್ಲ. ಎರಡು ಎಕರೆ ಜಾಗ ಇಟ್ಟುಕೊಂಡು ಬರಗಾಲಕ್ಕೆ ತುತ್ತಾದ ರೈತ ಒಂದು ಪಂಪುಸೆಟ್ಟಿಗೆ ವಿದ್ಯುತ್ ಅಳವಡಿಸಿಕೊಳ್ಳಬೇಕೆಂದರೆ own your I.P. set ಎನ್ನುವುದಕ್ಕೆ ಸುಮಾರು 25 ಸಾವಿರ ಎಂದರೆ ಅದೆಲ್ಲಾ ಸೇರಿ ರೂ. 45 ಸಾವಿರ ಖರ್ಚಾಗುತ್ತದೆ. ಎರಡು ಎಕರೆ ಕೃಷಿ ಭೂಮಿಗೆ ಇವತ್ತಿನ ದಿವಸ 50 ಸಾವಿರ ರೂಪಾಯಿಗಳ ಬೆಲೆ ಇಲ್ಲ. ಇಂಥದ್ದಕ್ಕೆ ಯಾವುದೇ ರೀತಿಯ concession ಕೊಡದೆಯೇ ಇವತ್ತು ನಾವು ಬಜೆಟ್‌ನಲ್ಲಿ ಉತ್ತರ ಕೊಟ್ಟಿದ್ದೇವೆ, ರೈತರ ಉದ್ಧಾರ ಮಾಡಿದ್ದೇವೆ ಎಂದು ಹೇಳಿದಂಥ ಮಾತು, ಮತ್ತು ಇದು ಯಾರನ್ನೂ ಒಪ್ಪಿಸುವುದಕ್ಕೆ ಆಗದಿರುವಂಥ ಒಂದು ರೀತಿ ನೀವು ಕೊಟ್ಟಂಥ ಭರವಸೆ ಈಡೇರಿಸದೆಯೇ ಈ ನಾಡಿನ ಜನತೆಗೆ ದ್ರೋಹ ಮಾಡಿದ್ದೀರಾ. ನಾವು ಯಾವುದೇ ಕ್ಲಾರಿಫಿಕೇಷನ್ ಕೇಳುವುದಿಲ್ಲ. ಇದನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡುತ್ತೇವೆ. ನೀವು ನಡೆಸಿ ಪರವಾಗಿಲ್ಲ, ಆದರೆ ಜನತೆಗೆ ಮಾತ್ರ ನೀವು ದ್ರೋಹ ಮಾಡಿದ್ದೀರಿ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳೆಲ್ಲ ಸದನದಿಂದ ವಾಕ್‌ಔಟ್ ಮಾಡಿದರು)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರು ಇದನ್ನು ಪ್ರಚಾರಕ್ಕೆ ಮಾಡಿರತಕ್ಕಂಥದ್ದು. ಪ್ರಚಾರ ಬಿಟ್ಟು ಇನ್ನು ಬೇರೆ ಏನೂ ಉದ್ದೇಶ ಇವರಿಗಿಲ್ಲ. ಈ ಬಜೆಟ್ ಎಲ್ಲರಿಗೆ ಒಪ್ಪಿಗೆಯಾಗಿರುವುದು ಇವರಿಗೆ ಸಹಿಸಲಿಕ್ಕಾಗಲಿಲ್ಲವೆಂದು ಈ ರೀತಿ ಮಾಡುತ್ತಿದ್ದಾರೆ. ಇವರ ಮಾತುಗಳಲ್ಲಿ ಯಾವುದೇ ಹುರುಳಿಲ್ಲ. ನಾವು ಐದು ವರ್ಷದ ಕಾರ್ಯಕ್ರಮಗಳನ್ನು ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ರೂಪಿಸಿದ್ದೇವೆ. ಆದ್ದರಿಂದ ಇವೆಲ್ಲವನ್ನೂ ಒಂದೇ ವರ್ಷದಲ್ಲಿ ಮಾಡುತ್ತೇವೆಂದು ನಾವು ಯಾರಿಗೂ ಭರವಸೆ ಕೊಟ್ಟಿಲ್ಲ. ಐದು ವರ್ಷಗಳ ಕನಿಷ್ಟ ಕಾರ್ಯಕ್ರಮದಲ್ಲಿ ನಾವು ಏನು ಹೇಳಿದ್ದೇವೆಂದರೆ, ರೈತರ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವ ಕಾರ್ಯಕ್ರಮ ಇರಬಹುದು, ಒಂದನೆಯದು, ಇದು ರೈತರ ಪರವಾದ ಬಜೆಟ್, ಬಡವರ ಪರವಾದ ಬಜೆಟ್ ಇಂಥ ಒಳ್ಳೆಯ ಬಜೆಟ್‌ನ್ನು ಮಂಡಿಸಿದರು ಎನ್ನುವ ಹೊಟ್ಟೆಕಿಚ್ಚಿನಿಂದ, ಇವರಿಗೆ ಏನೂ ಹೇಳುವುದಕ್ಕೆ ಸಿಕ್ಕದೇ ಹೋಯಿತಲ್ಲಾ ಅದಕ್ಕೆ ಈ ತರಹ ಒಂದು ಪುಟ್ಟ ನೆಪ ಮಾಡಿಕೊಂಡು ವಾಕ್‌ಔಟ್ ಮಾಡುತ್ತಿದ್ದಾರೆ, ಇನ್ನೊಂದು, ಇವರು ಪ್ರಚಾರದ

ದೃಷ್ಟಿಯಿಂದ ವಾಕ್‌ಔಟ್ ಮಾಡುತ್ತಿದ್ದಾರೆ. By and large ರಾಜ್ಯದ ಜನ ಈ ಬಜೆಟ್‌ನ್ನು ಸ್ವೀಕಾರ ಮಾಡಿದ್ದಾರೆ. ಇವರು ಏನು ಇವತ್ತು ಪ್ರಚಾರಕ್ಕೋಸ್ಕರ ಪ್ರತಿಭಟನೆ ಮಾಡುತ್ತಾರೆ, ಇವರ ಹುನ್ನಾರವನ್ನು ರಾಜ್ಯದ ಜನತೆ ಅರ್ಥಮಾಡಿಕೊಳ್ಳಬಲ್ಲರು, ಆದ್ದರಿಂದ ಇವರ ಹುನ್ನಾರ ಜನರ ಹತ್ತಿರ ಏನೂ ನಡೆಯುವುದಿಲ್ಲ. ಇದನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದಲೇ ಶಾಸಕರ ನಿಧಿ ಬಗ್ಗೆ ಹೇಳಿ ಎಂದು ಕೇಳಿದರು)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, 2001–2002 ರಿಂದ 25 ಲಕ್ಷ ರೂಪಾಯಿಗಳನ್ನು ಶಾಸಕರ ನಿಧಿಗೆಂದು ಕೊಡುವಂಥದ್ದು ಪ್ರಾರಂಭವಾಯಿತು. ನೀವು ಎಂಎಲ್‌ಎ ಆಗಿರುವಾಗ ಇದು ಇರಲಿಲ್ಲ. ಆ 25 ಲಕ್ಷ ರೂಪಾಯಿಗಳನ್ನು ಒಂದು ವರ್ಷ ಕೊಟ್ಟರು. ಎರಡನೇ ವರ್ಷ ಬರಗಾಲ ಬಂತು ಎಂದು 10 ಲಕ್ಷ ರೂಪಾಯಿಗಳನ್ನು ಕೊಟ್ಟು ಬಾಕಿ ಕೊಡಲಿಲ್ಲ. ಕಳೆದ ವರ್ಷ ಆ ಕಾರ್ಯಕ್ರಮವನ್ನೇ ಕೈಬಿಟ್ಟರು. ಆದ್ದರಿಂದ ನಾನು ಈ ವರ್ಷ ಆ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ. ಇವತ್ತು ಏನು ಎಂಎಲ್‌ಎಗಳ ಅಭಿಪ್ರಾಯ ಇದೆ ಆ ಎಂಎಲ್‌ಎ ಗಳ ಅಭಿಪ್ರಾಯಕ್ಕೆ ಗೌರವ ಕೊಡಬೇಕೆನ್ನುವ ಕಾರಣಕ್ಕೋಸ್ಕರ ಇದನ್ನು ಗಂಭೀರವಾಗಿ ಪರಿಶೀಲಿಸಿ ಮುಂದೆ ಕೊಡುತ್ತೇವೆ.

(ಈ ಹಂತದಲ್ಲಿಯೂ ಸಹ ಸದನದ ಬಾವಿಯಿಂದಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿದ್ದರು)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರುಗಳ ಅಭಿಪ್ರಾಯಕ್ಕೆ ಗೌರವ ಕೊಡುತ್ತೇನೆ. ಹಣಕಾಸಿನ ಪರಿಸ್ಥಿತಿ ಬಗ್ಗೆ ನಾನು ಈಗ explain ಮಾಡಿದ್ದೇನೆ. ಮುಂದಿನ ಸಾರಿ ಅದನ್ನು ಕೊಡತಕ್ಕಂಥದ್ದಕ್ಕೆ ತೀರ್ಮಾನ ಮಾಡುತ್ತೇನೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಸಭಾತ್ಯಾಗ ಮಾಡಿದರು)

3.40 ಪಿ ಎಂ

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು 4 ಕ್ಲಾರಿಫಿಕೇಶನ್ ಕೇಳಬೇಕಾಗುತ್ತದೆ. ನಾವು ವೈಟ್–ಪೇಪರ್ ಬೇಕೆಂದು ತಮಗೆ ಡಿಮಾಂಡ್ ಮಾಡಿದ್ದೆವು. ತಾವು ಕಾಂಟ್ರಾಕ್ಟರ್‌ನಿಂದ ಹಿಡಿದು, ಷುಗರ್ ಫ್ಯಾಕ್ಟರಿಯಿಂದ ಹಿಡಿದು ಕೊಡಬೇಕಾಗಿರುವ ಪೆಂಡಿಂಗ್ ಬಿಲ್ ಎಷ್ಟಿದೆ? ಅದನ್ನು ಯಾವಾಗ ತೀರಿಸುತ್ತೀರಿ? ಪಿಡಬ್ಲ್ಯೂಡಿ, ಜಿಲ್ಲಾ ಪಂಚಾಯತ್‌ನಲ್ಲಿ ಇರಬಹುದು, ಇರಿಗೇಷನ್‌ನಲ್ಲಿರಬಹುದು, ನಾನು ತಿಳಿದ ಮಟ್ಟಿಗೆ ಬಹಳಷ್ಟು ಹಣವನ್ನು ತಾವು ಹೋದ ವರ್ಷ ಪಾವತಿ ಮಾಡಬೇಕಾಗಿತ್ತು, ಪಾವತಿಯಾಗಲಿಲ್ಲ. ಆ ಬಗ್ಗೆ ಏನಾದರೂ ವೈಟ್ ಪೇಪರ್ ಕೊಡುತ್ತೀರಾ ಎಂದು ಕೇಳಿದ್ದೆವು. ಅದಕ್ಕೆ ತಾವು ಏನೂ ಹೇಳಲಿಲ್ಲ. ಪೆಂಡಿಂಗ್ ಬಿಲ್ಸ್ ಎಷ್ಟಿವೆ? ಅದನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ? ಎಂಬುದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಪವರ್ ಟಿಲ್ಲರ್ ಮೇಲೆ ಮಾತನಾಡುವುದಕ್ಕೆ ಎದ್ದಿರಿ. ಸ್ವಲ್ಪ ಡೈವರ್ಟ್ ಆದಿರಿ. ಟ್ರಾಕ್ಟರ್ ಮೇಲೆ ಸೆಂಟ್ರಲ್ ಗೌರ್ನಮೆಂಟ್‌ನವರು ಎಕ್ಸೈಸ್ ಡ್ಯೂಟಿ ಕಟ್ ಮಾಡಿದ್ದಾರೆ. ತಾವೇನಾದರೂ ಸೇಲ್ಸ್ ಟ್ಯಾಕ್ಸ್ ತೆಗೆಯುತ್ತೀರಾ? ಟ್ರಾಕ್ಟರ್ ಬೆಲೆ 4 ಲಕ್ಷ ರೂ. ಇದೆ. ಅಗ್ರಿಕಲ್ಚರ್‌ಗೆಂದು ತೆಗೆದುಕೊಳ್ಳುವವರಿಗೆ ಟ್ರಾಕ್ಟರ್ ಮೇಲೆ ಸೇಲ್ಸ್ ಟ್ಯಾಕ್ಸ್ ಅನ್ನು ಕಡಿಮೆ ಮಾಡುತ್ತೀರಾ? ಮೂರನೆಯದಾಗಿ, ಥಿಯೇಟರ್ ಮೇಲೆ ಸರ್ವಿಸ್ ಚಾರ್ಜ್ ಇತ್ತು, ಅದನ್ನು ವಾಪಸ್ಸು ತೆಗೆದುಕೊಂಡಿದ್ದೇನೆಂದು ಬಡ್ಜೆಟ್‌ನಲ್ಲಿ ಹೇಳಿದ್ದೀರಿ. ಸರ್ವಿಸ್ ಚಾರ್ಜ್ ಓನರ್ಸ್‌ಗೆ

ಹೋಗಬೇಕಾಗಿತ್ತು. ಅದನ್ನು ವಾಪಸ್ಸು ತೆಗೆದುಕೊಂಡಿರಿ. ಅದು ಗ್ರಾಮೀಣ ಪ್ರದೇಶದಲ್ಲಿ ಇದೆ. ಅದು ಸೂಕ್ತವಾದರೂ, ಪಟ್ಟಣ ಪ್ರದೇಶದಲ್ಲಿ ಒಂದು ಟಿಕೆಟ್‌ಗೆ 25 ರೂ.ಗಿಂತ ಜಾಸ್ತಿ ಧಾರಣೆ ಕೊಡುವುದರಲ್ಲಿ ನೀವೇನಾದರೂ ಸರ್ವಿಸ್ ಚಾರ್ಜ್ ಇಂಟ್ರಡ್ಯೂಸ್ ಮಾಡದೇ ಹೋದರೆ, ಥಿಯೇಟರ್ ಮೇನ್‌ಟೇನ್ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು, ಅದನ್ನು ರೀ-ಕನ್‌ಸಿಡರ್ ಮಾಡಬೇಕು. 4ನೇಯದಾಗಿ, ತಾವು ಕುರಿ ಮತ್ತು ಕುರಿ ಉತ್ಪನ್ನ ಮಂಡಳಿಗೆ 300 ಕೋಟಿ ರೂ. ನಿಧಿ ಕೊಟ್ಟು, ಅದನ್ನು ರೀ-ಜನರೇಟ್ ಮಾಡುತ್ತೇವೆಂದಿದ್ದೀರಿ. ಕಾಯರ್ ಫೆಡರೇಷನ್ ಮತ್ತು ಕಾಯರ್ ಬೋರ್ಡ್ ಅದಕ್ಕಿಂತ ಹೀನ ಸ್ಥಿತಿಯಲ್ಲಿದೆ. ಆ ಕಡೆ ಗಮನ ಕೊಡುತ್ತೀರಾ?. 5ನೇಯದಾಗಿ, ಈ ರಾಜ್ಯದಲ್ಲಿ ನೀರಾ ಇಂಟ್ರಡ್ಯೂಸ್ ಆಯಿತು. ನೀರಾವನ್ನು ಶಾಸನಬದ್ಧವಾಗಿ ಮಾಡಿದರು. ಅವತ್ತು ಹೋರಾಟ ಮಾಡಿದವರ ಮೇಲೆ ಕೇಸ್ ಹಾಕಿದ್ದರು. ನೀರಾವನ್ನು ಉಪಯೋಗಿಸಿಕೊಂಡು, ಏನಾದರೂ ರೆಕ್ಟಿಫೈಡ್ ಸ್ಪಿರಿಟ್ ಮಾಡುವುದಕ್ಕಾಗುತ್ತದೆಯೇ ಎಂದು ಉತ್ತರಿಸಬೇಕು. ಡೀಸೆಲ್ ಮೇಲೆ ಬೆಲೆ ಜಾಸ್ತಿ ಮಾಡಿದ್ದೀರಿ. ಅಪರೋಕ್ಷವಾಗಿ ಕಡಿಮೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ಬೆಸ್ತರಿಗೆ, ಮೀನುಗಾರರಿಗೆ ಕೊಟ್ಟಂತೆ, ರೈತರಿಗೆ, ಹೊಲ ಉಳುವವರಿಗೆ ಏನಾದರೂ ಡೀಸೆಲ್ ಮೇಲೆ ಸಬ್ಸಿಡೈಸ್ ಮಾಡಿ ಕೊಡುವುದಕ್ಕಾಗುತ್ತದೆಯೇ ಎಂದು ಉತ್ತರಿಸಬೇಕು. ಷುಗರ್ ಫ್ಯಾಕ್ಟರಿಗಳನ್ನು ಮುಚ್ಚಲು ಶುರು ಮಾಡಿದ್ದಾರೆ. 10-12 ಷುಗರ್ ಫ್ಯಾಕ್ಟರಿಗಳು ಕ್ಲೋಜರ್‌ಗೆ ಬಂದಿವೆ. ಬಾಕಿ ಪಾವತಿ ಮಾಡುವುದಿತ್ತು. ಅದಕ್ಕೇನಾದರೂ ರೇಟ್ ಅನ್ನು 1 ಸಾವಿರ ಅಥವಾ 1,200 ರೂಪಾಯಿ ಫಿಕ್ಸ್ ಮಾಡುವುದಕ್ಕೆ ಕನ್‌ಸಿಡರ್ ಮಾಡುವುದಕ್ಕಾಗುತ್ತದೆಯೇ? 400 ರೂಪಾಯಿಗಳನ್ನು ಒಂದು ದಿವಸಕ್ಕೆ ಏನು ಬಾಡಿಗೆ ತೆಗೆದುಕೊಳ್ಳುವಂಥ ಲಾಡ್ಜ್‌ಗಳ ಪ್ರತಿದಿನ ಬಾಡಿಗೆಯ ತೆರಿಗೆ ವಿನಾಯಿತಿ ಮಿತಿಯನ್ನು 150 ರೂ.ಗೆ ಇಳಿಸಿದ್ದೇವೆಂದು ಹೇಳಿದ್ದೀರಿ. ಮೊಫ್ಯುಸಿಲ್ ಟೌನ್‌ನಲ್ಲಿ ಹಾಕಿರುವ ಟ್ಯಾಕ್ಸ್ ಅನ್ನು ತೆಗೆಯುತ್ತೀರಾ? ಚಿಕ್ಕ ಚಿಕ್ಕ ಪಟ್ಟಣಗಳಲ್ಲಿ 100,150 ರೂ. ಒಂದು ದಿವಸಕ್ಕೆ ಬಾಡಿಗೆ ತೆಗೆದುಕೊಳ್ಳುತ್ತಾರೆ. ಅವರಿಗೆ ಟ್ಯಾಕ್ಸ್ ಹಾಕುವ ಸ್ಥಿತಿಗೆ ನೀವು ಹೋಗಿದ್ದು ಅಷ್ಟೊಂದು ಸಮಂಜಸವಾಗಿ ಕಾಣಿಸುವುದಿಲ್ಲ. ಇನ್ನೊಂದು ಪ್ರಮುಖವಾದ ಪ್ರಶ್ನೆಯನ್ನು ನಾನು ಕೇಳಿದ್ದೆ. ತಾಲ್ಲೂಕು ಪಂಚಾಯತ್‌ನಲ್ಲಿದ್ದ ಅಮೌಂಟ್ ಅನ್ನು ತಾವು ಮಾರ್ಚ್ ಎಂಡ್‌ನಲ್ಲಿ ಈ ಕಡೆ ತೆಗೆದುಕೊಂಡಿದ್ದೀರಿ. ಸುಮಾರಷ್ಟು ಹಣವನ್ನು ಡೆವಲಪ್‌ಮೆಂಟ್‌ಗೆ ಕೊಡಬೇಕಾಗಿತ್ತು. ಎಲೆಕ್ಷನ್ ಕಾಲದಲ್ಲಿ ಸರ್ಕಾರ ಅದನ್ನು ವಿಥ್‌ಡ್ರಾ ಮಾಡಿದೆ. ತಾವು ಅದನ್ನು ರೆವಿನ್ಯೂಗೆ ಆಡ್ ಮಾಡಿಕೊಂಡಿಲ್ಲವೆಂದರೆ, ಆ ಹಣವನ್ನು ವಾಪಸ್ಸು ಕೊಡುತ್ತೀರಾ? ಅದರಲ್ಲಿ ನಮ್ಮ ಸ್ವಂತ ಹಣವಿತ್ತು. ನಾವು ತಾಲ್ಲೂಕು ಪಂಚಾಯತ್ ಮಳಿಗೆಗಳಿಂದ ಬಾಡಿಗೆ ತೆಗೆದುಕೊಂಡ ಹಣವಿತ್ತು. ಬೇರೆ ಹಣವೂ ಇತ್ತು. ಅದನ್ನು ವಾಪಸ್ಸು ಕೊಡುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಡೀಸೆಲ್ ಬಗ್ಗೆ ಹೇಳಿದ್ದಾರೆ. ಭಾಗ್ಯ ಜ್ಯೋತಿ ಮನೆಗಳಿಗೆ ಮೀಟರ್ ಫಿಕ್ಸ್ ಮಾಡಿ, ಕರೆಂಟ್ ಚಾರ್ಜ್ ಕೊಡಬೇಕೆಂದು ಹೇಳಿದ್ದೀರಿ. ದಯವಿಟ್ಟು ಅದನ್ನು ರದ್ದು ಮಾಡಬೇಕು. ಅದರ ಬಗ್ಗೆ ನಿಲ್ಲಿಸುತ್ತೇವೆಂಬ ಆಶ್ವಾಸನೆ ಕೊಡಬೇಕು. ಅವರು ಬಡವರು. ಅವರ ಮೇಲೆ ಬೀಳುತ್ತೀರಲ್ಲಾ. ಅವರಿಗೆ ಈಗಾಗಲೇ ಶಕ್ತಿ ಇಲ್ಲದ ಹಾಗಾಗಿದೆ. ಆಶ್ರಯ ಮನೆಗಳಿಗೆ ನಾನು ಮಾತನಾಡುವ ಸಂದರ್ಭದಲ್ಲಿ ಹೇಳಿದ್ದೆ, ಈಗ 20 ಸಾವಿರ ರೂ. ದಲ್ಲಿ ಮನೆ ಕಟ್ಟಲು ಸಾಧ್ಯವಾಗುವುದಿಲ್ಲ. ಅದನ್ನು 40-45 ಸಾವಿರ ರೂ. ಮಾಡಿ ಲೆಟ್ರಿನ್, ಬಾತ್ ರೂಂ ಕಟ್ಟಲು ವ್ಯವಸ್ಥೆಯಾಗುವ ರೀತಿಯಲ್ಲಿ ಆಶ್ರಯ ಮನೆಗಳ ರೇಟ್ ಅನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದೆ

ಈ ಬಗ್ಗೆ ಹೇಳಬೇಕು. ಆಶ್ರಯ ಮನೆಯದನ್ನು ರದ್ದು ಮಾಡಬೇಕು. ಇಲ್ಲವಾದರೆ ನಾನು ಧರಣಿ ಕೂರುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಮಾಧುಸ್ವಾಮಿ ಹಾಗೂ ಮಾಣ್ಯ ಶ್ರೀರಾಮರೆಡ್ಡಿಯವರೆ, ನಿಮ್ಮ ಸಲಹೆಗಳು ಒಪ್ಪುವುದಕ್ಕಾದರೂ ಕೂಡ, ಆಶ್ರಯ ಮನೆಗಳಿಗೆ ಖರ್ಚು ಮಾಡುವ 20 ಸಾವಿರ ರೂ.ಗಳನ್ನು ಜಾಸ್ತಿ ಮಾಡಬೇಕೆಂದಿದ್ದೀರಿ. ಅದನ್ನು ಪರಿಶೀಲನೆ ಮಾಡೋಣ. 95–96ರಲ್ಲಿ 15 ಸಾವಿರ ರೂ. ನಿಂದ ಮತ್ತೆ 5 ಸಾವಿರ ರೂ. ನಷ್ಟು ಹೆಚ್ಚು ಮಾಡಲಾಗಿದೆ. ಈಗ ಅದು 20 ಸಾವಿರ ರೂ. ಆಗಿದೆ. ಮುಂದೆ ಯಾವ ತರಹ ಹೆಚ್ಚು ಮಾಡಬೇಕೆಂದು ನೋಡೋಣ. ಅರ್ಬನ್‌ನಲ್ಲಿ 25 ಸಾವಿರ ರೂ. ಇದೆ. ರೂರಲ್‌ನಲ್ಲಿ 20 ಸಾವಿರ ರೂ. ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ 20 ಸಾವಿರ ರೂ. ಇದೆ.

ಶ್ರೀ ಸಿದ್ಧರಾಮಯ್ಯ : ರೂರಲ್‌ನಲ್ಲಿ 20 ಸಾವಿರ, ಅರ್ಬನ್‌ನಲ್ಲಿ 25 ಸಾವಿರ ರೂ. ಇದೆ ಎಂದೇ ನಾನು ಹೇಳಿದ್ದು. ಟ್ರಾಕ್ಟರ್‌ಗೆ, ಟಿಲ್ಲರ್‌ಗೆ ಕಡಿಮೆ ಮಾಡಬೇಕೆಂದು ಹೇಳಿದ್ದೀರಿ. ಈಗಾಗಲೇ 4 ಪರ್ಸೆಂಟ್ ಇದೆ. ಅದನ್ನು ಹೆಚ್ಚು ಮಾಡಿಲ್ಲ. ಮುಂದೆ ನಾವು ವ್ಯಾಟ್ ಸಿಸ್ಟಂ ಜಾರಿಗೆ ತರುವಾಗ, ಇದನ್ನೆಲ್ಲಾ ಪರಿಗಣಿಸಿ, ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಮಾಡಲಿಕ್ಕೆ ಅದರ ಬಗ್ಗೆ ಪ್ರಯತ್ನಿಸುತ್ತೇನೆ ಎನ್ನುವುದನ್ನು ಹೇಳುತ್ತೇನೆ. ಹೋಟೆಲ್ ರೂಂಗಳ ಬಾಡಿಗೆ 400 ರೂ. ಇದ್ದದ್ದನ್ನು 150 ರೂ. ಎಗ್ಜೆಂಪ್ಷನ್ ಲೆವೆಲ್‌ಗೆ ಇಳಿಸಿದ್ದೀರಿ, ಎಂದು ಹೇಳಿದರು. ಹೋಟೆಲ್‌ನವರು ಏನು ಮಾಡುತ್ತಿದ್ದಾರೆಂದರೆ, 400 ರೂ. ಇರುವುದನ್ನು 399 ಎಂದು ಮಾಡುತ್ತಿದ್ದಾರೆ. ಆಗ ತೆರಿಗೆಯೇ ಬರುತ್ತಿರಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹೀಗೇ ತೋರಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಅಡ್‌ವೈಸ್ ಅದಲ್ಲ. ಮೊಫ್ಯುಸಿಲ್ ಟೌನ್‌ನಲ್ಲಿ....

ಶ್ರೀ ಸಿದ್ಧರಾಮಯ್ಯ : ಗ್ರಾಮೀಣ ಪ್ರದೇಶಗಳಲ್ಲಿ ಹೇಗೆ ಮಾಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಅಲ್ಲಿ, ಬೆಂಗಳೂರಿನಲ್ಲಿ ವ್ಯತ್ಯಾಸ ನೋಡಿ, ಪರಿಶೀಲನೆ ಮಾಡೋಣ. ಭಾಗ್ಯಜ್ಯೋತಿ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ. ಎಲ್ಲಾ ಮಾಹಿತಿ ತರಿಸಿಕೊಂಡು, ಎಷ್ಟಿದೆ ಎಂದು ನೋಡಿ, ಪರಿಶೀಲನೆ ಮಾಡುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ರದ್ದು ಮಾಡುತ್ತೇವೆಂದು ಹೇಳಿ.

ಶ್ರೀ ಸಿದ್ಧರಾಮಯ್ಯ : ರದ್ದು ಮಾಡುವುದಕ್ಕೆ ಪರಿಶೀಲನೆ ಮಾಡಿ, ಅವರಿಗೆ ಸಹಾಯ ಮಾಡುವ ತೀರ್ಮಾನ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಸ್ಪಷ್ಟವಾಗಿ ಕೇಳಿದೆ, ಕಾಂಟ್ರಾಕ್ಟರ್‌ಗಳಿಗೆ ಪೆಂಡಿಂಗ್ ಬಿಲ್ ಅನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ? ಝಡ್‌ಪಿ ಅಮೌಂಟ್.....

ಶ್ರೀ ಸಿದ್ಧರಾಮಯ್ಯ : ಪಿಡಬ್ಲ್ಯೂಡಿ, ಮೈನರ್ ಇರಿಗೇಷನ್‌ನಲ್ಲಿ 480 ಕೋಟಿ ರೂ.ಗಳ ಬಾಕಿ ಇದೆ. ಇದನ್ನು ಈ ವರ್ಷ ತೀರಿಸಬೇಕೋ ಅಷ್ಟು ತೀರಿಸುತ್ತೇವೆ. ಎಲ್ಲವನ್ನೂ ತೀರಿಸಲೇಬೇಕು. ಇದನ್ನು ತೀರಿಸುವ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಝಡ್‌ಪಿಯಿಂದ ವಾಪಸ್ಸು ತೆಗೆದುಕೊಂಡಿರುವ ಹಣದ ಬಗ್ಗೆ ಹೇಳಿ.

ಶ್ರೀ ಸಿದ್ಧರಾಮಯ್ಯ : ಅದು ಪಿಡಿ ಅಕೌಂಟ್‌ನಲ್ಲಿದೆ. ಅಲ್ಲಿ ಹಣವಿರುವುದಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳುವುದಲ್ಲ. ವಾಸ್ತವವಾಗಿ ಪಿಡಿ ಅಕೌಂಟ್‌ನಲ್ಲಿ ಕ್ಯಾಷ್ ಇರುವುದಿಲ್ಲ. ಬುಕ್‌ನಲ್ಲಿರುವುದಷ್ಟೇ. ಲೆಕ್ಕ ಅದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದರ ಆಧಾರದ ಮೇಲೆ ಕೆಲಸಗಳಾಗಿವೆ. ವರ್ಕ್‌ಗಳಿಗೆ ಬಿಲ್ ಕೊಟ್ಟಿದೆ, ಅದನ್ನು ಕೊಡುವವರಾರು?

ಶ್ರೀ ಸಿದ್ಧರಾಮಯ್ಯ : ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಕೊಡುತ್ತೇವೆ.

ಅಧ್ಯಕ್ಷರು : ಇವರಿಗೆಲ್ಲಾ ಉತ್ತರ ಹೇಳಿದ್ದೀರಾ? ಇನ್ನೂ ಕಲಾಪವಿದೆ.

ಶ್ರೀ ಎಸ್. ರಾಜೇಂದ್ರನ್ : ಮೊನ್ನೆ ನಾನು ಭಾಷಣ ಮಾಡುವಾಗ ಹೇಳಿದ್ದೆ, we are with our Hon'ble Chief Minister ಎಂದು. ನಿಮ್ಮ ಜೊತೆಯಲ್ಲಿ ನಾವಿದ್ದೇವೆ. ನಮಗೆ ಸಹಾಯ ಮಾಡಿ; ನಿಮ್ಮ ಸಹಾಯಕ್ಕೇ ನಾನು ಯಾವಾಗಲೂ ಇರುವುದು. You also admitted that very much. I said 106 people died. ಅವರ ಕುಟುಂಬಕ್ಕೆ ಏನಾದರೂ ಕೊಡಬೇಕಾಗುತ್ತದೆ. ನನ್ನ ಜನರು ಕಾಯುತ್ತಿದ್ದಾರೆ. ನೂರಾರು ಜನರು ಸತ್ತಿದ್ದಾರೆ. You have not given ... Yesterday I have given the clarification. ಬಡ್ಜೆಟ್ ಮೇಲೆ ನಾನು ಇದನ್ನೇ ಕಡಿಮೆ ಮಾಡಿ ಎಂದು ಹೇಳಿಲ್ಲ. You are not able to give Rs. 50 lakhs. ನಾನು ನಿಮ್ಮ ಜೊತೆ ಇದ್ದೇನೆ. ಕ್ಲಾರಿಫಿಕೇಷನ್‌ಗೆ ಬಂದರೆ, ಒಂದು ವಾರ, 10 ದಿವಸ ಅಂದರೆ, the entire MLAs work has been collapsed. ಅದರ ಬಗ್ಗೆ ನಮ್ಮ ಊರಿನಲ್ಲಿ ನೂರಾರು ಜನರು ಸತ್ತಿದ್ದಾರೆ. ಅದಕ್ಕೇನು ಪರಿಹಾರ ಮಾಡುತ್ತೀರಿ? ಅದರ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿದ್ಧರಾಮಯ್ಯ : ಪರಿಹಾರ ಕೊಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಹೆಚ್.ಎಂ. ವಿಶ್ವನಾಥ್ : ಕಾಫಿ ಬೆಳೆಗಾರರ ಬಗ್ಗೆ, ಅದರ ಸಾಲದ ಬಗ್ಗೆ ಎಲ್ಲಿಯೂ ಪ್ರಸ್ತಾಪವಿಲ್ಲ. ಹಣಕಾಸು ಸಚಿವರು ಇದರ ಬಗ್ಗೆ ಗಮನಹರಿಸಿ, ನಮ್ಮ ಬೆಳೆಗಾರರನ್ನೂ ಉಳಿಸಬೇಕೆಂದು ಕೇಳುತ್ತೇನೆ. ನಾವು ಭಾರೀ ನಿರೀಕ್ಷೆ ಮಾಡಿದ್ದೇವೆ. ಪಶ್ಚಿಮಘಟ್ಟದವರು ನಿಮ್ಮ ಬಗ್ಗೆ ಭಾರೀ ಅಭಿಮಾನವಿಟ್ಟುಕೊಂಡು ನೋಡುತ್ತಿದ್ದೇವೆ. ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹಣಕಾಸು ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್ : ನಾನು ಮುಖ್ಯಮಂತ್ರಿಗಳಲ್ಲಿ ಹಾಗೂ ವಿತ್ತ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ, ಯಾವುದೇ ಟ್ಯಾಕ್ಸ್‌ನ್ನು ಕಡಿಮೆ ಮಾಡಿ ಎಂದು ಕೇಳುತ್ತಿಲ್ಲ. ಕನ್ನಡ ಚಿತ್ರರಂಗದ ಪರವಾಗಿ, ಕನ್ನಡ ಸಿನಿಮಾಗಳು ಕನ್ನಡ ಚಿತ್ರಗಳು, ಬದುಕಬೇಕು ಎನ್ನುವ ಆಶಯವನ್ನು ಇಟ್ಟುಕೊಂಡು ಪುಟ 116 ರಲ್ಲಿ....

ಅಧ್ಯಕ್ಷರು : ನೀವು ಏನು ಭಾಷಣ ಮಾಡುತ್ತೀರೇನ್ರೀ.. ಕ್ಲಾರಿಫಿಕೇಷನ್ ಕೇಳಿ...

ಶ್ರೀ ಬಿ.ಸಿ. ಪಾಟೀಲ್ : ಭಾಷಣ ಅಲ್ಲ ಸಾರ್. 70 ರಿಂದ 40 ಕ್ಕೆ ಏನು ತೆರಿಗೆ ಇಳಿಸಿದ್ದಾರೆ ಆ ತೆರಿಗೆಯನ್ನು ಏರಿಸಬೇಕು, 70 ಅಲ್ಲ 75ಕ್ಕೆ ಏರಿಸಬೇಕು, ಅದರಿಂದ ಕನ್ನಡ ಚಿತ್ರರಂಗ ಉಳಿಯುತ್ತದೆ, ಕರ್ನಾಟಕ ಸರ್ಕಾರಕ್ಕೆ ಹೆಚ್ಚಿನ ಆದಾಯ ಕೂಡ ಬರುತ್ತದೆ. ಇಲ್ಲಾಂದ್ರೆ ಕನ್ನಡ ಚಿತ್ರರಂಗ ಸಂಪೂರ್ಣವಾಗಿ ನಾಶವಾಗಿ ಹೋಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಕಾಫಿ ಬೆಳೆಗಾರರ ಬಗ್ಗೆ ಮಾನ್ಯ ವಿಶ್ವನಾಥ್‌ರವರು ಪ್ರಸ್ತಾಪಿಸಿದ್ದಾರೆ ನಾನು ಅದನ್ನು, ಮುಖ್ಯಮಂತ್ರಿಗಳನ್ನು ಹಾಗೂ ನನ್ನನ್ನೂ ಕೂಡ ಬಂದು ಭೇಟಿ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಅದನ್ನು ಪರಿಶೀಲನೆ ಮಾಡಿ ಅವರಿಗೆ ಏನು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಮಾಡುತ್ತೇನೆ. ಮತ್ತೆ ಕಬ್ಬು ಬೆಳೆಗಾರರದ್ದು ಇದೆಯಲ್ಲಾ. ಕಬ್ಬು ಬೆಳೆಗಾರರಿಗೆ ಸಂಬಂಧಪಟ್ಟಂತೆ ಎಲ್ಲರನ್ನೂ ಸಭೆ ಕರೆಯುತ್ತೇನೆ... ಕಬ್ಬಿನ ಬೆಲೆಗಳು ಹೆಚ್ಚಾಗಬೇಕು ಎಂದು ಹೇಳುತ್ತಿದ್ದಾರೆ, ಶುಗರ್‌ಕೇನ್‌ಗೆ ಹಾಗೂ ಶುಗರ್‌ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ಆ ಭಾಗದ ಎಲ್ಲಾ ಎಂಎಲ್‌ಎ ಹಾಗೂ ರೈತರನ್ನು ಅಧಿವೇಶನದ ಮುಗಿದ ನಂತರ ಒಂದು ಮೀಟಿಂಗ್ ಮಾಡಿ ಅದರ ಮೇಲೆ ತೀರ್ಮಾನ ಮಾಡುತ್ತೇವೆ ಎನ್ನುವ ಮಾತನ್ನೂ ಕೂಡ ತಿಳಿಸುತ್ತೇನೆ.

ಅಧ್ಯಕ್ಷರು : ಆಯಿತು. ಎಲ್ಲಾ ಕುಳಿತುಕೊಳ್ಳಿ. ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ, ನೀವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಡೀಸೆಲ್ ಮೇಲೆ ರಿಯಾಯಿತಿ ಕೊಡುವುದು, ಮೀನುಗಾರರು ಉಪಯೋಗಿಸುವಂಥ ಬೋಟ್‌ಗಳಿಗೆ, ಅದು 50 ಸಾವಿರ ರೂಪಾಯಿದವರೆಗೆ ಇದೆ, ಅದನ್ನು ಹೆಚ್ಚು ಮಾಡಬೇಕು ಎನ್ನುತ್ತಿದ್ದಾರೆ, ಇದು ಎಂಟು ತಿಂಗಳ ಬಜೆಟ್ ಆಗಿರುವುದರಿಂದ, ಮುಂದೆ ಅದನ್ನು ಹೆಚ್ಚು ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಅವರಿಗೆ ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜುಂಡಪ್ಪನವರ ವರದಿಯನ್ನಾಧರಿಸಿ...

ಶ್ರೀ ಸಿದ್ಧರಾಮಯ್ಯ : ಕನ್ನಡೇತರರ ಸಿನಿಮಾಗಳಿಗೆ 70 ಪರ್ಸೆಂಟ್‌ನಿಂದ 40 ಪರ್ಸೆಂಟ್ ವರೆಗೆ ಇದೆ. ಬೇರೆ ರಾಜ್ಯದಲ್ಲಿ 30,25 ಪರ್ಸೆಂಟ್ ಇದೆ, ಆ ರಾಜ್ಯದಲ್ಲಿರತಕ್ಕಂಥ ಭಾಷೆಗೆ ಬಿಟ್ಟು ಬೇರೆ ಭಾಷೆಗಳಿಗೆ. ಅದರಿಂದ 70 ಇರುವುದನ್ನು 40 ಮಾಡಿದ್ದೇವೆ, ಕನ್ನಡಕ್ಕೆ ನೂರಕ್ಕೆ ನೂರು ರಿಯಾಯಿತಿ ಇದೆ, ನಾವು ಹಿಂದೆ ಇದ್ದಾಗಲೇ ನೂರಕ್ಕೆ ನೂರು ರಿಯಾಯಿತಿಯನ್ನು ಮಾಡಿದ್ದೇವೆ, ಆದುದರಿಂದ ಮುಂದೆ ಸಿನಿಮಾ ಇಂಡಸ್ಟ್ರೀಸ್‌ನವರೆಲ್ಲರನ್ನೂ ಕರೆದು ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ, ಮುಂದೆ ಹೊಸ ಪಾಲಿಸಿ ಮಾಡುತ್ತೇವೆ...

6. ನಿಯಮಗಳಿಗೆ ತಿದ್ದುಪಡಿ

ಅಧ್ಯಕ್ಷರು : ಈಗ ನಿಯಮಗಳಿಗೆ ಕೆಲವು ತಿದ್ದುಪಡಿಗಳು, ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 361ರನ್ವಯ ನೀಡಿರುವ ಪ್ರಸ್ತಾವನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಇಲಾಖಾ ವಿಷಯ ಸಮಿತಿಗಳಿಗೆ ಸಂಬಂಧಿಸಿದಂತೆ ನಿಯಮ 293 ರಿಂದ 300 ರವರೆಗಿನ ನಿಯಮಗಳನ್ನು 2004–05ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಸಂಬಂಧಿಸಿದಂತೆ ತಡೆಹಿಡಿಯುವ ಬಗ್ಗೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು